ಸಂಪುಟ 15
ಸಂಚಿಕೆ 3

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

17 ಜನವರಿ 1993
ರೂ. 2.00

ಧಗ ಧಗನೆ ಉರಿಯುತ್ತಿರುವ ಮುಂಬೈ

ಡಿಸೆಂಬರ್ 6 ರ ಘಟನೆ ಹಚ್ಚಿದ ಉರಿ ಸುಮಾರು ಒಂದು ವಾರ ಎರಡು ಸಾವಿರದಷ್ಟು ಮುಗ್ಧರ ಬಲಿ ತೆಗೆದುಕೊಂಡು ಇನ್ನೇನು ತಣ್ಣಗಾಯಿತು ಎಂದು ಜನ ನಿಟ್ಟುಸಿರು ಬಿಡುವಷ್ಟರಲ್ಲಿ ಮತ್ತೊಮ್ಮೆ ಭುಗಿಲೆದ್ದಿತು. ನಾಚಿಕೆಗೇಡಿ ಘಟನೆ ನಡೆದು ಸರಿಯಾಗಿ ಒಂದು ತಿಂಗಳಾದ ದಿನ - ಜೂನ್ 6 ರಂದು ಭಾರತದ ಎರಡು ಅತ್ಯಂತ ಮುಂದುವರಿದ ಕೈಗಾರಿಕಾನಗರಗಳಾದ ಮುಂಬೈ ಮತ್ತು ಅಹಮದಾಬಾದ್‌ಗಳಲ್ಲಿ ಮತ್ತೆ ಆರಂಭವಾದ ಕೋಮುವಾದಿಗಳ ಸಾವಿನ ತಾಂಡವ ಒಂದು ವಾರ ಅವ್ಯಾಹತವಾಗಿ ಸಾಗಿ ಮುಂಬೈಯೊಂದರಲ್ಲೇ 500 ಕ್ಕೂ ಹೆಚ್ಚು ಜನಗಳ ಬಲಿತೆಗೆದುಕೊಂಡಿದೆ. ದಶಕಗಳಿಂದ ತಮ್ಮ ನೆಲೆವೀಡಾಗಿ ಮಾಡಿ ಮುಂಬೈಯ ಆರ್ಥಿಕದ ಪ್ರತ್ಯೇಕಿಸಲಾಗದ ಅಂಗವಾಗಿಬಿಟ್ಟಿದ್ದ 20 ಸಾವಿರದಷ್ಟು ಜನರನ್ನು ಹೊಡೆದು ಓಡಿಸಿದ್ದಾರೆ. ಇನ್ನೂ ಪರಿಸ್ಥಿತಿ ಸಂಪೂರ್ಣ ಹತೋಟಿಗೆ ಬರುವ ಲಕ್ಷಣಗಳಿಲ್ಲ. ಆದ್ದರಿಂದಲೇ ರಾಷ್ಟ್ರೀಯರಂಗ-ಎಡರಂಗದ ಮುಖಂಡರು ಜನವರಿ 13 ರಂದು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಮುಂಬೈಯಲ್ಲಿ ಭಾಗಶಃ ತುರ್ತು ಪರಿಸ್ಥಿತಿ ತಂದು ಜನರಿಗೆ, ಮುಖ್ಯವಾಗಿ ಅಲ್ಪಸಂಖ್ಯಾತರಿಗೆ ದುಷ್ಟ ಕಾವಿ ಪಡೆಗಳಿಂದ ರಕ್ಷಣೆ ಕೊಡಬೇಕೆಂದು ಆಗ್ರಹ ಪಡಿಸಿದ್ದಾರೆ.

ಈ ಸಾವಿನ ತಾಂಡವದ ಸೂತ್ರಧಾರರು ಯಾರು ಎಂಬುದು ಡಿಸೆಂಬರ್ 6 ರ ಘಟನೆಯ ಸೂತ್ರಧಾರರು ಯಾರು ಎಂಬಂತೆ ಎಲ್ಲರಿಗೂ ತಿಳಿದಿರುವ ಬಹಿರಂಗ ಸಂಗತಿ. ಬಿ.ಜೆ.ಪಿ.ಯ ಮರಾಠೀ ಸ್ನೇಹಿತ ಶಿವಸೇನೆ ಮುಂಬೈ ತನ್ನ 300 ವರ್ಷಗಳ ಇತಿಹಾಸದಲ್ಲೇ ಕಂಡು ಕೇಳರಿಯದ ಬರ್ಬರ ಕೃತ್ಯಗಳನ್ನು ನಡೆಸಿದೆ ಎಂದು ದೇಶದ ಎಲ್ಲ ಪತ್ರಿಕೆಗಳೂ ಆರಂಭದಿಂದಲೇ ಸ್ಪಷ್ಟವಾಗಿ ಗುರುತಿಸಿವೆ. ಈಗ ಸ್ವತಃ ಶಿವಸೇನೆಯೇ ಕಾವಿಪಡೆಗಳ ಎಂದಿನ ಭಂಡತನದಿಂದ ಈ ರಾಕ್ಷಸೀ ಕೃತ್ಯ ತಾನೆ ಮಾಡಿದ್ದೆಂದು ದೆನ್ನು ತಟ್ಟಿಕೊಂಡಿದೆ! ಡಿಸೆಂಬರ್ 6 ಸಾಮಾನ್ಯವಾದುದಕ್ಕಿಂತ ತುಸು ಹೆಚ್ಚು ಗಂಭೀರವಾದ ಘಟನೆಯಷ್ಟೇ ಎಂದು ನಂಬಿದ್ದವರನ್ನು ಇದು ಅಲುಗಾಡಿಸಿದೆ. ಬಿ.ಜೆ.ಪಿ. ನೇತೃತ್ವದ ಕಾವಿಪಡೆಗಳ ದುರುಳತನ, ಅದು ದೇಶಕ್ಕೆ ಒಡ್ಡಿದ ಅಪಾಯ ಎಷ್ಟು ಆಳವಾದದ್ದು ಎಂಬುದು ಈಗಲಾದರೂ ಹಲವರ ಅರಿವಿಗೆ ಬಂದಿದೆ. ಬಜಾಜ್, ಟಾಟಾಗಳಂತಹವರಿಗೂ ಇದುವರೆಗೆ ಸುಮ್ಮನಿದ್ದ ದೊಡ್ಡ-ದೊಡ್ಡ ಕೈಗಾರಿಕೋದ್ಯಮಿಗಳು ನಾನಾ ಪಾಲ್ಖಿವಾಲರಂತಹವರಿಗೂ ಈಗ ತಮ್ಮ ಉತ್ಕೃಷ್ಟ ರಾಜರಸ್ತೆಗಳಿಗೇ ಈ ಪಿಡುಗು ತಟ್ಟಲಾರಂಭಿಸಿದಾಗ ದೇಶ ಎಂತಹ ಘೋರ ಪರಿಸ್ಥಿತಿಯಲ್ಲಿದೆ ಎಂಬ ಅರಿವು ಬಂದು ಆತಂಕ ವ್ಯಕ್ತಪಡಿಸುವಂತಾಗಿದೆ.

ಕಾವಿ ಪಡೆಗಳ ಡಿಸೆಂಬರ್ 6 ರ ಮೊದಲ ಹಾಗೂ ನಂತರದ ಹಸಿ-ಹಸಿ ಸುಳ್ಳುಗಳನ್ನು ಸಮರ್ಥಿಸಿಕೊಳ್ಳಲು ಜೈಲಿನಿಂದ ಬಿಡುಗಡೆಯಾದ ಕೂಡಲೇ

ಪುಟ 8ಕ್ಕೆ............

ಎಡಪಕ್ಷಗಳಿಂದ ಪ್ರಧಾನಿ ಭೇಟಿ :
ತುರ್ತು ಪರಿಸ್ಥಿತಿ ತರಲು ಆಗ್ರಹ

ಪ್ರಧಾನಮಂತ್ರಿಗಳನ್ನು ಜನವರಿ 12 ರಂದು ಭೇಟಿಯಾದ ಸಿಪಿಐ(ಎಂ) ಹಾಗೂ ಸಿಪಿಐ ಮುಖಂಡರು ಅವರಿಗೆ ಒಂದು ಮನವಿ ಸಲ್ಲಿಸುತ್ತಾ ಮುಂಬೈಯಲ್ಲಿ ಪೂರ್ಣ ಒಂದು ವಾರ ವ್ಯಾಪಕ ಹಿಂಸಾಚಾರ ನಡೆಯುತ್ತಿದ್ದರೂ ಮಹಾರಾಷ್ಟ್ರ ಸರ್ಕಾರ ಅದನ್ನು ತಡೆಯುವಲ್ಲಿ ಸಂಪೂರ್ಣ ವಿಫಲಗೊಂಡಿದೆ. ನಾಗರಿಕರ ಜೀವ- ಆಸ್ತಿಗಳನ್ನು ರಕ್ಷಿಸುವ ಪ್ರಾಥಮಿಕ ಕರ್ತವ್ಯವನ್ನು ಕೂಡಾ ನೆರವೇರಿಸಲಾಗದಷ್ಟು ತೀರಾ ಅಸಮರ್ಥತೆಯನ್ನು ಮಹಾರಾಷ್ಟ್ರದ ಮುಖ್ಯಮಂತ್ರಿ ತೋರಿಸಿ

ಪುಟ 8 ಕ್ಕೆ............

ಮುಂಬೈ ಸಾಕಪ್ಪಾ! - 20 ಸವಿರ ಮಂದಿ ಈ ಒಂದು ವಾರದಲ್ಲಿ ಮುಂಬೈ ಬಿಟ್ಟು ತಮ್ಮ-ತಮ್ಮ ಊರುಗಳಿಗೆ ಪಲಾಯನ ಮಾಡಬೇಕಾಗಿ ಬಂದಿದೆ. ಅಯೋಧ್ಯಾ ಆಂದೋಲನ ವಿಚ್ಛಿದ್ರಕಾರಿ ಶಕ್ತಿಗಳಿಗೆ ಸವಾಲೊಡ್ಡಿದೆ ಎಂದು ದಿಲ್ಲಿಯಲ್ಲಿ ಅಡ್ವಾಣಿಯವರು ಬೆನ್ನು ತಟ್ಟಿಕೊಳ್ಳುತ್ತಿರುವಾಗ ಮುಂಬೈಯಲ್ಲಿ ಈ ದೃಶ್ಯ!



ರಾಷ್ಟ್ರೀಯ ಏಕತಾ ಆಂದೋಳನಕ್ಕೆ ದೇಶಾದ್ಯಂತ ಬೆಂಬಲ

(ಐ.ಎನ್.ಎನ್.) ಸುದ್ದಿ

ರಾಷ್ಟ್ರೀಯ ಏಕತಾ ಆಂದೋಳನದ ಪ್ರತಿಜ್ಞೆಗೆ ಸಾಮೂಹಿಕ ಸಹಿಸಂಗ್ರಹಣಾ ಪ್ರಚಾರ ಕಾರ್ಯಕ್ರಮ ಜನವರಿ 4 ರಂದು ಬೆಳಿಗ್ಗೆ 11 ಗಂಟೆಗೆ ನವದೆಹಲಿಯ 'ಗಾಂಧೀ ಸ್ಮೃತಿ'ಯಲ್ಲಿ ವಿಧ್ಯುಕ್ತವಾಗಿ ಆರಂಭಗೊಂಡಿದೆ. ಗಾಂಧೀಜಿಯವರು ಹಿಂದೂ ಕೋಮುವಾದಿಯ ಗುಂಡಿಗೆ ಬಲಿಯಾದ ಈ ಸ್ಥಳದಲ್ಲಿ ದೇಶದ ಜಾತ್ಯತೀತ ವಿರೋಧ ಪಕ್ಷಗಳ ಹಾಗೂ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ಮುಖಂಡರು ಈ ಪ್ರತಿಜ್ಞೆಗೆ ಸಹಿ ಹಾಕಿದರು.

ರಾಷ್ಟ್ರೀಯ ಏಕತಾ ಆಂದೋಳನ ಡಿಸೆಂಬರ್ 19 ರಂದು 15 ಜಾತ್ಯತೀತ ಪಕ್ಷಗಳು, 30 ಕ್ಕೂ ಹೆಚ್ಚು ಸಾಮೂಹಿಕ ಸಂಘಟನೆಗಳು ಹಾಗೂ ಹಲವು ಪ್ರತಿಷ್ಠಿತ ವ್ಯಕ್ತಿಗಳು ಭಾಗವಹಿಸಿದ್ದ ಸಮಾವೇಶದಲ್ಲಿ ಆರಂಭಗೊಂಡಿತ್ತು. ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ನಡೆದ ಭಯಾನಕ ಘಟನೆಗಳ ಹಿನ್ನೆಲೆಯಲ್ಲಿ ಜಾತ್ಯತೀತತೆ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಎತ್ತಿಹಿಡಿಯಲು ಈ ಆಂದೋಳನ ಆರಂಭವಾಗಿದೆ. ಸಾಮೂಹಿಕ ಸಹಿ ಸಂಗ್ರಹಣಾ ಚಳುವಳಿ ಈ ಆಂದೋಳನದ ಒಂದು ಪ್ರಮುಖ ಭಾಗ.

ಆಂದೋಳನದ ಪರವಾಗಿ ಮಾತನಾಡುತ್ತಾ ಸಿಪಿಐ ಮುಖಂಡ ಎ.ಬಿ. ಬರ್ಧನ್ ಕನಿಷ್ಠ 5 ಕೋಟಿ ಸಹಿ ಸಂಗ್ರಹಿಸಿ ಭಗತ್‌ಸಿಂಗ್ ಹುತಾತ್ಮರಾದ ದಿನವಾದ ಮಾರ್ಚ್ 23 ರಂದು ರಾಷ್ಟ್ರಪತಿಗಳಿಗೆ ಸಲ್ಲಿಸಲಾಗುವುದು ಎಂದು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು. ಜನವರಿ 4 ಗಾಂಧೀಜಿ ದೇಶದ ಸ್ವಾತಂತ್ರ್ಯಕ್ಕಾಗಿ ಅಸಹಕಾರ ಆಂದೋಲನ ಆರಂಭಿಸಿದ ದಿನದ 60 ನೇ ವಾರ್ಷಿಕೋತ್ಸವದ ದಿನ. ಪ್ರತಿಜ್ಞೆಯ ಸಾವಿರಾರು ಪ್ರತಿಗಳನ್ನು ಮುದ್ರಿಸಲಾಗಿದೆ. ಆದರೂ ಸಂಘಟನೆಗಳು, ವ್ಯಕ್ತಿಗಳು ತಾವೇ ಈ ಪ್ರತಿಜ್ಞೆಯ ಪ್ರತಿಗಳನ್ನು ಮುದ್ರಿಸಿ ಸಹಿ ಸಂಗ್ರಹಿಸಿ ರಾಷ್ಟ್ರೀಯ ಏಕತಾ ಆಂದೋಳನದ ರಾಷ್ಟ್ರೀಯ ಕಚೇರಿ 4, ಪುರಾನಾ ಕಿಲಾ ರಸ್ತೆ, ನವದೆಹಲಿ ಇಲ್ಲಿ ಕಳಿಸಬೇಕೆಂದು ಬರ್ಧನ್ ಮನವಿ ಮಾಡಿದರು. ಈ ಪ್ರತಿಜ್ಞಾ ಪತ್ರಗಳನ್ನು ನಂತರ ಟ್ರಕ್ಕುಗಳಲ್ಲಿ ತುಂಬಿಕೊಂಡು ರಾಷ್ಟ್ರಪತಿ ಭವನಕ್ಕೆ ಒಯ್ಯಲಾಗುವುದು, ಎಂದು ಅವರು ಹೇಳಿದರು.

ನಂತರ ಹಿರಿಯ ಗಾಂಧೀವಾದಿ ಬಿ.ಎನ್.ಪಾಂಡೆ ಪ್ರತಿಜ್ಞೆಯನ್ನು ಓದಿದರು. ಗಾಂಧೀಜಿ ಹುತಾತ್ಮರಾದ ಸ್ಥಳದಲ್ಲಿ ನೆರೆದ ಎಲ್ಲರೂ ಕೂಡಾ ಅದನ್ನು ಗಟ್ಟಿಯಾಗಿ ಓದಿದರು.

ರಾಜಕೀಯ ಮುಖಂಡರಲ್ಲದೆ ಹಲವಾರು ಶಾಲಾ ವಿದ್ಯಾರ್ಥಿಗಳು, ಕಾರ್ಮಿಕ ಸಂಘಟನೆಗಳ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳ ಪ್ರತಿನಿಧಿಗಳು, ದೇಶಪ್ರೇಮಿ ವ್ಯಕ್ತಿಗಳು ಈ ಸಮಾರಂಭದಲ್ಲಿ ಭಾಗವಹಿಸಿದರು. ಜನವರಿ 4 ರಂದು ಈ ಪ್ರತಿಜ್ಞೆಗೆ ಸಹಿ ಹಾಕಿದವರಲ್ಲಿ ಜನತಾದಳ ಮುಖಂಡರಾದ ವಿ.ಪಿ. ಸಿಂಗ್. ರಾಮ್‌ವಿಲಾಸ್‌ಪಾಸ್ವಾನ್, ಐ.ಕೆ. ಗುಜ್ರಾಲ್, ಮಧು ದಂಡವತೆ, ಜಯಪಾಲರೆಡ್ಡಿ, ಅಜಿತ್‌ಸಿಂಗ್, ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ, ಸಿಪಿಐ ಮುಖಂಡರಾದ ಎಂ. ಫಾರುಕಿ, ಎಂ.ಬಿ. ಬರ್ಧನ್ ಗೀತಾ ಮುಖರ್ಜೀ, ಫಾರ್ವರ್ಡ್ ಬ್ಲಾಕ್ ಚಿತ್ತ ಬಸು, ಆರ್.ಎಸ್. ಪಿ.ಐ. ಅಂಬನಿರಾಯ್ ಹಾಗೂ ಸುಭದ್ರಾ ಜೋಷಿ, ಬಿ.ಎನ್. ಪಾಂಡೆ ಯವರಂತಹ ಹಿರಿಯ ಗಾಂಧೀವಾದಿಗಳು ಪ್ರಮುಖರು.

ಸಿಐಟಿಯು ಕಾರ್ಯದರ್ಶಿ ಪಿ.ಕೆ. ಗಂಗೂಲಿ, ಡಿ.ವೈ.ಎಫ್.ಐ. ಪ್ರಧಾನಕಾರ್ಯದರ್ಶಿ ಮಹಮ್ಮದ್ ಸಲೀಂ, ಎಸ್.-ಎಫ್.ಐ. ಪ್ರಧಾನ ಕಾರ್ಯದರ್ಶಿ ನಿಲೋತ್ಪಲ ಬಸು, ಎ. ಐ.ಕೆ.ಎಸ್. ಕಾರ್ಯದರ್ಶಿ ಎಸ್.ಕೆ. ಶುಕ್ಲಾ ಹಾಗೂ ಎ.ಐ.ಡಿ.ಡಬ್ಲ್ಯು.ಎ. ಕಾರ್ಯದರ್ಶಿ ಬೃಂದಾ ಕಾರತ್ ಮುಂತಾದ ಸಾಮೂಹಿಕ ಸಂಘಟನೆಗಳ ಅಖಿಲ ಭಾರತ ಮುಖಂಡರು ಈ ಸಮಾರಂಭದಲ್ಲಿ ಹಾಜರಿದ್ದರು.

ಜನವರಿ 13 ರಂದು ಕರ್ನಾಟಕದಲ್ಲಿ ಆರಂಭ

ಸಾಮೂಹಿಕ ಸಹಿ ಸಂಗ್ರಹಣಾ ಚಳುವಳಿ ಕರ್ನಾಟಕದಲ್ಲಿ ಜನವರಿ 13 ರ ಸಂಜೆ 5 ಗಂಟೆಗೆ ಬೆಂಗಳೂರಿನ ಗಾಂಧೀ ಪ್ರತಿಮೆಯ ಸಮ್ಮುಖ ನಡೆದ ಒಂದು ಸಮಾರಂಭದಲ್ಲಿ ಆರಂಭವಾಯಿತು. ಜನವರಿ 13 ಬಂಗಾಳದ ನೌಖಾಲಿಯಲ್ಲಿ ಗಾಂಧೀಜಿ 1948 ರಲ್ಲಿ ಕೋಮುಸಾಮರಸ್ಯಕ್ಕಾಗಿ ಉಪವಾಸ ಕೈಗೊಂಡ ದಿನ. ಜನತಾದಳ ಹಿರಿಯ ಮುಖಂಡ ಜೆ.ಹೆಚ್.ಪಟೇಲ್ ಗಾಂಧೀಜಿ ಪ್ರತಿಮೆಗೆ ಹೂಮಾಲೆ ಅರ್ಪಿಸುವುದರೊಂದಿಗೆ ಆರಂಭವಾದ ಈ ಸಮಾರಂಭದಲ್ಲಿ ಜನತಾದಳ, ಸಿಪಿಐ(ಎಂ), ಸಿಪಿಐ, ಎಸ್.ಜೆ.ಪಿ., ಡಿ.ಎಂ.ಕೆ.ಯ ರಾಜ್ಯ ಮುಖಂಡರು ಹಾಗೂ ಕಾರ್ಯಕರ್ತರು ಮತ್ತು ಆಸಕ್ತ ದೇಶಪ್ರೇಮಿ ವ್ಯಕ್ತಿಗಳು ಭಾಗವಹಿಸಿದ್ದರು. ಸಿಪಿಐ ಮುಖಂಡ ವೆಂಕಟರಾಂ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಸಿಪಿಐ(ಎಂ) ಸೆಕ್ರಟಾರಿಯೇಟ್ ಸದಸ್ಯ ಸೂರ್ಯನಾರಾಯಣರಾವ್ ಮತ್ತಿತರ ಮುಖಂಡರು ಮಾತನಾಡಿ ಈ ಸಹಿ ಸಂಗ್ರಹಣಾ ಚಳುವಳಿಯಲ್ಲಿ ಕನಿಷ್ಟ 25 ಲಕ್ಷ ಸಹಿ ಸಂಗ್ರಹಿಸಿ ಅಯೋಧ್ಯೆಯ ಧ್ವಂಸಕಾರ್ಯಕ್ಕೆ ಬಹುಪಾಲು ಜನಗಳ ಬೆಂಬಲವಿದೆಯೆಂದು ಬಿ.ಜೆ.ಪಿ. ಯ ಅಪಪ್ರಚಾರವನ್ನು ಬಯಲಿಗೆಳೆಯಬೇಕು, ಮನೆ-ಮನೆಗೆ ಹೋಗಿ ಕೋಮುವಾದಿಗಳ ಸುಳ್ಳುಗಳ ವಿಷ ಪ್ರಚಾರದ ಅಪಾಯಗಳ ಬಗ್ಗೆ ಜನಗಳಿಗೆ ತಿಳಿ ಹೇಳಬೇಕು, ಈ ದೇಶದ ಐಕ್ಯ

ಪುಟ 8 ಕ್ಕೆ............

ಅಕ್ಕಿ-ಗೋಧಿ ಬೆಲೆಯೇರಿಕೆ ಪಿ.ಬಿ. ಪ್ರತಿಭಟನೆ

ಕೇಂದ್ರ ಸರಕಾರ ರೇಶನ್ ವ್ಯವಸ್ಥೆಯ ಮೂಲಕ ವಿತರಿಸುವ ಗೋಧಿಯ ಬೆಲೆಯನ್ನು 18 ಶೇ. ರಷ್ಟು ಅಕ್ಕಿಯ ಬೆಲೆಯನ್ನು 14 ಶೇ. ರಷ್ಟು ಹೆಚ್ಚಿಸಲು ಮಾಡಿರುವ ನಿರ್ಣಯವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ವಿರೋಧಿಸಿದೆ. ಇದರಿಂದ ರೇಶನ್ ಆಹಾರಧಾನ್ಯಗಳ ಬೆಲೆಯಲ್ಲಿ ಹಿಂದೆಂದೂ ಕಾಣದ ಬೆಲೆಯೇರಿಯಾಗುತ್ತದಷ್ಟೇ ಅಲ್ಲ. ಬಹಿರಂಗ ಮಾರುಕಟ್ಟೆಯಲ್ಲಿಯೂ ಬೆಲೆಯೇರಿ ಹಣದುಬ್ಬರ ವಿಪರೀತ ಹೆಚ್ಚುತ್ತದೆ. ಹೊರೆಯನ್ನು ಜನಸಾಮಾನ್ಯನ ತಲೆಯ ಮೇಲೆ ದಾಟಿಸುವ ಒಂದು ಉದ್ದೇಶಪೂರ್ವ ಪ್ರಯತ್ನದ ಭಾಗ ಇದು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಮೊದಲು ಕೇಂದ್ರ ಸರಕಾರ ರಸಗೊಬ್ಬರಗಳ ಮೇಲಿನ ಸಬ್ಸಿಡಿ ಕಡಿತ ಮಾಡಿ, ಕೆಲವು ರಸಗೊಬ್ಬರಗಳ ಬೆಲೆಗಳ ಮೇಲಿನ ಹತೋಟಿ ತೆಗೆದು, ನಂತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಏರಿಸಿ ಕೃಷಿಯ ಖರ್ಚನ್ನು ಹೆಚ್ಚಿಸಿತು. ಇದರಿಂದ ಹಿಂಗಾರು ಬೆಳೆಗಳ ಬೆಲೆಗಳಲ್ಲಿ 13 ರಿಂದು 25 ರಷ್ಟು ಭಾರೀ ಹೆಚ್ಚಳ ಮಾಡಿದೆ.

ಇವನ್ನೆಲ್ಲಾ ಸರಕಾರ ಹೊಸ ಆರ್ಥಿಕ ನೀತಿಗಳ ಭಾಗವಾಗಿ ಐ.ಎಂ.ಎಫ್. ವಿಶ್ವಬ್ಯಾಂಕ್ ಆದೇಶಕ್ಕೆ ಅನುಗುಣವಾಗಿ ಮಾಡುತ್ತಿದೆ ಎಂದು ಪಿ.ಬಿ. ಆಪಾದಿಸಿದೆ.

ಜನಗಳ ಮೇಲೆ ಈ ಹೊಸ ಹೊರೆಗಳನ್ನು ಹಾಕುವ ಕೇಂದ್ರ ಸರಕಾರದ ಪ್ರಯತ್ನಗಳನ್ನು ವಿರೋಧಿಸಬೇಕೆಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

ವಾರದ ನುಡಿ

ವಿದೇಶಗಳಲ್ಲಿ ಭಾರತದ ಸ್ಥಾನಮಾನಕ್ಕೆ ಬಹಳ ತೀವ್ರ ಧಕ್ಕೆ ಬಂದಂತೆ ಕಾಣುತ್ತದೆ. ಆದರೆ ದೇಶದೊಳಗೆ ಆಗಿರುವ ಅನಾಹುತದ ಎದುರು ಅದು ಏನೂ ಅಲ್ಲ.

......ಅದಕ್ಕಿಂತಲೂ ಹೆಚ್ಚಿನ ಅಮೂಲ್ಯ ವಸ್ತುವಿಗೆ ಅಪಾರ ಧಕ್ಕೆ ಬಂದಿದೆ. ಬಹುಶಃ ಅದನ್ನು ರಿಪೇರಿ ಮಾಡಲು ಸಾಧ್ಯವಿಲ್ಲ. ಅದೆಂದರೆ ಹಿಂದೂವೆಂಬ ನನ್ನ ಅಭಿಮಾನಕ್ಕೆ ಬಂದಿರುವ ಕಳಂಕ. ನೀವು ನಂಬಬಹುದಾದಕ್ಕಿಂತ ಹೆಚ್ಚು ಸಂಖ್ಯೆ ಹಿಂದೂಗಳ ಪರವಾಗಿ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ.

-ಖ್ಯಾತ ಪತ್ರಕರ್ತ ಪ್ರೇಮ ಶಂಕರ್ ಝಾ
"ಹಿಂದೂ"(13-1-1993) ಪತ್ರಿಕೆಯಲ್ಲಿ
ಅಡ್ವಾಣಿಯವರಿಗೆ ಬರೆದ ಬಹಿರಂಗ ಪತ್ರದಲ್ಲಿ

"ಕನಸುಗಾರರಲ್ಲದವರಿಂದ ಕ್ರಾಂತಿ ಸಾಧ್ಯವಿಲ್ಲ" ಎನ್ನುವ ಸು.ರಂ. ಎಕ್ಕುಂಡಿ

ಕನ್ನಡದಲ್ಲಿ ಈ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ಕವಿ ಸು.ರಂ.ಎಕ್ಕುಂಡಿ ಬಗ್ಗೆ ಬರೆಯುತ್ತಾರೆ ಜಿ.ಎನ್.ಮೋಹನ್

ನಂ. 4, ಆಂಡರ್ಸನ್ ಬೀದಿಯಲ್ಲಿ ತೊಟ್ಟಿಲು, ಹಾಸಿಗೆ ಮಪ್ಪಟಗಳು, ಲಾಲಿಯ ಹಾಡುಗಳು ಹರಾಜಾಗುತ್ತಿರುವುದನ್ನು ಮಃಖದಿಂದ ನೋಡುತ್ತಾ ನಿಂತಿರುವ ಕಾರ್ಲ್‌ಮಾರ್ಕ್ಸ್, ಬಿಕ್ಕುತ್ತಿರುವ ಹೆಂಡತಿ ಹೆಲೆನ್, ಗಿರವಿ ಅಂಗಡಿಯಲ್ಲಿ ಬಟ್ಟೆ ಒತ್ತೆಯಿಡಲು ಕಾಯುತ್ತಿರುವ ಆಳು ಡೆಮ್ಯೂತ್, 'ಬಂಡವಾಳ' ಬರೆಯುವುದರಲ್ಲಿ ಮುಳುಗಿರುವ ಶ್ರಮಜೀವಿ ಬಂಧು ಮಾರ್ಕ್ಸ್‌ನ ಮನೆಗೆ ದೇಕಾದ ಎಂಗೆಲ್ಸ್, ಹೆರಿಗೆ ಆಸ್ಪತ್ರೆಯ ಪೌಡರ್ ಪಿಯರ್ಸ್‌ಗಳ ಪರಿಮಳದ ಹೊದಿಕೆಯಿಂದ ದೂರವಾಗಿ ಲಾರಿಯ ಚಕ್ರಗಳ ಕೆಳಗೆ ತುಂಡು ಬಟ್ಟೆ ಹೊದ್ದು ಮಲಗಿರುವ ಚೆನ್ನಮ್ಮನ ಕಂದ, ಎಸೆದ ಬ್ರೆಡ್ಡಿನ ತುಂಡು ಆಯಲು ತೊಟ್ಟಿಯೊಳಗೆ ಇಳಿವ ಮಡಿಯುವ ಕಸುವಿರುವ ಹಸಿದ ಕೈಗಳು, ಉಳ್ಳವರ ಎದೆಯಿಂದ ಬಂದ ದೆಣಚುಕಲ್ಲುಗಳ ಮೇಲೆ ಕಾಲಿಟ್ಟು ಗಾಯಗೊಂಡ ಕೂಲಿಕಾರರು, ವಿಷದ ಬಟ್ಟಲಿಗೆ ಬಲಿಯಾದ ಸಾಕ್ರೆಟಿಸ್-ಸುಬ್ಬಣ್ಣ ರಂಗನಾಥ ಎಕ್ಕುಂಡಿಯುವರ ಸಂಸಾರ ಅದೆಷ್ಟು ದೊಡ್ಡದು!

ಮಡಿಯುವ ಜನರ ನೋವಿಗೆ ಕಾವ್ಯದ ಗರಿ ತೊಡಿಸಿದ ಸು.ರಂ. ಎಕ್ಕುಂಡಿಯುವರ 'ಬಕುಲದ ಹೂವುಗಳು' ಕವನ ಸಂಕಲನಕ್ಕೆ ಈ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿದೆ.

ಕ್ರಾಂತಿಯ ಕನಸನ್ನು ಸದಾ ಹೊತ್ತಿರುವ ಎಕ್ಕುಂಡಿ ಕನಸುಗಾರರಲ್ಲದವರಿಂದ ಕ್ರಾಂತಿ ಸಾಧ್ಯವಿಲ್ಲ ಎಂಬ ನಂಬಿಕೆಯವರು. ಹೀಗಾಗಿಯೇ ತಮ್ಮ ಕನಸನ್ನು ಕಾವ್ಯದ ಮೂಲಕ ಹರಡುತ್ತಾ ಹೋಗಿರುವ ಈ ಕವಿ ಕಾವ್ಯ ಮತ್ತು ಕ್ರಾಂತಿ ಕೈಕುಲುಕಲು ಕಾರಣವಾಗಿದ್ದಾರೆ.

'ಇಲ್ಲಿ ಪುಸ್ತಕಗಳು ಮಾತಾಡುತ್ತವೆ, ಮಾತಾಡುತ್ತವೆ ಪುಸ್ತಕಗಳು' ಎಂಬ ಬ್ರೆಕ್ಟ್ ಮಾತಿನಂತ ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರ ಪುಸ್ತಕಗಳು ಜನತೆಯೊಡನೆ ನೇರ ಸಂವಾದ ನಡೆಸಿ ಕ್ರಾಂತಿಯ ಕನಸನ್ನು ಹಂಚುತ್ತವೆ.

"ಕಾವ್ಯವಾಗಲಿ ಸಾಹಿತ್ಯವಾಗಲಿ ಸಜೀವವಾಗಿರದೇಕಾದರೆ ಅದರ ಬೇರುಗಳು ಜನತೆಯ ಬಾಳಿನಲ್ಲಿರಬೇಕು. ಇಂದು ನಮ್ಮ 'ಮಹಾಕವಿ'ಗಳನ್ನು ನಾವು ನಮ್ಮ ಜನತೆಯ 'ಗುಡಿಸಲು'ಗಳಲ್ಲಿ ಕೇಳುತ್ತಿಲ್ಲ. ಒಪ್ಪಿದರೂ ಸರಿ ಒಪ್ಪದಿದ್ದರೂ ಸರಿ ಇಂದಿನದು ಜನಯುಗ. ಕವಿ ಜನರ ಪ್ರತಿನಿಧಿಯಾಗಬೇಕು" ಎನ್ನುವ ಎಕ್ಕುಂಡಿಯುವರ ಪ್ರಕಾರ ಜನತೆಯ ಯುಗ ಈಗ ಆರಂಭವಾಗಿದೆ. "ಎಡಕಾವ್ಯ, ಕೆಂಪು ಕಾವ್ಯ ಪತ್ರಿಕೆಗಳು ದರೋಡೆಕಾರರ ಕಾವ್ಯ ಎಂದು ಬಳ್ಳಿಸಿರುವ ಕಮ್ಯುನಿಸ್ಟ್ ಕಾವ್ಯ ಬರುವುದನ್ನು ಯಾರೂ ತಡೆಯಲಾರರು" ಎನ್ನುತ್ತಾರೆ.

ತಮ್ಮ ಹದಿಹರಯದ ದಿನದಲ್ಲಿ ಕಮ್ಯುನಿಸ್ಟ್ ಪಕ್ಷದ ಸಂಪರ್ಕ ಹೊಂದಿದ ಸು.ರಂ. ಎಕ್ಕುಂಡಿ ಉತ್ತರಕನ್ನಡದ ಬಂಕಿಕೊಡ್ಲದ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಹೋಗುವ ವೇಳೆಗೆ ಸರ್ಕಾರ ಕಮ್ಯುನಿಸ್ಟ್ ಚಟುವಟಿಕೆಗಳನ್ನು ನಿಷೇಧಿಸಿತ್ತು. ಅಂತಹ ಭಯದ ದಿನದಲ್ಲೂ, ನಿರಂಜನ, ಚನ್ನವೀರ ಕಣವಿಯವರೊಂದಿಗೆ ಸೇರಿ 'ಜನಶಕ್ತಿ' ಪತ್ರಿಕೆಗೆ ಬರೆದ ಎಕ್ಕುಂಡಿಯವರು ತಾನು ಪಕ್ಷದ ಸಕ್ರಿಯ ಕಾರ್ಯಕರ್ತನಾಗಿ ದುಡಿಯಲು ಸಾಧ್ಯವಾಗಲಿಲ್ಲ ಎಂದು ಈಗಲೂ ಪರಿತಪಿಸುತ್ತಾರೆ. "ನನ್ನ ಪರಿಸ್ಥಿತಿ ನನ್ನನ್ನು ಹಿಡಿತದಲ್ಲಿಟ್ಟಿತ್ತು. ಆದರೆ ಕೆಲವರು ಯೋಧರಾಗಿ ರಣರಂಗಕ್ಕೆ ಹೋಗುತ್ತಾರೆ. ಅದು ಸಾಧ್ಯವಾಗದೆ ಉಳಿಯಲೇಬೇಕಾದವರು ಅವರಿಗೆ ಕತ್ತಿ, ಗುರಾಣಿ ತಯಾರಿಸಿಕೊಡುತ್ತಾರೆ. ಕ್ರಾಂತಿಗಾಗಿ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಟ್ಟ ತೃಪ್ತಿ ನನಗಿದೆ" ಎನ್ನುತ್ತಾರೆ.

"ನಮ್ಮ ಇಂದಿನ ಕಾವ್ಯ ಕತ್ತಲಲ್ಲಿ ತೊಳಲುತ್ತಿದ್ದ ಜನರಿಗೆ ಬೆಳಕು ತಂದಿತ್ತ ಪ್ರೊಮಿಥಿಯಸ್ನ ಕೆಲಸ ಮಾಡಬೇಕು" ಎನ್ನುವ ಎಕ್ಕುಂಡಿಯವರ ಕವನಗಳಲ್ಲಿ ಪ್ರೊಮಿಥಿಯಸ್‌ನ ಬೆಳಕಿದೆ. ಅನಕ್ಷರಸ್ಥ ಮುಗ್ಧ ಜನರ ಸಂಕಷ್ಟಗಳನ್ನು ಕಂಡು ಮಿಡಿಯುವ ಹೃದಯವಿದೆ. ಈ ಕಾರಣಕ್ಕಾಗಿಯೇ ಎಕ್ಕುಂಡಿ ಇತರ ಎಲ್ಲಾ ಕವಿಗಳಿಗಿಂತ ಒಡೆದು ಕಾಣುತ್ತಾರೆ.

- ಜಿ.ಎನ್.ಮೋಹನ್

(ಕೃಪೆ: ಅನ್ವೇಷಣೆ, ಪ್ರಜಾವಾಣಿ)

ರೊಟ್ಟಿ ಮತ್ತು ಕೋವಿ

ತಟ್ಟನೇ ನಿಂತು ನೋಡಿದೆ, ತೊಟ್ಟಿಯಾಚೆಂದ
ಹಸಿದ ಹಾವುಗಳಂತೆ ಇಳಿದು ಒಳಗೆ
ಎರಡು ಕೈಗಳು; ಸಿಕ್ಕ ಎಂಜಲೆಲೆಯನ್ನು
ಹಿರಿದು ತೆಗೆದವು, ಕಸದಿಂದ ಹೊರಗೆ

ತಡ ಮಾಡಲಿಲ್ಲ, ತಡೆದನುಮಾನಿಸಲಿಲ್ಲ
ಎಲ್ಲಾದರೂ ಉಂಟೆ ತುಂಡು ರೊಟ್ಟಿ?
ಮತ್ತು ಅನ್ನದ ಅಗಳು? ಎಲೆಯೆಲ್ಲ ಬಳಿದಾಗ
ಏನೊ ಸಿಕ್ಕಿತು; ತಣ್ಣಗಾತು ಹೊಟ್ಟೆ

ಎರಡು ಬ್ರೆಡ್ಡಿನ ತುಂಡು, ಚೆಲ್ಲಿದ ಹುಳಿಯನ್ನ
ಸಿಪ್ಪೆ ಉಪ್ಪಿನಕಾಯಿ ಕೂಡಿದುದನ್ನ
ಎಲ್ಲಿಯೋ ಕಂಡಿದ್ದೆನಲ್ಲ ಈ ಕೈಗಳನ್ನು?
ಹೌದಿವೇ ಕೈಗಳು: ಬಲಿಷ್ಠ ಕಪ್ಪ

ಆಷಾಢ ಮೋಡಗಳು 'ಧೋ'ಗುಟ್ಟಿ ಸುರಿದು
ಹೊಲಗದ್ದೆಗಳು ತೊಯ್ದು ತಪ್ಪಡಾಗ್ಗಿ
ಹೂಡಿದ್ದ ನೇಗಿಲಿನ ಹಾಡು, ರವಕೆಯ ಹಸಿರು
ಕೊಡಿಸಿದ್ದವಲ್ಲವೇ ತೆನೆಯ ತೂಗಿ

ಅಂದುಕೊಂಡೆನು, ಅಲ್ಲ ಇವುಗಳೇ ಅಲ್ಲವೆ
ಗಬ್ಬುಗಾರಿಯ ಹೊತ್ತು ಹಗಲು ಇರುಳು
ಉಪ್ಪರಿಗೆ ಬಂಗಲೆಯ ನಿಲ್ಲಿಸಿಲ್ಲವೆ? ಮತ್ತೆ: ಇವುಗಳಿಂದಲ್ಲವೇ ಸುಖದ ನೆರಳು

ಹಸಿದ ಕೈಗಳಿಗೆ ದುಡಿಮೆಯೆಂದರೆ ಪ್ರೀತಿ
ಚೆಲುವೆಂದರೂ ಪ್ರೀತಿ ಕಾಣೊ ಅವಕೆ
ಹಾಗೆಂದೆ ಲಾವಣ್ಯ ವರ್ತುಲಗಳನು ಬರೆವ, ಬೆಳ್ಳಕ್ಕಿಗಳ ಹಿಂಡು ಬೆರವ ಬಯಕೆ

ಕಣ್ಣಿಗಷ್ಟೇ ಅಲ್ಲ, ಕಿವಿಗಳೂ ಸಂತಸದ
ಹಕ್ಕಿಗಳ ಗೂಡಾಗಲೆಂದು, ನುಡಿಸಿ
ಯಾವ್ಯಾವುದೋ ವಾದ್ಯ ಈ ಕೈಗಳಲ್ಲವೇ
ಇಂದೇಕೆ ಇಳಿದಿವೆ? ಎಂಜಲನು ಬಯಸಿ

ಹಸಿದ ಕೈಗಳಿಗೆ ಪ್ರೀತಿಯೆಂದರು ಪ್ರೀತಿ
ಹಾಗೆಂದೆ ತಟ್ಟಿ ಎದೆ ಎದೆಯ ಕದವ
ಕಾದರೂ, ಹಸಿದವರಿಗವು ತೆರೆಯಲೇ ಇಲ್ಲ!
ಎಷ್ಟೆಂದು ತಡೆದಾರು ತಮ್ಮ ಹಸಿವೆ?

ಕಸದ ತೊಟ್ಟಿಗೆ ಇನ್ನು ಹಸಿದ ಕೈ ಇಳಿಯುವು
ಅಂದುಕೊಂಡೆನು. ಅಂಜಿ ನೊಂದುಕೊಂಡು
ನೇಣುಗಂಬದ ಕೂಡ ಧಿಕ್ಕರಿಸಿ ನುಗ್ಗುವರು
ಎತ್ತಿಕೊಳ್ಳಲು ಸಿಕ್ಕ ಕೋವಿ ಗುಂಡು

ಹಸಿದವರು ಕೂಡ ಬದುಕಬೇಕಲ್ಲವೇ? ಮತ್ತೆ, ಪ್ರೀತಿಯೂ ಬೇಕಲ್ಲ ದುಡಿದ ಜನಕೆ
ಎದೆಯ ಕದಗಳು ಮುಚ್ಚಿದಾಗ ಮತ್ತಿನ್ನೇನು
ಮುಖ್ಯವಲ್ಲವೆ ಸಾವಿಗಿಂತ ಬದುಕೆ?

('ಬಕುಲದ ಹೂವುಗಳು' ಕವನ ಸಂಕಲನದಿಂದ ಆಯ್ದ ಕವನ)

ಪ್ರಶ್ನೋತ್ತರ

ಕೇಂದ್ರದ ಪಂಚಾಯತ್ ರಾಜ್ಯ ಮಸೂದೆಯನ್ನು ಸಿಪಿಐ(ಎಂ) ಬೆಂಬಲಿಸಿದ್ದೇಕೆ?

? ಸಿಪಿಐ(ಎಂ) ಅಧಿಕಾರದ ವಿಕೇಂದ್ರೀಕರಣ ಆಗಬೇಕೆನ್ನುತ್ತದೆ. ಆದರೆ ಹಿಂದಿನ ಬಾರಿ ರಾಜ್ಯ ಸಭೆಯಲ್ಲಿ ಪಂಚಾಯತ್‌ರಾಜ್ಯ ಮಸೂದೆ ತಂದಾಗ ಸಿಪಿಐ(ಎಂ) ವಿರೋಧಿಸಿತು - ವಿಶೇಷವಾಗಿ ಪಂಚಾಯತ್ ಸಮಿತಿ ಮುಖಂಡರ ನೇರ ಚುನಾವಣೆಯನ್ನು ವಿರೋಧಿಸಿತ್ತು. ಸಿಪಿಐ(ಎಂ) ಏಕೆ ಅದನ್ನು ವಿರೋಧಿಸಿತು?

• ಸಂಸತ್ತು ಇತ್ತೀಚೆಗೆ 'ಪಂಚಾಯತ್ ರಾಜ್ಯ'ದ ಬಗ್ಗೆ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿತು. ಸಿಪಿಐ(ಎಂ) ಸಂಸತ್‌ಸದಸ್ಯರು ಎರಡೂ ಸದನಗಳಲ್ಲಿ ಇದರ ಪರವಾಗಿ ಮತ ನೀಡಿದರು. ಹಿಂದೆ ಮಾಡಿಸಿದ್ದ ಮಸೋದೆ ಮಂಡಿಸಿದಾಗ ಪಕ್ಷದ ಸದಸ್ಯರು ಅದರಲ್ಲಿದ್ದ ಪಂಚಾಯತ್ ಸಮಿತಿ ಅಧ್ಯಕ್ಷರ ನೇರ ಚುನಾವಣೆಯ ಅಂಶವನ್ನು ವಿರೋಧಿಸಿದ್ದರು.

ಏಕೆ! ಏಕೆಂದರ ಪಂಚಾಯತ್ ಅಧ್ಯಕ್ಷರನ್ನು ಚುನಾಯಿಸುವ ವಿಧಾನವನ್ನು ಆಯಾಯ ರಾಜ್ಯಗಳಿಗೇ ಬಿಡಬೇಕು. ಈ ಬಗ್ಗೆ ಇಡೀ ದೇಶದ ಮೇಲೆ ಒಂದೇ ವಿಧಾನ ಹೇರುವುದು ಸರಿಯಲ್ಲ ಎಂದು. ಪಶ್ಚಿಮ ಬಂಗಾಳದಲ್ಲಿ ಅಧಿಕಾರ ವಿಕೇಂದ್ರೀಕರಣದಿಂದ ಪಡೆದ ಶ್ರೀಮಂತ ಅನುಭವದ ಆಧಾರದ ಮೇಲೆ ಈ ತಕರಾರು ಎತ್ತಿದ್ದೆವು ಚುನಾಯಿತ ಪಂಚಾಯತು ಸದಸ್ಯರು ಪಂಚಾಯತು ಅಧ್ಯಕ್ಷರನ್ನು ಚುನಾಯಿಸಬೇಕು. ಇಲ್ಲವಾದರೆ ಪಂಚಾಯತು ಅಧ್ಯಕ್ಷರು ಚುನಾಯಿತ ಪಂಚಾಯಿತಿಗೆ ಜವಾಬ್ದಾರರಾಗಿರುವುದಿಲ್ಲ. ಪಂಚಾಯತಿನಲ್ಲಿ ಬಹುಮತದಲ್ಲಿರುವ ಪಕ್ಷ ಮತ್ತು ಪಂಚಾಯತು ಅಧ್ಯಕ್ಷರ ಪಕ್ಷ ಬೇರೆ ಬೇರೆಯಾಗಿದ್ದಾಗ ಈ ಸಮಸ್ಯೆ ತೀವ್ರವಾಗುತ್ತದೆ. ಪಂಚಾಯತುಗಳು ಕೆಲಸ ಮಾಡದಂತಾಗುತ್ತವೆ. ಆದ್ದರಿಂದ ಸಂಸತ್ತಿನಲ್ಲಿನ ಸಿಪಿಐ(ಎಂ) ಗುಂಪು ಪಂಚಾಯತು ಅಧ್ಯಕ್ಷರ ಚುನಾವಣೆಯ ವಿಧಾನವನ್ನು ಸಂಬಂಧಪಟ್ಟ ರಾಜ್ಯಗಳಿಗೆ ಬಿಡಬೇಕೆಂದು ತಿದ್ದುಪಡಿ ಸೂಚಿಸಿತು.

ಈ ತಿದ್ದುಪಡಿಯನ್ನು, ಇನ್ನೂ ಹಲವು ತಿದ್ದುಪಡಿಗಳನ್ನು ಸರಕಾರ ಒಪ್ಪಿಕೊಂಡಿತು. ಆದ್ದರಿಂದ ಎರಡೂ ಸದನಗಳಲ್ಲಿ ಇದು ಯಾವುದೇ ವಿರೋಧವಿಲ್ಲದೆ ಅಂಗೀಕಾರಗೊಂಡಿತು.

ಸಿಪಿಐ(ಎಂ) ಸತತವಾಗಿ ಅಧಿಕಾರ ವಿಕೇಂದ್ರೀಕರಣವನ್ನೂ ಪ್ರತಿಪಾದಿಸಿತಷ್ಟೇ ಅಲ್ಲ, ಪಶ್ಚಿಮಬಂಗಾಳ, ಕೇರಳ ತ್ರಿಪುರಾಗಳಲ್ಲಿ ಅದನ್ನು ಜಾರಿಗೆ ತಂದಿದೆ. ಹಿಂದೆ ರಾಜೀವ್‌ಗಾಂಧಿಯವರು ಪ್ರಧಾನಿಯಾಗಿದ್ದಾಗ ಒಂದು ಸಂವಿಧಾನ ತಿದ್ದುಪಡಿ ಮಸೂದೆ ತಂದು ವಿಕೇಂದ್ರೀಕರಣದ ಹೆಸರಿಲ್ಲಿ ಕೇಂದ್ರದ ಕೈಯಲ್ಲಿ ಎಲ್ಲಾ ಅಧಿಕಾರಗಳನ್ನು ಕೇಂದ್ರೀಕರಿಸುವ ಪ್ರಯತ್ನ ನಡೆಯಿತು. ಸಿಪಿಐ(ಎಂ), ಇತರ ಎಡ ಪಕ್ಷಗಳು ಹಾಗೂ ಜಾತ್ಯಾತೀತ ವಿರೋಧ ಪಕ್ಷಗಳು ಇದನ್ನು ಬಲವಾಗಿ ವಿರೋಧಿಸಿದವು. ಪರಿಣಾಮವಾಗಿ 1989 ರಲ್ಲಿ ಮಸೂದೆ 2/3 ಬಹುಮತ ಪಡೆಯಲು ಸಾಧ್ಯವಾಗಲಿಲ್ಲ. ಈ ಬಾರಿಯ ಮಸೂದೆ ಹಿಂದಿನದರಲ್ಲಿ ಇದ್ದ ಕೇಂದ್ರೀಕರಣದ, ರಾಜ್ಯಗಳನ್ನು ಈ ವಿಷಯದಲ್ಲಿ ಮೂಲೆಗೆ ತಳ್ಳುವ ತಪ್ಪುಗಳನ್ನು ಸರಿಪಡಿಸಿದ್ದರಿಂದ ಸಂಸತ್ತಿನಲ್ಲಿ ಪಂಚಾಯತ್‌ರಾಜ್ಯ ಮಸೂದೆ ಈ ಬಾರಿ ಅಂಗೀಕಾರಗೊಂಡಿತು.

ವಿವೇಕಯುತ ಜನರನ್ನೂ ಆವರಿಸುತ್ತಿರುವ ಕೋಮುವಾದ

ಎನ್. ರಾಮ್

"ದೇಶದಲ್ಲೀಗ ಹೊಸ ರೀತಿಯ ಸೈದ್ಧಾಂತಿಕ ಧ್ರುವೀಕರಣ ಅತ್ಯಂತ ಒರಟು ಕೋಮುವಾದೀ ಭಾವನೆಗಳ ಆಧಾರದಲ್ಲಿ ನಡೆಯುತ್ತಿದೆ ಮಧ್ಯಮವರ್ತಿಗಳು, ಕಾರ್ಮಿಕರು, ಪತ್ರಕರ್ತರು ಇತ್ಯಾದಿ ಜನವಿಭಾಗಗಳ ಇದುವರೆಗ ವಿವೇಕಯುತವಾಗಿದ್ದ ವಿಭಾಗಗಳನ್ನು ಇದು ತಟ್ಟಿದೆ. ರಾಷ್ಟ್ರೀಯ ಪರಿಸ್ಥಿತಿಯೀಗ ಅತ್ಯಂತ ಮಬ್ಬಾಗಿದೆ. ಸರಿ ತಪ್ಪುಗಳ ಬಗ್ಗೆ ಗೊಂದಲ ಎಲ್ಲೆಲ್ಲೂ ಕಂಡುಬರುತ್ತಿದೆ. ಸರಿಯಾದುದು ಯಾವುದೂ, ತಪ್ಪ ಯಾವುದು, ಸುಳ್ಳು ಯಾವುದು, ಸತ್ಯ ಯಾವುದೂ ಎಂಬುದನ್ನು ಗುರುತಿಸುವುದು ಈಗ ನಮ್ಮ ಮುಂದಿರುವ ಜವಾಬ್ದಾರಿ" ಎಂದು ಪ್ರಖ್ಯಾತ ಪತ್ರಕರ್ತ ಶ್ರೀ ಎನ್.ರಾಮ್ ಬೆಂಗಳೂರಿನಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಅವರು ಜನವರಿ 10ರಂದು ಕೋಮುಸೌಹಾರ್ದತಾ ಸಮಿತಿ ಏರ್ಪಡಿಸಿದ್ದ ರಾಜ್ಯ ಸಮಾವೇಶವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಈಗ ನಮ್ಮ ಮುಂದಿರುವ ಸವಾಲು ಮೂಲತಃ ರಾಜಕೀಯ ಸ್ವರೂಪದ್ದು, ರಾಜಕೀಯ ಸಾಮಜಿಕ ಆಯಾಮ ಪಡೆದಿರುವ ಬಿಕ್ಕಟ್ಟು ಇದು. ಏಕೆಂದರೆ ರಾಜಕೀಯವಾಗಿ ಸಂಘಟನೆಯಾದ ಹಿಂದೂ ಕೋಮುವಾದ ರಾಜಕೀಯ ಲಾಭ ಪಡೆಯಲು ರಚಿಸಿದ ಆಟದ ಫಲ ಇದು. ಈ ರಾಜಕೀಯ ಅಂಶ ಇಲ್ಲದಿದ್ದರೆ ಈ ಬಿಕ್ಕಟ್ಟು ಇಂದು ಇಷ್ಟೊಂದು ಪ್ರಳಯಕಾರಿಯಾಗುತ್ತಿರಲಿಲ್ಲ ಎಂದು ಅವರು ಹೇಳಿದರು. ಇದನ್ನು ಎದುರಿಸುವಲ್ಲಿ ನರಸಿಂಹರಾವ್ ತಾನು ಸ್ವತಂತ್ರ ಭಾರತದ ಅತ್ಯಂತ ಗೊಂದಲಕಾರೀ ಪ್ರಧಾನಮಂತ್ರಿ ಎಂದು ತೋರಿಸಿಕೊಂಡಿದ್ದಾರೆ ಎಂದು ಕಟುವಾಗಿ ಟೀಕಿಸಿದ ಅವರು ಇದರಿಂದಾಗಿ ಈ ಸಮಸ್ಯೆ ಬಿಡಿಸಲಾಗದ ಕಗ್ಗಂಟಾಗಿದೆ ಎಂದರು. ಕಾಂಗ್ರೆಸ್ ತನ್ನ ಅನುಭವದ ನಕಾರಾತ್ಮಕ ಅಂಶಗಳನ್ನು ಮರೆಯಲೂ ಆಗದ, ಅದರಿಂದ ಪಾಠ ಕಲಿಯಲೂ ಆಗದ ಹಳೆಯ ಪಕ್ಷವಾಗಿದೆ ಎಂದರು.

ಲೇಖಕರಲ್ಲೂ ಕರಸೇವಕರು

ಹಿಂದುತ್ವ ಪಡೆಗಳ ದುರುಳತನವನ್ನು ಅಷ್ಟೇ ಕಟುವಾಗಿ ಟೀಕಿಸಿದ ಶ್ರೀ ಎನ್.ರಾಮ್ ಅವರು ಈ ಪಡೆಗಳು ಅಸಮರ್ಥನೀಯವಾದುದನ್ನು ಸಮರ್ಥಿಸಿಕೊಳ್ಳುವ ಶತಪ್ರಯತ್ನ ನಡೆಸಿದ್ದಾರೆ ಎಂದರು. ಅರುಣ್ ಶೌರಿ, ಗಿರಿಲಾಲ್ ಜೈನ್, ಸ್ವಪನ್ ದಾಸ್ ಗುಪ್ತಾರಂತಹ ಪತ್ರಕರ್ತರು ಇವರಲ್ಲಿ ಅವರಿಗೆ ನೆರವಾಗಲು ತಪ್ಪ ಮತ್ತು ಸರಿಗಳ ನಡುವೆ ಇನ್ನಷ್ಟು ಗೊಂದಲ ಉಂಟು ಮಾಡುವುದೇ ತಮ್ಮ ಕೆಲಸವೆಂಬಂತೆ ವರ್ತಿಸುತ್ತಿದ್ದಾರೆ ಎಂದರು. 'ಇವರು ಕರಸೇವಕ ಲೇಖಕರು' ಎಂದು ಅವರನ್ನು ಹೀಯಾಳಿಸಿದರು. ದೇಶದಲ್ಲಿ ಹರಡಿರುವ ಗೊಂದಲ ಪತ್ರಿಕಾರಂಗದಲ್ಲೂ ಕಾಣಬರುತ್ತಿದೆ ಎಂದರು.

ಈ ಎಲ್ಲಾ ಹಿಂದುತ್ವದ ಮಂದಿ ಹೇಳುವಂತೆ ಡಿಸೆಂಬರ್ 6 ಸ್ಮರಣೀಯ ದಿನವಲ್ಲ, ಉತ್ಸವದ ದಿನವಲ್ಲ, ಅತ್ಯಂತ ನಾಚಿಕೆಗೇಡಿ ದಿನವಾಗಿ ನಮ್ಮ ದೇಶದ ಇತಿಹಾಸದಲ್ಲಿ ದಾಖಲಾಗಿದೆ ಎಂದು ಶ್ರೀ ಎನ್.-ರಾಮ್ ಹೇಳಿದರು.

ಕೋಮುವಾದ-ಜಾತ್ಯಾತೀತತೆ ಚರ್ಚೆಯೇ ಈಗ ನಮ್ಮ ದೇಶದ ಮುಖ್ಯ ಅಜೆಂಡಾ ಆಗದೇಕೇ, ಅದನ್ನು ಬದಲಿಸಿ ಇತರ ವಿಷಯಗಳ ಬಗ್ಗೆ ಗಮನ ಹರಿಸಬಾರದೇಕೆ ಎಂದು ಕೆಲವರು ಭಾವಿಸುತ್ತಿದ್ದಾರೆ. ಸ್ವಲ್ಪ ಮಟ್ಟಿಗೆ ಹಾಗೆ ಮಾಡಬಹುದು, ಆದರೆ ಈ ಚರ್ಚೆಯಿಂದ ತಪ್ಪಿಸಿಕೊಳ್ಳಲು ಮಾತ್ರ ಸಾಧ್ಯವಿಲ್ಲ ಎಂದೂ ಅವರು ಹೇಳಿದರು.

'ಹಿಂದುತ್ವ'ದ ವಿಚಾರ ಸಂವಿಧಾನಬಾಹಿರ

ಜಾತ್ಯಾತೀತತೆಯೆಂಬ ಪ್ರಸ್ತಾವ ನಮ್ಮ ಸಂವಿಧಾನದಲ್ಲಿ ಇಲ್ಲ ಎಂದು ಹೇಳುವುದು ಸರಿಯಲ್ಲ ಎಂದು ಅವರು ಸಂವಿಧಾನದ ವಿವಿಧ ಕಲಮುಗಳನ್ನು ಉದಾಹರಿಸಿದರು. ಜಾತ್ಯಾತೀತತೆಯ ವಿರುದ್ಧವಾಗಿ ಮಾತನಾಡುವುದು ಸಂವಿಧಾನಬಾಹಿರ, ಹಿಂದುತ್ವದ ಪರಿಕಲ್ಪನೆಯೇ ಸಂವಿಧಾನವಿರೋಧಿ ಎಂದು ನುಡಿದರು.

ಈ ಹಿನ್ನೆಲೆಯಲ್ಲಿ ಜಾತ್ಯಾತೀತತೆ ಎಂಬ ವಿಚಾರದ ಬಗ್ಗೆ ವಿವರಿಸುತ್ತಾ ಇದು ಕಳೆದ 200 ವರ್ಷಗಳಿಂದೀಚೆಗೆ ಬಂಡವಾಳಶಾಹೀಯ ಬೆಳವಣಿಗೆ ಕೈಗಾರೀಕರಣ, ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಬೆಳೆದಿರುವ ಅಂತರ್ರಾಷ್ಟ್ರೀಯ ವಿಚಾರ ಎಂದ ಶ್ರೀ ಎನ್.ರಾಮ್, ಜಾತ್ಯಾತೀತತೆ ಮತ್ತು ಕೋಮುಸೌಹಾರ್ದದ ನಡುವಿನ ಸಂಬಂಧವನ್ನು ವಿವರಿಸುತ್ತಾ ಇವೆರಡು ಒಂದೇ ಅಲ್ಲ ಎಂದರು. ಜಾತ್ಯಾತೀತೆಯಲ್ಲಿ ಕೋಮು ಸೌಹಾರ್ದದ, ಎಲ್ಲಾ ಕೋಮಿಗೆ ಸಮಾನತೆಯ ಅಂಶ ಅಡಕಗೊಂಡಿದೆ, ಆದರೆ ಜಾತ್ಯಾತೀತತೆ ಅಷ್ಟು ಮಾತ್ರವೇ ಅಲ್ಲ ಎಂದರು. ಜಾತ್ಯಾತೀತತೆಯಲ್ಲಿ ಇನ್ನೊಂದು ಅಂಶವೂ ಇದೆ. ಅದೆಂದರೆ ಧರ್ಮ ಮತ್ತು ರಾಜಕೀಯವನ್ನು ಬೇರೆ ಸಬಾರದು ಎಂಬುದು. ನಮ್ಮ ದೇಶದ ಇತಿಹಾಸದಲ್ಲಿ ಕೋಮು ಸೌಹಾರ್ದ ಹಾಸುಹೊಕ್ಕಾಗಿದೆ ನಿಜ. ಗುರುನಾನಕ್, ಕಬೀರ, ಭಕ್ತಿ ಪಂಥ, ಸೂಫೀ ಪಂಥ ಇತ್ಯಾದಿ ಇದಕ್ಕೆ ಉದಾಹರಣೆ. ಅದೇ ರೀತಿ ಇದರ ಉಲ್ಲಂಘನಗಳೂ ಸರಾಗ ನಡೆಯುತ್ತಲೇ ಬಂದಿದೆ ಎಂಬುವನ್ನು ಮರೆಯಬಾರದು ಎಂದರು. ಹಿಂದೂಗಳನ್ನು ಮಾತ್ರ ಒಂದು ವಿಶಿಷ್ಟ ಪರಂಪರೆಯೆಂಬುದನ್ನು ಒಪ್ಪಲು ನನಗಂತೂ ಸಾಧ್ಯವಿಲ್ಲ ಎಂದು ಶ್ರೀ ರಾಮ್ ನುಡಿದರು.

ಹಿಂದುತ್ವ ಪಡೆ ಓಲೈಸಿದ್ದು ಯಾರನ್ನು? ಮುಸಲ್ಮಾನರ ವಿರುದ್ಧ ಅಪಪ್ರಚಾರ ಅಂಶಗಳನ್ನು ಪರಿಶೀಲಿಸುತ್ತಾ ಶ್ರೀ ಎನ್. ರಾಮ್ ಇವು ಶುದ್ಧ ಸುಳ್ಳು ಎಂದು ವಿವರಿಸಿದರು. ಮುಸಲ್ಮಾನರ ಸಂಖ್ಯೆ ಹಿಂದೂಗಳಿಗಿಂತ ಜಾಸ್ತಿಯಾಗಬೇಕಾದರೆ 319 ವರ್ಷಗಳು ಬೇಕು ಎಂಬ ಒಂದು ಲೆಕ್ಕಾಚಾರವನ್ನು ಉದ್ಧರಿಸುತ್ತಾ ಆಗ ಭಾರತದ ಜನಸಂಖ್ಯೆ ಈಗಿನ ಎಂಟು ಪಟ್ಟಾಗಿಸುತ್ತವೆ, ಅಂದರೆ ಭಾರತ ಒಂದು ದೇಶವಾಗಿಯೇ ಉಳಿಯಲಾಗದಂತಹ ಸ್ಥಿತಿಯಿರುತ್ತದೆ ಎನ್ನುತ್ತಾ ಹಿಂದುತ್ವ ಪಡೆಗಳ ಅಪಪ್ರಚಾರದ ಹಿಂದಿನ ತಿಳಿಗೇಡಿತನವನ್ನು ಬಯಲುಗೆಳೆದರು. ಮುಸಲ್ಮಾನರ ಬಗ್ಗೆ ಸಾರಾಸಗಟು ಅಭಿಪ್ರಾಯ ವ್ಯಕ್ತಪಡಿಸುವ ಕರಸೇವಕ ಲೇಖಕರದ್ದು ಜನಾಂಗ-ದ್ವೇಷ ಮಾದರಿಯ ಪ್ರವೃತ್ತಿಯೆಂದರೆ ತಪ್ಪಲ್ಲ ಶಾಹಬಾನೋ ಕೇಸಿನಲ್ಲಿ ರಾಜೀವ್‌ಗಾಂಧಿ ಸರಕಾರ ಓಲೈಸಿದ್ದ ಮುಸ್ಲಿಂ ಜನಾಂಗವನ್ನಲ್ಲ, ಆ ಜನಾಂಗದ ಮೂಲಭೂವಾದಿಗಳನ್ನಷ್ಟೇ. ಅದು ಸರಿ, ರಾಮಜನ್ಮಭೂಮಿ ವಿಷಯದಲ್ಲಿ 1949ರಿಂದಲೂ ಹಿಂದೂ ಕೋಮುವಾದಿಗಳನ್ನು ಓಲೈಸುವ ಇನ್ನೂ ದೊಡ್ಡ ತಪ್ಪು ನಡೆದಿಲ್ಲವೇ ಎಂದು ಶ್ರೀ ರಾಮ್ ಪ್ರಶ್ನಿಸಿದರು.

ಈ ಎಲ್ಲಾ ಅಪಪ್ರಚಾರಗಳನ್ನು ಬಯಲಿಗೆಳೆಯಬೇಕು, ಹಿಂದುತ್ವ ಪಡೆಗಳ ವಿಷ ಪ್ರಚಾರವನ್ನು ತಡೆಯುವುದು ವಿಜ್ಞಾನಿಗಳು, ಬುದ್ಧಿಜೀವಿಗಳು, ಧಾರ್ಮಿಕ ಮುಖಂಡರ, ವಿದ್ಯಾರ್ಥಿ, ಯುವಜನರು, ಪತ್ರಕರ್ತರ ಜವಾಬ್ದಾರಿ. ಈ ಹಿನ್ನೆಲೆಯಲ್ಲಿ ರಾಜಕೀಯ ಕೋಮುವಾದ ಅತೀ ಹೆಚ್ಚು ತಟ್ಟಿರುವ ದಕ್ಷಿಣದ ರಾಜ್ಯಗಳಲ್ಲಿ ಪ್ರಮುಖವಾದ ಕರ್ನಾಟಕದಲ್ಲಿ ಕೋಮು ಸೌಹಾರ್ದ ಸಮಾವೇಶ ನಡೆಯುತ್ತಿರುವುದು ಅತ್ಯಂತ ಸೂಕ್ತ ಎಂದು ಶ್ರೀ ಎನ್.ರಾಮ್ ಅಭಿಪ್ರಾಯಪಟ್ಟರು.

ಈ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಕವಿ ರಾಮಚಂದ್ರಶರ್ಮ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು.

ಚಿತ್ತಗಾಂಗ್ ದಂಗೆಯ ವೀರ ಕಾಂ.ಗಣೇಶ್ ಘೋಷ್ ಇನ್ನಿಲ್ಲ

ದೇಶದ ಪ್ರಖ್ಯಾತ ಕ್ರಾಂತಿಕಾರಿ, ಸ್ವಾತಂತ್ರ್ಯ ಹೋರಾಟಗಾರ, ಹಿರಿಯ ಸಿಪಿಐ(ಎಂ) ಮುಖಂಡ ಕಾಮ್ರೇಡ್ ಗಣೇಶ್ ಘೋಷ್ ಡಿಸೆಂಬರ್ 22ರಂದು ನಿಧನರಾಗಿದ್ದಾರೆ. 92 ವರ್ಷದ ಇವರು ಅತಿ ಹೆಚ್ಚು ಕಾಲ ಜೈಲು ವಾಸ ನಡೆಸಿದ ಪಕ್ಷದ ಮುಖಂಡರಾಗಿದ್ದರು.

ಕಾಮ್ರೇಡ್ ಗಣೇಶ್ ಘೋಷ್ 1900ರಲ್ಲಿ ಬಾಂಗ್ಲಾ ದೇಶದಲ್ಲಿರುವ ಜೆಸ್ಸೋರ್ ಜಿಲ್ಲೆಯ ಬೆನೋದ್‌ಪುರದಲ್ಲಿ ಜನಿಸಿದರು. ಅವರ ತಂದೆ ಬಿಪಿನ್ ಬಿಹಾರಿ ಘೋಷ್ ರೈಲ್ವೇ ನೌಕರರಾಗಿದ್ದರು. ಚಿತ್ತಗಾಂಗ್‌ನಲ್ಲಿ ಪ್ರಾರಂಭಿಕ ಶಿಕ್ಷಣ ಪಡೆದ ಗಣೇಶ್ ಘೋಷ್ ಬಾಲಕನಾಗಿದ್ದಾಗಲೇ ರಾಷ್ಟ್ರೀಯ ಹಾಗೂ ದೇಶಪ್ರೇಮಿ ಭಾವನೆಗಳನ್ನು ತಮ್ಮ ತಂದೆಯಿಂದ ಪಡೆದಿದ್ದರು.

ಮೊದಲ ಮಹಾಯುದ್ಧ ಅಂತ್ಯ ವೇಳೆಗೆ ಅವರ ಸಹಪಾಠಿ ಅನಂತಸಿಂಗ್ ಇವರನ್ನು ಚಿತ್ತಗಾಂಗ್‌ನ ಪ್ರಖ್ಯಾತ ಕ್ರಾಂತಿಕಾರಿ ಸೂರ್ಯಸೇನ್‌ರವರ ಪರಿಚಯ ಮಾಡಿಸಿದರು. 1921ರಲ್ಲಿ ನಡೆದ ಗಯಾ ಸಮ್ಮೇಳನದಲ್ಲಿ ಕಾಂಗ್ರೆಸ್ ಮುಖಂಡರು ಶಿಕ್ಷಣ ಸಂಸ್ಥೆಗಳ ಬಹಿಷ್ಕಾರಕ್ಕೆ ಕರೆ ನೀಡಿದಾಗ ಚಿತ್ತಗಾಂಗ್‌ನ ಅತಿ ದೊಡ್ಡ ಶಾಲೆ ಮುನಿಸಿಪಲ್ ಸ್ಕೂಲ್‌ನಲ್ಲಿ ಬಹಿಷ್ಕಾರ ಸಂಘಟಿಸಿದರು. ಗಣೇಶ್ ಘೋಷ್ ಮತ್ತು ಅನಂತಸಿಂಗ್ ಅವರು ಚಿತ್ತಗಾಂಗ್‌ನ ಎರಡು ದೊಡ್ಡ ಕಾರ್ಮಿಕ ಮುಷ್ಕರಗಳಲ್ಲೂ ಭಾಗವಹಿಸಿದರು. ಅಸಹಕಾರ ಆಂದೋಲನವನ್ನು ಹಿಂತೆಗೆದುಕೊಂಡ ನಂತರ ಗಣೇಶ್ ಘೋಷ್ ಕಲ್ಕತ್ತೆಯ ಇಂಜಿನಿಯರಿಂಗ್ ವಿದ್ಯಾರ್ಥಿಯಾದರು. ಅಲ್ಲಿ ಓದುತ್ತಿದ್ದಾಗ 1923ರಲ್ಲಿ ಮಾನಿಕ್ ತಲಾ ಬಾಂಬ್ ಕೇಸ್‌ನಲ್ಲಿ ಬಂಧಿತರಾದರು. ನಂತರ ಅವರ ಬಿಡುಗಡೆಯಾಯಿತು. 1924ರಲ್ಲಿ ವಿವಿಧ ಜೈಲುಗಳಲ್ಲಿ ಅವರನ್ನು ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ವಿವಿಧ ಜೈಲುಗಳಲ್ಲಿ ಬಂಧಿಸಿಡಲಾಯಿತು.

ಈ ಅವಧಿಯಲ್ಲಿ ಅವರು ಮೊತ್ತ ಮೊದಲ ಬಾರಿಗೆ ಭಾರತದಲ್ಲಿ ಕಮ್ಯುನಿಸ್ಟ್ ಆಂದೋಲನದ ಪ್ರವರ್ತಕರಲ್ಲಿ ಒಬ್ಬರಾದ ಮುಝಫರ್ ಅಹ್ಮದ್‌ರನ್ನು ಅವರು ರಷ್ಯಾದಿಂದ ಕೆಲವು ಶಸ್ತ್ರಾಸ್ತ್ರ ಕೊಡಿಸಬಹುದೆಂಬ ನಿರೀಕ್ಷೆಯಿಂದ ಭೇಟಿಯಾದರು. ಆದರೆ ಮುಝಫರ್ ಅಹ್ಮದ್ ಕಾರ್ಮಿಕ ಆಂದೋಲನ ಕಟ್ಟುವ ಮಹತ್ವದ ಬಗ್ಗೆ ಹೇಳಿದಾಗ ನಿರಾಶರಾದರು. 1928ರಲ್ಲಿ ಅವರು ಕಾಂಗ್ರೆಸ್‌ನ ಕಲ್ಕತ್ತಾ ಕ್ರಾಂತೀಯ ಕಾಂಗ್ರೆಸ್ ಸಮಿತಿಯ ಸದಸ್ಯರಾದರು. ಜೈಲಿನಲ್ಲಿದ್ದಾಗ ಅವರು ಐರಿಷ್ ಸ್ವಾತಂತ್ರ್ಯ ಆಂದೋಲನದ ಬಗ್ಗೆ ಡೇನಿಯಲ್ ಬ್ರಿಯನ್‌ರ ಪುಸ್ತಕದಿಂದ ತುಂಬಾ ಪ್ರಭಾವಿತರಾದರು. ಅದೇ ವಿಧಾನಗಳನ್ನು ಭಾರತದಲ್ಲೂ ಅನ್ವಯಿಸಲು ತಕ್ಷಣ ನಿರ್ಧರಿಸಿದರು

ಒಂದು ಸಶಸ್ತ್ರ ದಂಗೆ ಸಂಘಟಿಸಲು ಸೇನೆಯ ಮಾದರಿಯ ಒಂದು ಬಹಿರಂಗ ಸ್ವಯಂ ಸೇವಕರ ಪಡೆ ಗಣೇಶ್ ಘೋಷ್‌ರ ನೇತೃತ್ವದಲ್ಲಿ ಚಿತ್ತಗಾಂಗ್‌ನಲ್ಲಿ ಏರ್ಪಟ್ಟಿತು. ಕ್ರಾಂತೀಕಾರಿ ಪಕ್ಷದ ನೇತೃತ್ವದಲ್ಲಿ ದಂಗೆಯೆದ್ದು ವಿದೇಶೀ ಆಳ್ವಿಕೆಯನ್ನು ಕಿತ್ತೆಸೆದು ಅಧಿಕಾರ ಕಿತ್ತುಕೊಂಡು ಚಿತ್ತಗಾಂಗ್‌ನಲ್ಲಿ ಒಂದು ಸ್ವತಂತ್ರ ಕ್ರಾಂತಿಕಾರಿ ರಾಷ್ಟ್ರೀಯ ಸರಕಾರ ರಚಿಸುವ ಒಂದು ದಿಟ್ಟ ಯೋಜನೆಯನ್ನು ತಯಾರಿಸಿ ಸೂರ್ಯಸೇನ್‌ರವರಿಗೆ ಸಲ್ಲಿಸಿದ್ದರು. ಈ ಯೋಜನೆಗೆ ಅನುಮೋದನೆ ದೊರೆಯಿತು.

ಏಪ್ರಿಲ್ 18, 1930ರ ರಾತ್ರಿ ಕ್ರಾಂತಿಕಾರಿಗಳು ಕಾರ್ಯಾಚರಣೆ ನಡೆಸಿದರು. ಒಂದೇ ಕಾಲದಲ್ಲಿ ಹಲವೆಡೆಗಳಿಂದ ಕ್ಷಿಪ್ರ ಕ್ರಮ ಜರುಗಿಸಿ ಹಲವಾರು ಸರಕಾರಿ ಶಸ್ತ್ರಾಸ್ತ್ರಗಳನ್ನು ಟೆಲಿಫೋನ್ ಕೇಂದ್ರವನ್ನು, ಟೆಲಿಗ್ರಾಫ್ ಕಟ್ಟಡವನ್ನು ಇತರ ಸಾಮಜಿಕ ಮಹತ್ವದ ಸ್ಥಳಗಳನ್ನು ವಶಪಡಿಸಿಕೊಂಡರು. ಆದರೆ ಅತ್ಯಂತ ಬಲಶಾಲಿಯಾಗಿದ್ದ ಸರಕಾರದೆದುರು ಈ ಹೋರಾಟ ಮುಂದುವರೆಸಲು ಸಾಧ್ಯವಾಗಲಿಲ್ಲ. ಹೇಗೋ ಗಣೇಶ್ ಘೋಷ್ ಮತ್ತು ಇತರ ಮೂವರು ಕ್ರಾಂತಿಕಾರಿಗಳ ಮುಖ್ಯ ತಂಡದಿಂದ ಪ್ರತ್ಯೇಕಿಸಲ್ಪಟ್ಟು ಚಂದ್ರನಾಗೋರ್‌ನಲ್ಲಿ ಸೆರೆಯಾದರು. ಚಿತ್ತಗಾಂಗ್‌ನಲ್ಲಿ ಅವರ ವಿಚಾರಣೆ ನಡೆಯಿತು. ಗಣೇಶ್ ಘೋಷ್ ತನ್ನ ಪರವಾಗಿ ಬಹುಪಾಲು ತಾನೇ ವಾದ ಮಾಡಿದರು. ಕೊನೆಗೆ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿ ಅಂಡಮಾನ್‌ಗೆ ಕಳಿಸಲಾಯಿತು. ಅಂಡಮಾನ್‌ನ ದೀರ್ಘ ಜೈಲುವಾಸದಲ್ಲೇ ಇತರ ಹಲವು ಕ್ರಾಂತಿಕಾರಿಗಳಂತೆ ಗಣೇಶ್ ಘೋಷ್ ಕೂಡಾ ವೈಜ್ಞಾನಿಕ ಸಮಾಜವಾದದ ಪ್ರಭಾವಕ್ಕೆ ಒಳಗಾದರು. ಅವರನ್ನು ಅಲ್ಲಿಂದ ಅಲೀಪುರ ಜೈಲಿಗೆ, ನಂತರ ಢಾಕಾ ಜೈಲಿಗೆ ವರ್ಗಾಯಿಸಿ ಕೊನೆಗೆ 1946ರಲ್ಲಿ ಬಿಡುಗಡೆ ಮಾಡಲಾಯಿತು. ಅದೇ ವರ್ಷ ಅವರು ಕಮ್ಯುನಿಸ್ಟ್ ಪಕ್ಷ ಸೇರಿದರು. 1948 ರಲ್ಲಿ ಪಕ್ಷದ ಮೇಲೆ ನಿರ್ಬಂಧ ಬಂದಾಗ ಅವರು ಭೂಗತರಾದರು. ಆದರೆ ಮತ್ತೆ ಬಂಧಿತರಾದರು. 1952ರಲ್ಲಿ ಅಂತಿಮವಾಗಿ ಅವರ ಬಿಡುಗಡೆಯಾಯಿತು 1952, 1957 ಹಾಗೂ 1962ರಲ್ಲಿ ಅವರು ಪಶ್ಚಿಮ ಬಂಗಾಳ ಅಸೆಂಬ್ಲಿಗೆ ಅವಿಭಜಿತ ಸಿಪಿಐ ಅಭ್ಯರ್ಥಿಯಾಗಿ ಆಯ್ಕೆಗೊಂಡರು. ಚೀಣಾ-ಭಾರತ ಘರ್ಷಣೆಯ ಸಮಯದಲ್ಲಿ ಸರಕಾರ ಅವರನ್ನು ಮತ್ತೆ ಬಂಧಿಸಿತು.

ಪಕ್ಷ ವಿಭಜನೆಗೊಂಡ ನಂತರ ಅವರು ಸಿಪಿಐ(ಎಂ)ಸೇರಿದರು. 1967ರಲ್ಲಿ ದಕ್ಷಿಣ ಕಲ್ಕತ್ತೆಯಿಂದ ಲೋಕಸಭೆಗೆ ಆಯ್ಕೆಗೊಂಡರು. 1988ರವರೆಗೆ ಅವರು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಸದಸ್ಯರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಸಂಘಟನೆಗಳಲ್ಲಿ ಅವರು ಸಕ್ರಿಯರಾಗಿದ್ದರು.

ಅವರು ಒಬ್ಬ ಉತ್ತಮ ವಾಗ್ಮಿ ಹಾಗೂ ಬರಹಗಾರರಾಗಿದ್ದರು. ಅವಿವಾಹಿತರಾಗಿದ್ದ ಕಾಂ.ಗಣೇಶ್ ಘೋಷ್ ತಮ್ಮ ಸರಳ ಜೀವನದಿಂದ ಹಲವರಲ್ಲಿ ಸ್ಫೂರ್ತಿ ತುಂಬಿದವರು.



ಕಾಂ ದಲೀಪ್ ಸಿಂಗ್ ಜೋಪಾಲ್

ಪಂಜಾಬಿನ ರೈತ ಮುಖಂಡ ಹಾಗೂ ಸಿಪಿಐ(ಎಂ) ರಾಜ್ಯ ಸೆಕ್ರಟಾರಿಯೆಟ್ ಸದಸ್ಯ ಕಾಂ. ದಲೀಪ್‌ಸಿಂಗ್ ಜೋಪಾಲ್ ನಿಧನ ಹೊಂದಿದ್ದಾರೆ. ಅವರಿಗೆ 70 ವರ್ಷ ವಯಸ್ಸಾಗಿತ್ತು. 1934 ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಆರುದಶಕಗಳ ಕಾಲ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ದುಡಿದರು. ಅವಿವಾಹಿತರಾಗಿದ್ದ ಅವರು ಕೊನೆಯುಸಿರುವರೆಗೂ ಪಕ್ಷದ ರಾಜ್ಯ ಕಛೇರಿಯಲ್ಲೇ ವಾಸಿಸುತ್ತಿದ್ದರು. ಐದು ಬಾರಿ ಜೈಲುವಾಸ, 8 ವರ್ಷ ಅಜ್ಞಾತವಾಸದಲ್ಲಿ ಕಳೆದ ಅವರು ತನ್ನ ರಾಜಕೀಯ ಜೀವನವುದ್ದಕ್ಕೂ ದುಡಿಯುವ ಜನಗಳ ಉದ್ಧಾರದ ಗುರಿಸಾಧನೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು.

ಪಕ್ಷದೊಳಗೂ ತಪ್ಪುದಾರಿ ಹಿಡಿಯದಂತೆ ಮಾಡುವ ಹೋರಾಟದಲ್ಲಿ ಕಾಂ. ಜೋಪಾಲ್ ಸತತ-ಹೋರಾಟ ನಡೆಸಿದರು. ಇದರ ಭಾಗವಾಗಿಯೇ 1964 ರಲ್ಲಿ ಪಕ್ಷ ಒಡೆದಾಗ ಸಿಪಿಐ(ಎಂ) ಸೇರಿದರು. ಇವರ ನಿಧನದಿಂದ ಪಕ್ಷ ಹಾಗೂ ದೇಶದ ಕಮ್ಯುನಿಸ್ಟ್ ಆಂದೋಲನ ಹಾಗೂ ಪಂಜಾಬಿನ ರೈತ ಆಂದೋಲನ ಒಬ್ಬ ಸಮರ್ಪಿತ ಸೈನಿಕನನ್ನು ಕಳಕೊಂಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ಹಾರ್ದಿಕ ಶ್ರದ್ಧಾಂಜಲಿ ಅರ್ಪಿಸುತ್ತಾ ಹೇಳಿದೆ.

'ಯಾವುದೇ ಅಪರಾಧಿ ತಪ್ಪಿಸಿಕೊಳ್ಳದಿರಲಿ'
ಬೀದರ್ ಶಾಂತಿಯಾತ್ರೆಯ ನಿರ್ಣಯ

"ನಾವು ಶಾಂತಿ, ಸೌಹಾರ್ದ ಹಾಗೂ ಕೋಮು ಸಾಮರಸ್ಯಕ್ಕಾಗಿ ದುಡಿಯುವುದಾಗಿ ಯಾವುದೇ ಧಾರ್ಮಿಕ ಮೂಲಭೂತವಾದಕ್ಕೆ ಅವಕಾಶ ಕೊಡುವುದಿಲ್ಲವೆಂದು ಘೋಷಿಸುತ್ತೇವೆ. ಮುಂದೆ ಯಾವುದೇ ಸಂದರ್ಭದಲ್ಲಿ ಶಾಂತಿ ಸ್ಥಾಪಿಸುವಲ್ಲಿ ಆಡಳಿತದೊಡನೆ ಕೆಲಸ ಮಾಡುವ ಜವಾಬ್ದಾರಿ ನಮಗಿದೆ."

ಇದು ಜನವರಿ 1ರಂದು ಬೀದರ್‌ನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಜಾತ್ಯಾತೀತ ಜನಗಳು ಅಂಗೀಕರಿಸಿದ ನಿರ್ಣಯದ ಒಂದು ಅಂಶ. ಡಿಸೆಂಬರ್ 7 ರಂದು ಹೀನ ಹಿಂಸಾಚಾರ ಕಂಡ ಈ ನಗರದ ಜನ ಅದು ಮರುಕಳಿಸದಂತೆ ಮಾಡುವ ಪ್ರಯತ್ನವಾಗಿ ನಡೆಸಿದ ಶಾಂತಿಯಾತ್ರೆಯ ನಂತರ ನಿರ್ಣಯ ಕೈಗೊಂಡಿದ್ದಾರೆ. ಬಿಜೆಪಿ ಬಿಟ್ಟು ಮತ್ತೆಲ್ಲಾ ರಾಜಕೀಯ ಪಕ್ಷಗಳು, ಸಾಮಾಜಿಕ ಸಂಘಟನೆಗಳು 'ಜನ ಏಕತಾ ಮಂಚ್' ಆಶ್ರಯದಲ್ಲಿ ಈ ನಿರ್ಣಯ ಅಂಗೀಕರಿಸಲಾಯಿತು. ಸಿಪಿಐ(ಎಂ)ನ ಸಂಗ್ರಾಮ್ ಈ ವೇದಿಕೆಯ ಸಂಚಾಲಕರು.

ಕೋಮಿನ ಮುಖಂಡರು ಎನಿಸಿಕೊಳ್ಳುವ ಜವಾಬ್ದಾರಿಯುತ ನಾಗರಿಕರು ನಿಜವಾದ ಅಪರಾಧಿಗಳನ್ನು ರಕ್ಷಿಸುವ ಪ್ರಯತ್ನ ಮಾಡದೆ ಆಡಳಿತದೊಂದಿಗೆ ಸಹಕರಿಸಬೇಕು. ಯಾವುದೇ ಮುಗ್ಧ ನಾಗರಿಕರನ್ನು ಈ ಘಟನೆಯ ಸಂದರ್ಭದಲ್ಲಿ ಶಿಕ್ಷಿಸಬಾರದು, ಅದೇ ರೀತಿ ನಿಜವಾದ ಅಪರಾಧಿ ಎಂದು ಅಭಿಪ್ರಾಯಪಟ್ಟಿರುವ ಈ ನಿರ್ಣಯ ಕಾನೂನುಪಾಲಕರು ಪ್ರಾಮಾಣಿಕರಾಗಿದ್ದಲ್ಲಿ, ನಿಷ್ಪಕ್ಷಪಾತಿಗಳಾಗಿದ್ದಲ್ಲಿ ಸಾರ್ವಜನಿಕ ಸಹಕಾರ ಅವರಿಗೆ ಖಂಡಿತಾ ಸಿಗುತ್ತದೆ ಎಂಬುದನ್ನು ತಿಳಿದಿರಬೇಕು ಎಂದು ಈ ನಿರ್ಣಯ ಹೇಳಿದೆ.

ಲೋಗಾಂವ ಗ್ರಾಮದಲ್ಲಿ ಪ್ರಾಂತ ರೈತ ಸಂಘ ಸ್ಥಾಪನೆ

ವಿಜಾಪುರ ತಾಲೂಕಿನ ಲೋಗಾವ ಗ್ರಾಮದಲ್ಲಿ ದಿ. 21-12-92ರಂದು ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಕಾರರ ಸಂಘಗಳ ಘಟಕಗಳನ್ನು ಸ್ಥಾಪಿಸಲಾಗಿದೆ. ರೈತ ಮುಖಂಡ ಭೀಮಸಿ ಕಲಾದಗಿ ಉದ್ಘಾಟನೆ ನಡೆಸಿದರು. ತಮ್ಮನ್ನು ಆಳುತ್ತಿರುವ ಸರಕಾರಗಳು ರೈತರು ದೇಶದ ಬೆನ್ನೆಲುಬು ಎಂದು ಹೇಳುತ್ತಾ ರೈತರಿಗೆ ಯಾವುದೇ ಸೌಲಭ್ಯ ಕೊಡದೇ ವಂಚಿಸುತ್ತಿರುವುದರಿಂದ ರೈತರೆಲ್ಲರೂ ಒಗ್ಗಟ್ಟಾಗಿ ರೈತ ಸಂಘಗಳ ಮುಖಾಂತರ ರೈತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆಂದು ಅವರು ರೈತರಿಗೆ ಕರೆ ಕೊಟ್ಟರು. ಮತ್ತು ಜೋಳದ ಬೆಳೆಗಳಿಗೆ ಕೀಟಗಳು ತಗಲುತ್ತಿದ್ದು ರೈತರು ಹಾನಿ ಅನುಭವಿಸುವ ಸ್ಥಿತಿಯಲ್ಲಿ ಇದೇ. ಸರಕಾರ ಮುಂದೆ ಬಂದು ಜೋಳಕ್ಕೆ ಹತ್ತಿರುವ ಕ್ರಿಮಿ ಕೀಟಕ ನಾಶ ಔಷಧಿಗಳನ್ನು ಪೂರೈಸಬೇಕೆಂದು ಸರಕಾರಕ್ಕೆ ಒತ್ತಾಯಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಿವೈಎಫ್‌ಐ ಕಾರ್ಯದರ್ಶಿ ಸದಾನಂದ ಮೋದಿ ಮಾತನಾಡಿ ಗ್ರಾಮ ಮಟ್ಟದಲ್ಲಿ ರೈತರು ಅನಕ್ಷರತೆ ಮೂಢನಂಬಿಕೆಗಳನ್ನ ಹೊಗಲಾಡಿಸಲು ಇಂದು ನಡೆಯುತ್ತಿರುವ ಸಾಕ್ಷರತೆ ಆಂದೋಲನದಲ್ಲಿ ತಂದು ಎಲ್ಲರನ್ನು ಸಾಕ್ಷರರನ್ನಾಗಿ ಮಾಡಿ ರೈತರು ವಿಚಾರವಂತರಾಗಬೇಕೆಂದು ರೈತ ಸಂಘದ ಸ್ಥಾಪಕರಿಗೆ ಕರೆ ಕೊಟ್ಟರು. ಅತಿಥಿಗಳಾಗಿ ಮಾತನಾಡಿದ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಮಳಸಿದ್ದ ನಾಯಿಕೋಡಿ, ಜನವಾದಿ ಮಹಿಳಾ ಸಂಘಟನೆ ಸಂಚಾಲಕಿ ಅನಸೂಯಾ ಕಾಶಿ ರೈತರೆಲ್ಲಾ ಒಗ್ಗಟ್ಟಾಗಿ ತಮ್ಮ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು ಮತ್ತು ರೈತ ಸಂಘಗಳ ಹೋರಾಟಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರನ್ನು ಇಳಿಸಬೇಕೆಂದು ಕೇಳಿಕೊಂಡರು.

ವೇದಿಕೆ ಮೇಲೆ ಗ್ರಾಮ ಗ್ರಾಮದ ಸದಾಶಿವ ಮಾಳಿ, ಲಕ್ಷ್ಮಣ ಬಗಲಿ ಇನ್ನಿತರರು ಉಪಸ್ಥಿತರಿದ್ದರು. ಹಾಗೂ ಸೋಮುಲು ರಾಠೋಡ, ರೈತ ಸಂಘದ ಮುಖಂಡರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರೈತ ಸಂಘ ಹಾಗೂ ಕೃಷಿ ಕೂಲಿಕಾರರ ಸಂಘಗಳು ಕಮಿಟಿಯನ್ನು ರಚಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಕೆಲವು ಬೇಡಿಕೆಗಳನ್ನು ಈಡೇರಿಸುವಂತೆ ನಿರ್ಣಯ ಕೈಗೊಳ್ಳಲಾಯಿತು.

ಸಭೆಯ ಅಧ್ಯಕ್ಷತೆಯನ್ನು ವಿಜಯಗೌಡ ಬಿ ಪಾಟೀಲ ಇವರು ವಹಿಸಿದ್ದರು. ಸುರೇಶ ಒಪ್ಪರಗಿ ಸ್ವಾಗತ ಕೋರಿದರು, ಪ್ರಕಾಶ ಬೀರಾದಾರ ಅವರು ವಂದಿಸಿದರು.

ಬತ್ತನಹಳ್ಳಿಯಲ್ಲಿ ಪೋಲಿಸರ ಅತ್ಯಾಚಾರ

"ದಿನಾಂಕ 6-11-92ರಂದು ಕೊಟ್ಟೂರಿನಿಂದ ಸುಮಾರು 12ಕಿ.ಮಿ. ದೂರದಲ್ಲಿರುವ ಬತ್ತನಹಳ್ಳಿ ಗ್ರಾಮಕ್ಕೆ ಬೆಳಿಗ್ಗೆ ಸುಮಾರು 7.20ಕ್ಕೆ ಸರಿಯಾಗ ಈ ಗ್ರಾಮದ ಸುತ್ತಮುತ್ತ ಪೋಲೀಸರು ಆಕ್ರಮಣ ನಡೆಸಿದರು. ಬತ್ತನಹಳ್ಳಿಯ ಜನರು ಅವರ ಆಕ್ರಮಣದಿಂದ ತತ್ತರಿಸಿ ಚೆಲ್ಲಾಪಿಲ್ಲಿಯಾಗಿ ತಮಗೆ ದಿಕ್ಕು ತೋಚಿದ ಕಡೆಗೆ ಓಡಿಹೋದರು. ಅಲ್ಲಿ ಉಳಿದ ಮುದುಕರು ಮತ್ತು ಓಡಲು ಬಾರದವರನ್ನು ಹಿಡಿದರು. ಅದರಲ್ಲಿ ಜಿ.ನಾಗಪ್ಪ ಎನ್ನುವ ವ್ಯಕ್ತಿಯನ್ನು ಹಿಡಿದು ಸುಮಾರು 6ಜನ ಪೋಲೀಸರು ಆತನನ್ನು ತಮಗೆ ಮನಸ್ಸಿಗೆ ತೋಚಿದ ಹಾಗೆ ಹೊಡೆದರು. ಆ ಹೊಡೆತಕ್ಕೆ ಆತನ ಕಾಲಿನಲ್ಲಿ ಕೈಗಳಲ್ಲಿ ರಕ್ತಬರಲು ಪ್ರಾರಂಭಿಸಿತು. ನಂತರ ವೆಂಕಟೇಶ ಎಂಬುವವರಿಗೆ ಪೋಲೀಸರು ಪ್ರಜ್ಞೆ ತಪ್ಪುವ ಹಾಗೆ ಹೊಡೆದರು. ಅವನು ಕೆಳಕ್ಕೆ ಬಿದ್ದಾಗ ಅವನನ್ನು ಬಿಟ್ಟು ಉಳಿದ ಜನರನ್ನು ತಮ್ಮ ಜೀಪಿನಲ್ಲಿ ಕೂಡಿಸಿದರು. ವೆಂಕಣ್ಣ ಎಂಬುವರ ಮನೆಗೆ ಹೋಗಿ ಆತನ ಹೆಂಡತಿ ಸುಬ್ಬಕ್ಕನನ್ನು ಬಾಯಿಗೆ ಬಂದಂತೆ ಕೆಟ್ಟ ಶಬ್ದಗಳಿಂದ ಬೈದು, ಅವರಿಗೆ ಗಾಯಗಳಾಗುವಂತೆ ಹೊಡೆದರು. ನಂತರ ಅವರ ಮನೆಯಲ್ಲಿದ್ದ ಕೊಳಗ, ಪಂಪ್‌ಸೆಟ್‌ನ ಸ್ಟಾರ್ಟರ್‌ನನ್ನು ತೆಗೆದುಕೊಂಡು ತಮ್ಮ ಜೀಪಿನಲ್ಲಿ ಹಾಕಿಕೊಂಡರು. 23 ವರ್ಷ ವಯಸ್ಸಿನ ರತ್ನಮ್ಮನ ಮನೆಗೆ ನುಗ್ಗಿ ಕೆಟ್ಟ ಮಾತಿನಿಂದ ಬೈದು ಚೇಷ್ಟೆ ಮಾಡಲು ಪ್ರಾರಂಭಿಸಿದರು. ಇದಕ್ಕೆ ಹೆದರಿ ರತ್ನಮ್ಮ ಚೀರಿದಾಗ ಅವಳನ್ನು ಬಿಟ್ಟರು. ಅವರ ಮನೆಯಲ್ಲಿದ್ದ ಗೊಬ್ಬರದ ಚೀಲಗಳನ್ನು ತೆಗೆದುಕೊಂಡು ಹೋದರು. ಹೀಗೆ ಇನ್ನುಳಿದ ಹೆಣ್ಣು ಮಕ್ಕಳನ್ನು ಬಾಯಿಗೆ ಬಂದ ಹಾಗೆ ಬೈದು ಊರಿನ ತುಂಬಾ ಓಡಿಸಿದರು ಈ ರೀತಿಯಾಗಿ ಇಡೀ ಬತ್ತನಹಳ್ಳಿಯಲ್ಲಿ ಪೋಲೀಸರು ದೌರ್ಜನ್ಯದಿಂದ ಅಲ್ಲೋಲಕಲ್ಲೋಲ ಮಾಡಿ ಸಿಕ್ಕ 7 ಜನರನ್ನು ಹೊಡೆದು ಕರೆದುಕೊಂಡು ಹೋದರು" ಇದು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಡಿವೈಎಫ್‌ಐ ಕೂಡ್ಲಿಗಿ ತಾಲೂಕು ಸಮಿತಿ ಕೂಡ್ಲಿಗಿ ತಹಸೀಲ್ದಾರರಿಗೆ ನೀಡಿದ ಮನವಿಯ ಒಂದು ಅಂಶ.

ಈಗ ಬತ್ತನಹಳ್ಳಿಯಲ್ಲಿದ್ದ ಯಾವ ಗಂಡಸರೂ ಉಳಿಯುವಂತಿಲ್ಲ. ಅವರು ಅಡವಿಗಳಲ್ಲಿ ತಮ್ಮ ಜೀವನ ಕಳೆಯುವಂತಾಗಿದೆ. ಇದಕ್ಕೆ ಕಾರಣ ಈ ಪೋಲೀಸರೇ. ಅವರ ದೌರ್ಜನ್ಯಕ್ಕೆ ಹೆದರಿದ ಈ ಜನ ಊರು ಸೇರುವಂತೆ ಮಾಡಬೇಕು ಎಂದು ಈ ಮನವಿಯ ಮೂಲದ ಒತ್ತಾಯಿಸಿದೆ.

ಎಸ್‌ಎಫ್‌ಐ ಸ್ಥಾಪನಾ ದಿನಾಚರಣೆ

ಎಸ್‌ಎಫ್‌ಐನ ಸ್ಥಾಪನಾ ದಿನಾಚರಣೆ ಶಿರಾಲಿಯಲ್ಲಿ ನಡೆಯಿತು. ಈ ಸಭೆಯಲ್ಲಿ ಮುಖ್ಯ ಉಪನ್ಯಾಸಕರಾಗಿ ಎಸ್‌ಎಫ್‌ಐ ಉ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಸುಭಾಶ್ ಕೊಪ್ಪಿಕರ ಎಸ್‌ಎಫ್‌ಐ ನಡೆದು ಬಂದ ದಾರಿ, ಅದರ ಇತಿಹಾಸದ ಕುರಿತು ಸುದೀರ್ಘವಾಗಿ ಮಾತನಾಡಿದರು. ಪ್ರಗತಿಪರ ವಿದ್ಯಾರ್ಥಿ ಸಂಘಟನೆಯಾದ ಎಸ್‌ಎಫ್‌ಐ ತನ್ನ ಪತಾಕೆಯಲ್ಲಿ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಸಮಾಜವಾದ ಘೋಷಣೆಯನ್ನು ಎತ್ತಿ ಹಿಡಿದಿದೆ ಎಂದು ವಿವರಣಾತ್ಮಕವಾಗಿ ಮಾತನಾಡಿದರು.

ತಾಲೂಕಿಗೆ ವಿವಿಧ ಶಾಲಾ-ಕಾಲೇಜು ಎಸ್‌ಎಫ್‌ಐ ಸದಸ್ಯರು ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸುದ್ದಿಗಳು

ಪುಟ 7ರಿಂದ

ಅಧ್ಯಕ್ಷರಾಗಿಯೂ, ಕಾರ್ಯದರ್ಶಿ ಮತ್ತು ಜೊತೆ ಕಾರ್ಯದರ್ಶಿಯಾಗಿ ಮೋಹನ್ ದಾಸ್ ಮತ್ತು ಮಹಮ್ಮದ್ ಅಶ್ರಾಫ್‌ನವರನ್ನೊಳಗೊಂಡ 25 ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಸಿಂಧನೂರು

ಕೋಮು ಸೌಹಾರ್ದತೆಗೆ ಸಹಿ ಸಂಗ್ರಹ ಚಳುವಳಿ ನಡೆಸಲು ಇಂದು ಸೇರಿದ ಡಿವೈಎಫ್‌ಐನ 3ನೇ ತಾಲೂಕು ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ದಿನಾಂಕ 3-1-93ರಂದು ಡಿವೈಎಫ್‌ಐ ಸಿಂಧನೂರು ತಾಲೂಕು ಮೂರನೇ ಸಮ್ಮೇಳನವು ಜ್ಯೋತಿ ಮಹಿಳಾ ಸಮಾಜದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಮ್ಮೇಳನದ ಉದ್ಘಾಟನೆಯನ್ನು ಪುರಸಭಾ ಸದಸ್ಯರಾದ ರಾಜಶೇಖರ ಪಾಟೀಲ್ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕಾಂ.ಪಿ.ಲಿಂಗಪ್ಪ ಜಿಲ್ಲಾ ಕಾರ್ಯದರ್ಶಿಗಳು ಸಿಪಿಐ(ಎಂ) ಮತ್ತು ಯಂಕಪ್ಪ ಪಿ.ಅಂಡ್ ಟಿ. ನೌಕರರು ಆಗಮಿಸಿದ್ದರು. ಡಿವೈಎಫ್‌ಐನ ಕಾರ್ಯಚಟುವಟಿಕೆಗಳ ಕುರಿತು ವಿಮರ್ಶೆ ನಡೆದು ಸಮ್ಮೇಳನದಲ್ಲಿ ಈ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಕೋಮು ಸೌಹಾರ್ದತೆಗಾಗಿ ಸಹಿ ಸಂಗ್ರಹ ಚಳುವಳಿ, ನೆರೆಹಾವಳಿಯ ಸಂತ್ರಸ್ತರಿಗೆ ತೀವ್ರ ಪರಿಹಾರ ಧನ ಹಂಚಿಕೆ ಮತ್ತು ಬೆಳೆ ಹಾನಿ ಮತ್ತು ಪಂಪ್‌ಸೆಟ್ ಹಾನಿ ಬಗ್ಗೆ ತೀವ್ರ ಪರಿಹಾರ ಧನ ಹಂಚಿಕೆ, ವಿಜಯನಗರ ಉಕ್ಕಿನ ಕಾರ್ಖಾನೆಗೆ ಒತ್ತಾಯ, ಸಿಂಧನೂರಿನಿಂದ ರಾಯಚೂರು, ಬಳ್ಳಾರಿ, ಕುಷ್ಟಗಿ, ಗಂಗಾವತಿ ಕಡೆಗೆ ಹೋಗುವ ರಸ್ತೆ ದುರಸ್ಥಿಗೆ ಒತ್ತಾಯ, ತಾಲೂಕಿನಲ್ಲಿ ಪದಿತರ ಚೀಟಿ ಹಂಚಿಕೆ, ತಾಲೂಕಿನ ಮಹಿಬೂಬ ಕಾಲೋನಿ, ಜನತಾ ಕಾಲೋನಿ, ಎ.ಕೆ.ಜಿ. ನಗರ, ನಾರಾಯಣ ನಗರ ಕ್ಯಾಂಪ್, ಬಳಗಾನೂರು ದಢೇಸುಗ್ಗೂರುದಲ್ಲಿ ಶೀಘ್ರ ಪಟ್ಟಾ ಹಂಚಿಕೆ, ದಢೇಸುಗ್ಗೂರ್‌ನಲ್ಲಿ ಸಾರ್ವಜನಿಕ ಆಸ್ಪತ್ರೆ ಉದ್ಘಾಟನೆಗೆ ಒತ್ತಾಯ ಮತ್ತು ಸಾರ್ವಜನಿಕ ಗ್ರಂಥಾಲಯ ಪಶು ಚಿಕಿತ್ಸಾಲಯದ ಪ್ರಾರಂಭಕ್ಕೆ ಒತ್ತಾಯ, ಬಂಗಾಲಿ ಕ್ಯಾಂಪ್ ನಂ. 3ರಲ್ಲಿ ವಿದ್ಯುತ್ ಪೂರೈಕೆಗೆ ಒತ್ತಾಯ, ಮಹಿಬೂಬ ಕಾಲೋನಿಯ ಬೀದಿ ಲೈಟ್‌ಗಳ ದುರಸ್ತಿ ಮತ್ತು ಮಹಿಳಾ ಶೌಚಾಲಯಕ್ಕಾಗಿ ಒತ್ತಾಯ.

ನೂತನ ಸಮಿತಿಯಲ್ಲಿ ಅಧ್ಯಕ್ಷರಾಗಿ ವಿಶ್ವನಾಥ್, ಉಪಾಧ್ಯಕ್ಷರಾಗಿ ರಮೇಶ್ ಗೆಜ್ಜಲಗಟ್ಟಿ, ಕಾರ್ಯದರ್ಶಿಯಾಗಿ ಸುಭಾಷ್ ಟೇಲರ್, ಸಹಕಾರ್ಯದರ್ಶಿಯಾಗಿ ತುಳಜಾರಾಮ್, ಖಜಾಂಚಿಯಾಗಿ ನಾರಾಯಣ ಕಿಲ್ಲೇದ್, ಹಾಗೂ 5 ಜನ ಸದಸ್ಯರನ್ನೊಳಗೊಂಡ ನೂತನ ಸಮಿತಿಯನ್ನು ರಚಿಸಲಾಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಂ.ಶರಬಣ್ಣ ನಾಗ್ಲಾಪುರ ವಹಿಸಿದ್ದರು. ಸಭೆಯ ಪ್ರಾರಂಭದಲ್ಲಿ ಕಾಂ.ಎಸ್. ದೇವೇಂದ್ರಗೌಡ ಸ್ವಾಗತ ಕೋರಿದರು ವಂದನಾರ್ಪಣೆಯನ್ನು ಕಾಂ.ತುಳಜಾರಾಮ್ ಸಲ್ಲಿಸಿದರು.

* * * * * *

ಬಿ.ಜೆ.ಪಿ. ಸರ್ಕಾರಗಳನ್ನು ವಜಾ ಮಾಡಲು 356 ನೇ ಕಲಮಿನ ಉಪಯೋಗ

-ಸಿ.ಪಿ.ಎಂ. ಬೆಂಬಲ ಏಕೆ?-

356ನೇ ಕಲಮು ಸಂವಿಧಾನದ ಪ್ರಜಾಪ್ರಭುತ್ವ-ವಿರೋಧಿ ಅಂಶಗಳಲ್ಲೊಂದು. ಇದರ ವಿರುದ್ಧ 1959 ರಿಂದಲೇ ಕಮ್ಯುನಿಸ್ಟರು ನಿರಂತರ ಹೋರಾಟ ನಡೆಸಿಕೊಂಡು ಬಂದಿದ್ದಾರೆ. ಆ ಹೋರಾಟ ಮುಂದುವರಿಯುತ್ತದೆ.

ಬಿ.ಜೆ.ಪಿ.ಯ ಮೂರು ಸರಕಾರಗಳನ್ನು ವಜಾ ಮಾಡುವಲ್ಲಿ ಈ ಕಲಮಿನ ಬಳಕೆ ಒಂದು ಗಂಭೀರ ರಾಷ್ಟ್ರೀಯ ಅಪಾಯದ ಹಿನ್ನೆಲೆಯಲ್ಲಿ, ಸಂವಿಧಾನವನ್ನೇ ಬುಡಮೇಲು ಮಾಡುವ ಪ್ರಯತ್ನಗಳ ಹಿನ್ನೆಲೆಯಲ್ಲಿ ನಡಿದಿದೆ ಎಂಬುದನ್ನು ಗಮನದಲ್ಲಿಡಬೇಕು. ಈ ಬಗ್ಗೆ ಸಿಪಿಐ(ಎಂ) ನ್ನು ಟೀಕಿಸುವ ಬಿ.ಜೆ.ಪಿ.ಯೇತರ ಮಂದಿ ಕೋಮುವಾದೀ ಅಪಾಯದ ಪೂರ್ಣ ಸ್ವರೂಪವನ್ನು ಅರಿತಿಲ್ಲ ಎಂದೇ ಹೇಳಬೇಕು.

ಕೇಂದ್ರ ರಾಜ್ಯ ಸಂಬಂಧಗಳನ್ನು ಪುನರ್ರಚಿಸಬೇಕೆಂದು ಸಿಪಿಐ(ಎಂ) ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಹೋರಾಟ ನಡೆಸುತ್ತಿದೆ. 1960-70ರ ಪಶ್ಚಿಮಬಂಗಾಳ, ಕೇರಳದ ಸಿಪಿಐ(ಎಂ) ನೇತೃತ್ವದ ಸಂಯುಕ್ತರಂಗ ಸರಕಾರಗಳು ಈ ಹೋರಾಟದ ಮುಂಚೂಣಿಯಲ್ಲಿದ್ದವು. ಈ ಎಲ್ಲಾ ಹೋರಾಟಗಳ ಪರಿಣಾಮವಾಗಿ 1983 ರಲ್ಲಿ ಶ್ರೀನಗರದಲ್ಲಿ ನಡೆದ ಸಮ್ಮೇಳನ ಕೇಂದ್ರ ರಾಜ್ಯ ಸಂಬಂಧಗಳ ಕುರಿತು ಒಂದು ಐಕ್ಯ ಹಾಗೂ ಸಮಗ್ರ ನಿಲುವು ರೂಪುಗೊಂಡಿತು.

ಈ ಹೋರಾಟದ ಭಾಗವಾಗಿಯೇ ಸಿಪಿಐ(ಎಂ) ಸಂವಿಧಾನದ 356 ನೇ ಕಲಮನ್ನು ವಿರೋಧಿಸಿತ್ತಾ ಬಂದಿದೆ ಏಕೆ? ಶ್ರೀಮತಿ ಇಂದಿರಾಗಾಂಧಿ ಕಾಲದಲ್ಲಿ ಅಧಿಕಾರಗಳ ವಿಪರೀತ ಕೇಂದ್ರೀಕರಣ ನಡೆಯಿತು-ಎಲ್ಲಾ ರಂಗಗಳಲ್ಲಿ ಆರ್ಥಿಕ, ಹಣಕಾಸು ಸಂವಿಧಾನ ಮತ್ತು ರಾಜಕೀಯ ರಂಗಗಳಲ್ಲಿ. ಆದ್ದರಿಂದ ಸಂವಿಧಾನಿಕ ಮತ್ತು ರಾಜಕೀಯರಂಗಗಳಲ್ಲಿ ಸಿಪಿಐ(ಎಂ) ಮತ್ತು ಪ್ರಜಾಪ್ರಭುತ್ವಾದಿಗಳ ಶಕ್ತಿಗಳು ಸಂವಿಧಾನದ 356 ನೇ ಕಲಮನ್ನು ರದ್ದು ಮಾಡಬೇಕೆಂದು ಒತ್ತಾಯಿಸಿದವು. ಏಕೆಂದರೆ ಈ ಕಲಮಿನ ಪ್ರಕಾರ ಒಂದು ರಾಜ್ಯದ ರಾಜ್ಯಪಾಲರ ವರದಿಯ ಆಧಾರದ ಮೇಲೆಯೇ ಅಥವಾ ಬೇರೆ ಯಾವ ವಿಧದಲ್ಲಿಯೇ ಆ ರಾಜ್ಯದಲ್ಲಿ ಸಂವಿಧಾನಿಕ ವ್ಯವಸ್ಥೆ ಮುಂದುಬಿದ್ದಿದೆ ಎಂದು ಕೇಂದ್ರ ಸರಕಾರಕ್ಕೆ ಅನಿಸಿದ್ದರೆ ಆ ರಾಜ್ಯ ಸರಕಾರವನ್ನು ವಜಾಮಾಡಬಹುದು. ಈ ಕರಾಳ ಕಲಮನ್ನು ಮೊದಲು 1959 ರಲ್ಲಿ ಕೇರಳದ ಮೊದಲ ಕಮ್ಯುನಿಸ್ಟ್‌ಮಂತ್ರಿಮಂಡಳದ ವಿರುದ್ಧ ಕಾಂಗ್ರೆಸ್ ಕೇಂದ್ರ ಪ್ರಯೋಗಿಸಿತು. ಅಂದಿನಿಂದ ಇದುವರೆಗೆ ತಾವೂ 80 ಕ್ಕೂ ಹೆಚ್ಚು ಬಾರಿ ಕಾಂಗ್ರೆಸ್ ಪಕ್ಷದ ಸಂಕುಚಿತ ಹಿತಾಸಕ್ತಿ ಸಾಧಿಸಲು ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಈ ಕಲಮನ್ನು ಬಳಸಿಕೊಳ್ಳಲಾಗಿದೆ. 1971 ರಲ್ಲಿ ಪಶ್ಚಿಮಬಂಗಾಳ ಅಸೆಂಬ್ಲಿಯಲ್ಲಿ ಸಿಪಿಐ(ಎಂ) ಅತಿ ದೊಡ್ಡ ಪಕ್ಷವಾಗಿ ಗೆದ್ದು ಬಂದಾಗ, 1983 ರಲ್ಲಿ ದೊಡ್ಡ ಬಹುಮತ ಹೊಂದಿದ್ದ ಎನ್. ಅಂಡಾಮಾನ್ ಸರಕಾರವನ್ನೂ, 1991 ರಲ್ಲಿ ಚಂದ್ರಶೇಖರ್ ಸರಕಾರ ಡಿ.ಎಂ.ಕೆ. ಸರಕಾರವನ್ನು ಹಾಗೂ ಇತ್ತೀಚೆಗೆ ರಾಜ್ಯಪಾಲರ ಹೇರಿಕೆಗೆ ವ್ಯತಿರಿಕ್ತವಾಗಿ ನಾಗಾಲ್ಯಾಂಡ್ ಸರಕಾರವನ್ನು ವಜಾಮಾಡಿದ್ದು ಕೆಲವು ಮುಖ್ಯ ಉದಾಹರಣೆಗಳಷ್ಟೇ.

ಮತ್ತೆ ಮತ್ತೆ ಪ್ರಜಾಪ್ರಭುತ್ವದ, ಸಂಸದೀಯ ಪ್ರಜಾಸತ್ತೆಯ ಕೊಲೆಗೈಯುಲು ಬಳಸಿರುವ ಈ ಕಲಮಿನ ವಿರುದ್ಧ 1959 ರಲ್ಲಿ ಕಮ್ಯುನಿಸ್ಟರು ಆರಂಭಿಸಿದ ಹೋರಾಟ ಈಗ ಒಂದು ಒಕ್ಕೂಟ ವ್ಯವಸ್ಥೆಗಾಗಿ ಹೋರಾಟದ ಅತ್ಯಗತ್ಯ ಅಂಶವೆಂದು ಬಹುಮಂದಿ ಹೇಳುವಂತಾಗಿದೆ. ಗಮನಿಸಬೇಕಾದ ಸಂಗತಿಯೆಂದರೆ ಈ ಯಾವುದೇ ಹೋರಾಟದಲ್ಲಿ ಹಿಂದಿನ ಜನಸಂಘವಾಗಲಿ, ಈಗಿನ ಬಿ.ಜೆ.ಪಿ.ಯಾಗಲೀ ಎಂದೂ ಸೇರಿಲಿಲ್ಲ. 356ನೇ ಕಲಮನ್ನು ತೆಗೆಯಬೇಕೆಂದು ಅದು ಎಂದೂ ಒತ್ತಾಯಿಸಲೇ ಇಲ್ಲ. ಬದಲಾಗಿ ಬಿ.ಜೆ.ಪಿ. ತನ್ನ ರಾಜ್ಯ ಸರಕಾರಗಳ ರಚನೆಯಾಗುವವರೆಗೂ ರಾಜ್ಯಗಳ ಸ್ವಾಯತ್ತತೆಯ ಬೇಡಿಕೆಯನ್ನೇ ವಿರೋಧಿಸುತ್ತಿತ್ತು. 1959, ರಲ್ಲಿ ಕೇರಳದಲ್ಲಿ, 1971 ರಲ್ಲಿ ಪಶ್ಚಿಮಬಂಗಾಳದಲ್ಲಿ ರಾಷ್ಟ್ರಪತಿ ಆಳ್ವಿಕೆಯ ಹೇರಿಕೆಯನ್ನು ಜನಸಂಘ ಪೂರ್ಣವಾಗಿ ಬೆಂಬಲಿಸಿತ್ತು. 1991 ರಲ್ಲಿ ಡಿ.ಎಂ.ಕೆ. ಸರಕಾರದ ವಜಾವನ್ನು ಬಿ.ಜೆ.ಪಿ. ಬೆಂಬಲಿಸಿತ್ತು. ಈಗ ಮಾತ್ರ ತನ್ನ ಸರಕಾರಗಳೇ ಇದರ ಪ್ರಕಾರ ವಜಾ ಆದಾಗ ಬೊಬ್ಬೆಹಾಕುತ್ತಿದೆ.

ವಿಶಿಷ್ಟ ಗಂಭೀರ ಸನ್ನಿವೇಶ

ಅದಿರಲಿ, ಸಿಪಿಐ(ಎಂ) 356 ನೇ ಕಲಮನ್ನು ಸತತವಾಗಿ ವಿರೋಧಿಸಿಕೊಂಡು ಬಂದಿದ್ದರೂ ಇತ್ತೀಚೆಗೆ ಬಿ.ಜೆ.ಪಿ. ಸರಕಾರಗಳ ವಜಾವನ್ನೇಕೆ ವಿರೋಧಿಸಲಿಲ್ಲ ಬದಲಾಗಿ ಸ್ವಾಗತಿಸಿತು? ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.

ಡಿಸೆಂಬರ್ 6 ರ ಘಟನೆಯ ನಡೆದ ದಿನವೇ ಉತ್ತರಪ್ರದೇಶದ ಬಿ.ಜೆ.ಪಿ. ಸರಕಾರದ ಮೇಲೆ 356 ನೇ ಕಲಮಿನ ಪ್ರಹಾರವಾಯಿತು. ನಂತರ ಮೂರು ಬಿ.ಜೆ.ಪಿ. ಸರಕಾರಗಳ ವಜಾವನ್ನು ವಿರೋಧಿಸಿದವರೂ ಕೂಡಾ ಕಲ್ಯಾಣ್‌ಸಿಂಗ್ ಸರಕಾರದ ವಜಾವನ್ನು ವಿರೋಧಿಸಲಿಲ್ಲ. ಅದು ಅನಿವಾರ್ಯವಾಗಿತ್ತು ಎಂದು ಭಾವಿಸಿದ್ದರು ಎಂಬುದನ್ನು ಗಮನಿಸಬೇಕು.

ತನ್ನ ಇತರ ಸೋದರ ಸಂಘಟನೆಗಳೊಂದಿಗೆ ಬಾಬ್ರಿಮಸೀದಿ ಕೆಡವಿದ ಪಕ್ಷದ ಆಳ್ವಿಕೆಯಲ್ಲಿದ್ದ ಈ ನಾಲ್ಕು ರಾಜ್ಯ ಸರಕಾರಗಳಲ್ಲಿ ಉತ್ತರಪ್ರದೇಶ ಸರಕಾರ ಸುಪ್ರೀಂ ಕೋರ್ಟಿಗೆ ನಿರ್ಮಾಣ ಕಾರ್ಯ ನಡೆಯುವುದಿಲ್ಲ ಎಂದು ಹೇಳಿ ಭರವಸೆ ನೀಡಿ ಸಮಯಾವಕಾಶ ಪಡೆಯುವುದು, ಉಳಿದ ಮೂರು ಸರಕಾರಗಳು ಆರ್.ಎಸ್. ಎಸ್,-ವಿ.ಹೆಚ್.ಪಿ. ಬೆಂಬಲಿಗರನ್ನು ಕಲೆ ಹಾಕಿ ಅಯೋಧ್ಯೆಗೆ ಕಳಿಸುವುದು- ಇದು ತಮ್ಮ ತಂತ್ರ ಎಂದು ಈ ಕೂಟದ ಮಂದಿಯೇ ಹೇಳುತ್ತಾರೆ. ಆರ್.ಎಸ್.ಎಸ್. ಮುಖವಾಗಿ 'ಆರ್ಗನೈಸರ್'ನ ಡಿಸೆಂಬರ್ 13, 1992 ರ ಸಂಚಿಕೆ ಈ ಕಾರ್ಯತಂತ್ರದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದೆ. ಈ ಸರಕಾರಗಳ ಮಂತ್ರಿಗಳು 'ಕರಸೇವೆ'ಯಲ್ಲಿ ಭಾಗವಹಿಸುವುದಾಗಿ ಬಹಿರಂಗವಾಗಿಯೇ ಘೋಷಿಸಿದರು.

ಇನ್ನು ಕರಸೇವಕರನ್ನು ಕಳಿಸಿಕೊಡುವ ಸಮಾರಂಭಗಳಲ್ಲಿ ಸಕ್ರಿಯರಾಗಿದ್ದರು. ಉತ್ತರಪ್ರದೇಶ ಬಿ.ಜೆ.ಪಿ. ಸರಕಾರಗಳ ನೇತೃತ್ವದಲ್ಲಿ ಉಳಿದ ಮೂರು ಬಿ.ಜೆ.ಪಿ. ಸರಕಾರಗಳು ಸುಪ್ರಿಂ ಕೋರ್ಟ್ ಆದೇಶಕ್ಕೆ ಸಂವಿಧಾನಕ್ಕೆ, ಕಾನೂ... ಆಳ್ವಿಕೆಗೇ ... ಸವಾಲೊಡ್ಡುವ ಚಟುವಟಿಕೆಗಳಲ್ಲಿ ತೊ... ಗಿದ್ದರು.

ಮಸೀದಿ ಕೆಡವಿದ ನಂತರ ಈ ಮೂ... ರಲ್ಲಿ ಯಾವ ಮುಖ್ಯಮಂತ್ರಿಯೂ ಅದ... ಖಂಡಿಸಿಲ್ಲ. ಪಟ್ವಾರವರಂತೂ 'ತೃಪ್ತಿ' ... ಪಡಿಸಿದರು. ಡಿಸೆಂಬರ್ 10 ರಂದು ಆರ್.ಎಸ್.ಎಸ್. ಇತ್ಯಾದಿ ಸಂಘಟನೆಗಳ ಮೇ... ನಿರ್ಬಂಧ ಹೇರಿದಾಗ ಈ ಸರಕಾರಗಳ ... ತ್ವಕ್ಕೆ ಅರ್ಥವೇ ಇರಲಿಲ್ಲ. ಏಕೆಂದರೆ ಈ ... ಕಾರಗಳ ಮುಖ್ಯಮಂತ್ರಿ ಇತರ ಹಲವಾ... ಮಂತ್ರಿಗಳು ಈ ನಿರ್ಬಂಧಿತ ಸಂಘಟನೆ... ಸದಸ್ಯರಾಗಿದ್ದರು. "ಆರ್.ಎಸ್.ಎಸ್." ನಿರ್ಬಂಧಿಸುವುದಾದರೆ ನನ್ನೇ ಬಂಧಿ... ಕೊಳ್ಳಬೇಕು" ಎಂದು ಹಿಮಾಚಲ ಪ್ರದೇ... ಮುಖ್ಯಮಂತ್ರಿ ಶಾಂತಕುಮಾರು ಉದ್ಗರಿ... ದರು. ಆದರೆ ನಂತರ ಈ ನಿರ್ಬಂಧವ... ಜಾರಿಗೆ ತರುವುದಾಗಿ ಹೇಳಿ ಈ ಮೂ... ಮುಖ್ಯಮಂತ್ರಿಗಳು ಅಧಿಕಾರ ಉಳಿಸಿಕೊ... ಳ್ಳಲು ತಾವು ಎಂತಹ ಸಮಯಸಾಧಕ... ನಕ್ಕೂ ಸಿದ್ಧ ಎಂದು ತೋರಿಸಿಕೊಟ್ಟರು.

ಇರಲಿ, ಈ ಬಿ.ಜೆ.ಪಿ. ಸರಕಾ... ಳಿಗೆ ಸಂವಿಧಾನಕ್ಕಿಂತ ಸಾಧುಗಳು, ಆರ್.ಎಸ್. ಎಸ್.ಗಳೇ "ಧರ್ಮ ಸಂಸದ್"... ಮೇಲಿನವು ಸಂವಿಧಾನವೆಂಬುದೊಂ... ಜ್ಯಾರಿಯಲ್ಲಿರುವರೆಗೆ ಈ ನಿಲುವನ್ನು ... ಸಿಕೊಳ್ಳಲು ಸಾಧ್ಯವಿಲ್ಲ.

ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ನಡೆದ ರಾಷ್ಟ್ರ-ವಿರೋಧಿ ಕೃತ್ಯದಿಂ... ಇಡೀ ದೇಶವೇ ಬಿಕ್ಕಟ್ಟಿನಲ್ಲಿ ಸಿಲುಕಿ... ಭಾರತದ ಐಕ್ಯತೆಯು, ಸಂವಿಧಾನದ ಅ... ಪಾಯಕ್ಕೆ ಭಾರೀ ಅಪಾಯ ಬಂ... ಅಲ್ಪಸಂಖ್ಯಾತರ ಜೀವಗಳಿಗೆ ಭಾರೀ ಆಘಾ... ಬಂತು. ಇಡೀ ದೇಶದಲ್ಲೆಲ್ಲಾ ನಡೆದ ಭಯಾ... ನಯ ಹಿಂಸಾಚಾರಕ್ಕೆ ಬಿ.ಜೆ.ಪಿ. ಮತ್ತು ಅ... ರಾಜ್ಯ ಸರಕಾರಗಳೇ ಹೊಣೆ.

ಆದ್ದರಿಂದಲೇ ಕೇಂದ್ರದ ಪ್ರ...

ಆರ್.ಎಸ್.ಎಸ್.ನ ಹುಸಿವಾದಗಳು

- ವಿ.ಜೆ.ಕೆ. ನಾಯರ್

ಬಿ.ಟಿ.ಆರ್. ಜನ್ಮದಿನ (19 ಡಿಸೆಂಬರ್ 1992) ದಂದು ಸಿಐಟಿಯು ರಾಜ್ಯ ಸಮಿತಿ ಏರ್ಪಡಿಸಿದ 'ಕೋಮುವಾದಿ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು' ವಿಚಾರ ಸಂಕಿರಣದಲ್ಲಿ ಕಾಂ. ವಿ.ಜೆ.ಕೆ. ನಾಯರ್ ಪ್ರಬಂಧವೊಂದನ್ನು ಮಂಡಿಸಿದರು. ಬಿ.ಜೆ.ಪಿ.-ಆರ್.ಎಸ್.ಎಸ್.-ವಿ.ಎಚ್.ಪಿ. ಕೋಮುವಾದಿ ದುಷ್ಟಕೂಟ ಜಾತ್ಯಾತೀತತೆ, ರಾಷ್ಟ್ರೀಯವಾದ, ಕೋಮುವಾದ, ಅಲ್ಪಸಂಖ್ಯಾತವಾದ ಮುಂತಾದ ಪರಿಕಲ್ಪನೆಗಳ ಬಗ್ಗೆ ಹರಡುತ್ತಿರುವ ಗೊಂದಲದ ಹಿನ್ನಲೆಯಲ್ಲಿ ಅವರ ಪ್ರಬಂಧ ಈ ದುಷ್ಟಕೂಟ ಹರಡುತ್ತಿರುವ ಗೊಂದಲವನ್ನು ಬಯಲಿಗೆಳೆದಿದ್ದಾರೆ. ಸರಿಯಾದ ಪರಿಕಲ್ಪನೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಅವರು ಮಂಡಿಸಿದ ವಿಚಾರಗಳ ಸಂಗ್ರಹರೂಪವಿದು.

ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ಟ್ರೇಡ್‌ಯೂನಿಯನ್ ಚಳವಳಿಯ ಮುಖ್ಯ ಅಂಶಗಳಲ್ಲೊಂದು. ಆರ್.ಎಸ್.ಎಸ್. ಒಂದು ಕೋಮು ಸಂಘಟನೆ. ಅದು ತಾನು ರಾಜಕೀಯೇತರ ಸಂಘಟನೆ, ಆದರೆ ರಾಷ್ಟ್ರೀಯ ಸಂಘಟನೆ ಎಂದು ಹೇಳಿಕೊಳ್ಳುತ್ತದೆ ಎಂಬುದೆ ರಾಷ್ಟ್ರೀಯವಾದ, ಒಂದು ರಾಜಕೀಯ ಪರಿಕಲ್ಪನೆ. 'ದೇಶಕ್ಕಾಗಿ ಕೆಲಸ' ಮಾಡುವುದು ರಾಜಕೀಯ ಚಟುವಟಿಕೆ. ಹಾಗಿರುವಾಗ ಆರ್.ಎಸ್.ಎಸ್. ರಾಜಕೀಯುತರ ಸಂಘಟನೆ ಹೇಗಾಗುತ್ತದೆ ? ಇದೇ ರೀತಿ ಬಿ.ಜೆ.ಪಿ. ಇತರ ರಾಜಕೀಯ ಪಕ್ಷಗಳು 'ಅಲ್ಪಸಂಖ್ಯಾತವಾದಕ್ಕೆ ಕುಮ್ಮಕ್ಕುಕೊಡುತ್ತಿವೆ ಎನ್ನುತ್ತದೆ. ಅಲ್ಪಸಂಖ್ಯಾದ, ಬಹುಸಂಖ್ಯಾವರ ಬಗ್ಗೆ ಮಾತನಾಡುತ್ತಾ ಮಾಡುವ ರಾಜಕೀಯ ಕೋಮುವಾದವಲ್ಲದೆ ಬೇರೇನು?. ಇವೆರಡರ ಮೂಲಭೂತ ಸೈದ್ಧಾಂತಿಕ ಆಧಾರಕ್ಕೆ ನಾವು ಗೋಲ್ವಾಲ್ಕರ ಕೃತಿ "ಬಂಚ್ ಆಫ್ ಥಾಟ್ಸ್"(ವಿಚಾರಗ್ರಂಥ) ನೋಡಬೇಕು. ಇದು ಆರ್.ಎಸ್.ಎಸ್. ಮತ್ತಿತರ ಕೋಮುವಾದಿ ದುಷ್ಟಕೂಟದ ಮೂಲ ಗ್ರಂಥ.

ಹುಸಿ-ರಾಷ್ಟ್ರೀಯ ವಾದ

ಆರ್.ಎಸ್.ಎಸ್. ಈ ಗ್ರಂಥದ ಪ್ರಕಾರ 'ಹಿಂದೂ ರಾಷ್ಟ್ರೀಯತವಾದ'ಕ್ಕಾಗಿ ಕೆಲಸಮಾಡುತ್ತದೆ. 'ಹಿಂದೂ ರಾಷ್ಟ್ರೀಯವಾದದ' ಮುಖ್ಯ ವಿಶಿಷ್ಟ ಅಂಶವೆಂದರೆ ರಾಷ್ಟ್ರೀಯತೆಯನ್ನು ಧರ್ಮ ಮತ್ತು ಸಂಸ್ಕೃತಿಯ ಆಧಾರದ ಮೇಲೆ ನೋಡುವುದು. ಆರ್.ಎಸ್.ಎಸ್. ಪ್ರಕಾರ ಹಿಂದೂ ರಾಷ್ಟ್ರೀಯವಾದ ಒಂದು ಭೌಗೋಳಿಕ ಪ್ರದೇಶ, ಅಲ್ಲಿನ ಜನತೆ, ಅವರ ಹಿತಾಸಕ್ತಿಗಳ ಬಗ್ಗೆ ಅಲ್ಲ ಒಂದು ಪ್ರದೇಶ ಮತ್ತು ಜನತೆ ಇತ್ಯಾದಿಗಳ ಮೇಲೆ ಆಧಾರಿತ ರಾಷ್ಟ್ರೀಯವಾದವನ್ನು ಒಪ್ಪುವುದಿಲ್ಲ. ಆದ್ದರಿಂದಲೇ ಅವರು ಹಿಂದೂ ರಾಷ್ಟ್ರೀಯತವಾದ ಮೆಕ್ಸಿಕೋದಿಂದ ಜಪಾನ್‌ವರೆಗೆ ಹರಡಿತ್ತು ಎನ್ನುವುದು. ಧರ್ಮದ ಮೇಲೆ ಆಧಾರಿತ ರಾಷ್ಟ್ರೀಯತವಾದ ಇತರ ಧರ್ಮಗಳ ಜನರನ್ನು ಈ 'ರಾಷ್ಟ್ರ'ದ ಹೊರಗಿಡುವುದರಿಂದ ಅದು ಕೋಮುವಾದವಲ್ಲದೆ ಬೇರೆ ಅಲ್ಲ. ಆರ್.ಎಸ್.ಎಸ್.ನ ಹಿಂದೂ ರಾಷ್ಟ್ರೀಯವಾದ ಹುಸಿ-ರಾಷ್ಟ್ರೀಯವಾದ, ಕೋಮುವಾದದ ಇನ್ನೊಂದು ಹೆಸರು.

ರಾಷ್ಟ್ರೀಯವಾದ ಮತ್ತು ಕೋಮುವಾದ ಪರಸ್ಪರ ವಿರುದ್ಧವಾದ ಪರಿಕಲ್ಪನೆಗಳು. ಇದನ್ನು ನಮ್ಮ ಸ್ವಾತಂತ್ರ್ಯ ಚಳವಳಿಯಲ್ಲಿ ಕಾಣಬಹುದು. ರಾಷ್ಟ್ರೀಯವಾದಿಗಳು ಭಾರತದ ಎಲ್ಲಾ ಕೋಮುಗಳು ಒಂದಾಗಿ ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಹೋರಾಡಬೇಕೆಂದು ಹೇಳುತ್ತಿದ್ದರು. ಕೋಮುವಾದಿಗಳು ಕೋಮುಗಳೊಳಗಿನ ವೈಷಮ್ಯ ಎತ್ತಿಹಿಡಿದು ಬ್ರಿಟಿಷ್‌ರ ವಿರುದ್ಧ ಹೋರಾಟವನ್ನು ಕಡೆಗಣಿಸಿದ್ದರು. ಕೋಮುವಾದಿಗಳು ರಾಷ್ಟ್ರೀಯವಾದಿಗಳೂ ಆಗಿರುವುದು ಸಾಧ್ಯವಿಲ್ಲ. ಆದರೆ ಭಾರತದ ರಾಷ್ಟ್ರೀಯವಾದಿಗಳು ಸಹ ಕೋಮು-ರಹಿತ ಧೋರಣೆಯನ್ನು ಪೂರ್ತಿಯಾಗಿ ಅನುಸರಿಸಲಿಲ್ಲ. ಕೋಮುಗಳು ತಮ್ಮ ಪ್ರತ್ಯೇಕತೆಯನ್ನು ಇಟ್ಟುಕೊಂಡು ಬ್ರಿಟಿಷರ ವಿರುದ್ಧ ಹೋರಾಡುವುದರಲ್ಲಿ ಮಾತ್ರ ಐಕ್ಯತೆಯಿದ್ದರೆ ಸಾಕು ಎಂಬಂತಹ ವಿಚಾರವನ್ನು ಹೇಳುತ್ತಿದ್ದರು. ಈ ಧೋರಣೆ ಮುಖ್ಯವಾಗಿ ರಾಷ್ಟ್ರೀಯ ಚಳವಳಿಯಲ್ಲಿ ಪ್ರಾಧಾನ್ಯತೆ ಇದ್ದ ಕಾಂಗ್ರೆಸ್‌ನದಾಗಿತ್ತು . ಇದರಿಂದಾಗಿ ಕಾಂಗ್ರೆಸ್ ಕೆಲವೊಮ್ಮೆ ಬಹುಸಂಖ್ಯಾತ, ಕೆಲವೊಮ್ಮೆ ಅಲ್ಪಸಂಖ್ಯಾತ ಕೋಮುವಾದಿಗಳನ್ನು ಓಲೈಸುವ ನೀತಿ ಅನುಸರಿಸಿತು. ಈ ನೀತಿಯೇ ಎರಡೂ ಕೋಮುವಾದಿ ಶಕ್ತಿಗಳು ಬಲಗೊಳ್ಳಲು ಡಿಸೆಂಬರ್ 6 ರ ಈ ಘೋರ ದುಷ್ಕೃತ್ಯ ನಡೆಯುವ ಪರಿಸ್ಥಿತಿ ನಿರ್ಮಾಣಕ್ಕೆ ಕಾರಣವಾಯಿತು. ಆದರೆ ಆರ್.ಎಸ್.ಎಸ್., ಕಾಂಗ್ರೆಸ್‌ನ ಅಲ್ಪಸಂಖ್ಯಾತ ಕೋಮುವಾದವನ್ನು ಒಲೈಸುವ ನೀತಿ ಬಗ್ಗೆ ಮಾತ್ರ ಹೇಳುತ್ತದೆ. ಈ ಬಗ್ಗೆ ಹೇಳುತ್ತಾ, ಎಲ್ಲಾ ಮುಸ್ಲಿಂ ನಾಯಕರು ಕೋಮುವಾದಿಗಳು, ಮೂಲಭೂತವಾದಿಗಳು ಎಂದು ಒಂದೇ ಬಣ್ಣ ಸಾರಿಸಲು ಪ್ರಯತ್ನಿಸುತ್ತಿದೆ. ಸ್ವಾತಂತ್ರ್ಯ ಚಳುವಳಿಯ ಕಾಲದ ಮುಸ್ಲಿಂ ಸುಧಾರಣಾವಾದಿ ನಾಯಕ ಸರ್ ಸೈಯದ್ ಅಹಮದ್ ಸಹ ಅವರ ಕಣ್ಣಲ್ಲಿ ಪ್ರತ್ಯೇಕತವಾದಿಗಳು. ಏಕೆಂದರೆ ಹೀಗೆನ್ನುವವರ ರಾಷ್ಟ್ರೀಯವಾದದ ಆಧಾರ ಧರ್ಮವಷ್ಟೆ ದೇಶವಲ್ಲ. ಜನತೆಯಲ್ಲ. ಇದು ಹುಸಿ-ರಾಷ್ಟ್ರೀಯವಾದ. ಕೋಮುವಾದವಲ್ಲದೆ ಬೇರೇನಲ್ಲ.

ಕೋಮುವಾದದ ವರ್ಗಮೂಲ

ಕೋಮುವಾದದ ಬೀಜಗಳನ್ನು ಆಗಲೇ ಬಿತ್ತಲಾಗಿದ್ದರೂ, 1930 ರ ದಶಕದವರೆಗೆ ಹಿಂದೂ-ಮುಸ್ಲಿಂ ಐಕ್ಯತೆಗೆ ಧಕ್ಕೆ ತರಲು ಸಾಧ್ಯವಾಗಿರಲಿಲ್ಲ. 30 ದಶಕದ ನಂತರದ ಕೋಮುವಾದದ ಬೆಳವಣಿಗೆಗೆ ಕಾರಣಗಳನ್ನು ಕಾಂ. ಬಿ.ಟಿ.ರಣದಿವೆ ಲೇಖನವೊಂದರಲ್ಲಿ ವಿವರಿಸಿದ್ದಾರೆ. 1930 ರವರೆಗೆ ಜಿನ್ನಾ ಹಿಂದೂ-ಮುಸ್ಲಿಂ ಐಕ್ಯತೆಯ ಪ್ರತೀಕವಾಗಿದ್ದರು. 1930 ರವರೆಗೆ ಭಾರತದ ಬೂರ್ಜ್ವಾ ವರ್ಗದಲ್ಲಿ ಮುಸ್ಲಿಂ ಬೂರ್ಜ್ವಾ ಮುಖ್ಯಭಾಗವಾಗಿತ್ತು. ಹಿಂದೂ ಮತ್ತು ಮುಸ್ಲಿಂ ಬೂರ್ಜ್ವಾಗಳ ವರ್ಗ ಹಿತಾಸಕ್ತಿ ಒಂದೇಯಾದ್ದರಿಂದ ಮುಸ್ಲಿಂಲೀಗ್ ಆರಂಭವಾಗಿದ್ದರೂ ಅದರ ನಾಯಕತ್ವ ಮುಸ್ಲಿಂ ಬೂರ್ಜ್ವಾಗಳ ಪ್ರತಿನಿಧಿಗಳ ಕೈಯಲ್ಲಿತ್ತು. 1930 ರ ದಶಕದ ಆರಂಭದ ತೀವ್ರ ಆರ್ಥಿಕ ಬಿಕ್ಕಟ್ಟು ಮುಸ್ಲಿಂ ಬೂರ್ಜ್ವಾಗಳ ಮೇಲೆ ತೀವ್ರ ಪರಿಣಾಮ ಬೀರಿತು. ಉದಾಹರಣೆಗೆ ಮುಂಬೈಯ ಬಟ್ಟೆಯ ಗಿರಣಿಗಳಲ್ಲಿ ಶೇಕಡಾ 30 ಭಾಗ ಹೊಂದಿದ್ದ ಕರೀಮ್‌ಭಾಯ್, ಇಬ್ರಾಹಿಂ ಭಾಯ್ ಕಂಪನಿ ಪೂರ್ಣವಾಗಿ ಈ ಬಿಕ್ಕಟ್ಟಿನಲ್ಲಿ ಮುಳುಗಿ ಹೋಯಿತು. ಇದರಿಂದಾಗಿ ಮುಸ್ಲಿಂ ಲೀಗ್ ನಾಯಕತ್ವ ಕ್ರಮೇಣವಾಗಿ ಸಂಪ್ರದಾಯಸ್ಥ ಮುಸ್ಲಿಂ ಜಮೀನುದಾರರ ಕೈಗೆ ಹೋಯಿತು. ಅವರಿಗೆ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ಮುಸ್ಲಿಂ ಜನತೆ ಭಾಗವಹಿಸುವುದು ಬೇಕಿರಲಿಲ್ಲ. ಆದ್ದರಿಂದ ಅವರ ಧೋರಣೆ ಧರ್ಮದ ಆಧಾರದಲ್ಲಿ ಜನತೆಯ ನಾಯಕತ್ವ ವಹಿಸುವುದಾಗಿತ್ತು. ಹಿಂದೂ ಕೋಮುವಾದ ಸಹ ಜಮೀನುದಾರಿ ಪಾಳೆಯಗಾರಿಗಳ ಹಿತಾಸಕ್ತಿ ಕಾಪಾಡುವ ಶಕ್ತಿಯಾಗಿತ್ತು.

ಆದ್ದರಿಂದಲೇ ಆರ್.ಎಸ್.ಎಸ್. ಹಿಂದೂ ಸಂಸ್ಕೃತಿ ಪರಂಪರೆ ಹೆಸರಲ್ಲಿ ವರ್ಣಾಶ್ರಮ ಧರ್ಮದ ಪದ್ಧತಿಯನ್ನು ಎತ್ತಿಹಿಡಿಯುತ್ತದೆ. ಅಂದರೆ ಜಾತಿ ಪದ್ಧತಿ, ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆಯನ್ನು ಬೆಂಬಲಿಸುತ್ತದೆ. ಇದು ಜಮೀನುದಾರಿ ಪಾಳೆಯುಗಾರಿ ಶಕ್ತಿಗಳ ಹಿತಾಸಾಕ್ತಿ ಕಾಪಾಡುವಂತಹದ್ದು ಎಂದು ಬೇರೆ ಹೇಳಬೇಕಾಗಿಲ್ಲ. ಅಲ್ಲದೆ ನೆಹರೂ ಸಮಾಜವಾದಿ ಮಾದರಿಯ ಆರ್ಥಿಕ ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಿಸಿದರು ಎ... ಆಪಾದಿಸುತ್ತದೆ. ಅವರ ಪ್ರಕಾರ ರಾಜಕೀಯ ಮತ್ತು ಆರ್ಥಿಕ ಪದ್ಧತಿಯನ್ನು ಬೇರೆ-ಬೇರೆಯಾಗಿ ನೋಡಬೇಕಂತೆ. ಆರ್ಥಿಕ ವೈಯುಕ್ತಿಕ ವಿಚಾರವಂತೆ. ಅದನ್ನು ವ್ಯಕ್ತಿಗಳಿಗೆ ಬಿಡಬೇಕಂತೆ. ವರ್ಣ-ಜಾತಿವ್ಯವಸ್ಥೆಯ ಧರ್ಮವನ್ನು ಕಾಪಾಡುವುದು ಅವರ ಪ್ರಕಾರ ರಾಜಕೀಯ.

> **ಹಿಂದೆ ಆರ್.ಎಸ್.ಎಸ್. ಗ್ರಂಥಗಳೆಲ್ಲಾ ಜಾತ್ಯಾತೀತತೆಯ ಪರಿಕಲ್ಪನೆಯನ್ನೇ ಪರಿಹಾಸ ಮಾಡುತ್ತಿದ್ದವು. ಅವರ ಪ್ರಕಾರ ಜಾತ್ಯಾತೀತತೆ ರಾಷ್ಟ್ರೀಯವಾದಕ್ಕೆ ವಿರೋಧವಾದುದು. ಆದರೆ ಈಗ ಉಳಿದವರದ್ದೆಲ್ಲಾ ಹುಸಿ- ಜಾತ್ಯಾತೀತತೆ. ತನ್ನದೇ ನಿಜವಾದ ಜಾತ್ಯಾತೀತತೆ ಎನ್ನುತ್ತದೆ!**

ಹುಸಿ-ಜಾತ್ಯಾತೀತತೆ

ಜಾತ್ಯತೀತತೆ, ರಾಷ್ಟ್ರೀಯವಾದ ಸ್ವತಂತ್ರ ಭಾರತದ ಜನತೆ ಸಾರ್ವತ್ರಿಕವಾಗಿ ಅಂಗೀಕರಿಸುವ ಧೋರಣೆಗಳು. ಇವೆರಡೂ ಧೋರಣೆಗಳಲ್ಲೂ ಆರ್.ಎಸ್.ಎಸ್.ನದ್ದು ರಾಷ್ಟ್ರೀಯ ಮುಖ್ಯ ಧಾರೆಯಿಂದ ಭಿನ್ನವಾದ ದೃಷ್ಟಿಕೋಣ, ಅದು ರಾಷ್ಟ್ರೀಯವಾದವನ್ನು ತನ್ನದೇ 'ಸಂಕುಚಿತ' ರೀತಿಯಲ್ಲಿ ನಿರೂಪಿಸುತ್ತದೆ, ಇತ್ತೀಚೆಗೆ ಬಹಿರಂಗವಾಗಿ ಕೋಮುವಾದವನ್ನು ಬೆಂಬಲಿಸುತ್ತಿದ್ದರೂ, ಅಧಿಕಾರಕ್ಕೆ ಬಂದಾಗಲೆಲ್ಲ ಆರ್.ಎಸ್.ಎಸ್.ನ 'ಸಂಘ ಪರಿವಾರ' ಹಿಂದೆ ತಾನೂ ಜಾತ್ಯತೀತ ಎಂದು ಹೇಳಿಕೊಳ್ಳುತ್ತಿತ್ತು. 1977-80 ರ ಅವಧಿಯಲ್ಲಿ ಜನತಾಪಕ್ಷದ ಭಾಗವಾಗಿ ಅಧಿಕಾರ ಹಿಡಿದಾಗ ಅದು ಜಾತ್ಯಾತೀತತೆ ಬಗ್ಗೆ ಮಾತನಾಡುತ್ತಿತ್ತು.

1959 ರಲ್ಲಿ ಆರ್.ಎಸ್.ಎಸ್. ತಯಾರಿಸಿದ ನಿರ್ಣಯವೊಂದರಲ್ಲಿ ಮಸೀದಿಯಾಗಿಸಿದ ಹಿಂದೂ ದೇವಸ್ಥಾನಗಳ ಪಟ್ಟಿಯಲ್ಲಿ ರಾಮಜನ್ಮಭೂಮಿಯ ಸುಳಿವಿಲ್ಲ! 1950 ರಿಂದ 1983 ರವರೆಗಿನ ಆರ್.ಎಸ್.ಎಸ್. ನಿರ್ಣಯಗಳನ್ನು ಗಮನಿಸಿದರೆ, ರಾಜಕೀಯ ಅಗತ್ಯಕ್ಕೆ ಸರಿಯಾಗಿ 'ಹಿಂದೂ' ...

ಅರಿಮುಸಸ್ಥಿಸುವಾಗಲೀ, ವಿಳಂಬದ ನಂತ ವಾಗಲಿ) ಕೈಗೊಂಡ ಕ್ರಮಗಳನ್ನೆಲ್ಲಾ ಸಿಪಿಐ ಎಂ) ಬೆಂಬಲಿಸಿತು. ಇವರಲ್ಲಿ ಮೂರು ಬಿ.ಜೆ.ಪಿ. ಸರಕಾರಗಳ ವಜಾವೂ ಸೇರಿದೆ. ಇದೊಂದು ವಿಶಿಷ್ಟ ಪರಿಸ್ಥಿತಿ. ಇಡೀ ಸಂವಿಧಾನವನ್ನೇ ಬುಡಮೇಲು ಮಾಡಿದ ಪರಿಸ್ಥಿತಿ, ಆದ್ದರಿಂದ ದೇಶದ ಐಕ್ಯತೆ, ಸಂವಿದಾನವನ್ನು ಉಳಿಸಲು 356 ರಂತರ ಚ್ಚಾ ಕಲಮನ್ನು ಬಳಿಸಿವರೂ ಬೆಂಬಲಿಸಿ- ದೆವು. ಪಂಜಾಬ್, ಕಾಶ್ಮೀರದಲ್ಲಿ ರಾಷ್ಟ್ರ- ಪತಿ ಆಳ್ವಿಕೆಯ ಅವಧಿಯನ್ನು ಸಂವಿಧಾನ ಹಾಕಿದ ಮಿತಿಗಿಂತಲೂ ಹೆಚ್ಚು ಕಾಲ ವಿಸ್ತ- ರಿಸಿಸಲು ಕೂಡಾ ಪಕ್ಷ ದೆಂಬಲ ನೀಡಿದ್ದರ ಆಧಾರ ಕೂಡಾ ಇದೇ ನಿಲುವು. ಸಂವಿಧಾ- ನವನ್ನೇ ಬುಡಮೇಲು ಮಾಡುವುದನ್ನು ತಡೆ- ಯುವುದೇ ಇವರ ಉದ್ದೇಸ.

ಹೀಗೆ 356 ನೇ ಕಲಮಿನ ಬಳ- ಕೆಯನ್ನು ಒಂದು ಗಂಭೀರ ಸನ್ನಿವೇಶದಲ್ಲಿ ಮಾತ್ರ ಒಪ್ಪಿದ್ದು ಈ ಕಲಮಿನ ಬಗ್ಗೆ ನಮ್ಮ ವಿರೋಧ ಮುಂದುವರಿಯುತ್ತದೆ. ಅದನ್ನು ಸಂವಿದಾನದಿಂದ ತೆಗೆದುಹಾಕ- ಬೇಕೆಂದು ನಮ್ಮ ಒತ್ತಾಯ. ಅದಕ್ಕಾಗಿ ಹೋರಾಟ ಮುಂದುವರಿಯುತ್ತದೆ.

ಗಂಭೀರ ಸನ್ನಿವೇಶ ಎದುರಿಸುವುದು ಹೇಗೆ?

ಈ ಕಲಮನ್ನು ರದ್ದು ಮಾಡಿ- ದರೆ ಇಂತಹ ಗಂಭೀರ ಸನ್ನಿವೇಶಗಳನ್ನಿ ರಾಜ್ಯ ವಿಧಾನಸಭೆಯಲ್ಲಿ ಯಾವುದೇ ಪಕ್ಷಕ್ಕೆ ರಂಗಕ್ಕೆ ಬಹುಮತವಿಲ್ಲದಂತಹ ಪರಿಸ್ಥಿತಿ- ಯನ್ನು ಎದುರಿಸುವುದು ಹೇಗೆ ಎಂಬ ಪ್ರಶ್ನೆ ಕೇಳಿಬರುವುದು.

ವಿಧಾನಸಬೆಯಲ್ಲಿ ಯಾವುದೇ ಪಕ್ಷಕ್ಕೆ ರಂಗಕ್ಕೆ ದೆಂಬಲವಿದೆಯೋ, ಇಲ್ಲವೋ ಎಂಬುದನ್ನು ವಿಧಾನಸಬೆಯಲ್ಲಿಯೇ ನಿರ್ಣ- ಯಿಸಬೇಕು. ಇಂತಹ ಬಹುಮತವಿ- ಲ್ಲದಿದ್ದರೆ ಕೇಂದ್ರದಲ್ಲಿ ಹೊಸ ಚುನಾವಣೆ ಮಾಡಲು ಸಂವಿಧಾನ ಅವಕಾಶ ಕಲ್ಪಿ- ಸಿದೆ. ಅದೇ ರೀತಿ ರಾಜ.ದಲ್ಲಿಯೂ ನಡೆ- ಸಲು ಅವಕಾಶ ಕಲ್ಪಿಸಬೇಕು. ರಾಜ್ಯಪಾ- ಲರ ನೇಮಕದ ವಿದಾನವನ್ನು ಬದಲಿಸ- ಬೇಕೆಂಬೂದು ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆಯ ನಮ್ಮ ಬೇಡಿಕೆಗಳಲ್ಲಿ ಒಂದು ಮಹತ್ವದ ಬೇಡಿಕೆ.

ಇನ್ನು ಅಯೋಧ್ಯಾ ಘಟನೆಯಂತಹ ಗಂಭೀರ ಸನ್ನಿವೇಶ ಎದುರಿಸಲು ಸಂವಿಧಾ- ನದಲ್ಲಿ 355 ನೇ ಕಲಮು ಕೂಡಾ ಇದೆ. ಪ್ರತಿಯೊಂದು ರಾಜ್ಯದ ಆಡಳಿತ ಸಂವಿದಾ- ನದ ಪ್ರಕಾರ ನಡೆಯುವಂತೆ ಮಾಡಲು ಕೇಂದ್ರ ಸರ್ಕಾರ ಮಧ್ಯ ಪ್ರವೇಸಿಲಲು ಈ ಕಲಮು ಅವಕಾಶ ನೀಡಿದೆ. ಅದೇ ರೀತಿ ಅಯೋಧ್ಯೆಯಲ್ಲಿ ಕರಸೇವಕರು ಬಂದು ಜಮಾಯಿಸುವ ಮೊದಲೇ ಕೇಂದ್ರ ಸರ- ಕಾರ ಸಂವಿಧಾನದ 2 49 ನೇ ಕಲ- ಮಿನ ಪ್ರಕಾರ ರಾಜ್ಯ ಸರಕಾರದ ಅಧಿಕಾ- ರದ ವ್ಯಪ್ತಿಯೊಳಗೂ ಮಧ್ಯ ಪ್ರವೇಶಿ- ಸಲು ಸಾಧ್ಯವಿತ್ತು. ಆದ್ದರಿಂದ ಅಯೋಧ್ಯಾ ಘಟನೆಯಂತಹ ರಾಷ್ಟ್ರೀಯ ಅಪಾಯದ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಪರಿಣಾಮ- ಕಾರಿಕ್ರಮ ಎದುರಿಸಲು ಸಾಧ್ಯವಾಗುವಂತೆ 356 ನೇ ಕಲಮನ್ನು ಇನ್ನಷ್ಟು ವಿಸ್ತರಿಸ- ಬೇಕೆಂಬುದು ಪ್ರದಾನ ಮಂತ್ರಿಗಳು ಕೇಳು- ತ್ತಿರುವುದು ಶುದ್ಧ ಠಕ್ಕುತನ. 356 ನೇ ಕಲಮನ ವ್ಯಾಪಕವಾಗಿದ್ದಾದೆ. ಕೇಂದ್ರಸ- ರಕಾರ ಪರಿಣಾಮಕಾರಿ ಕ್ರಮ ಕೈಗೊಳ್ಳ- ತ್ತಿದೆಂಬುದು ಶುದ್ಧ ಸುಳ್ಳು. ಇದು ಈ ಕರಾಳ 356 ನೇ ಕಲಮಿನ ದುರು- ಪಯೋಗ ಹೆಚ್ಚಿಸಲು ಅವಕಾಶ ಮಾಡಿ- ಕೊಳ್ಳುವ ಕಿಡಿಗೇಡಿತನವಲ್ಲದೆ ಬೇರೇನೂ ಅಲ್ಲ. ಆದ್ದರಿಂದ ನರಸಿಂಹರಾಯರು ಹೇಳಿ- ರುವಂತೆ ಇವರಿಂದ "ಸಂವಿಧಾನ" ಚೂರು- ಚೂರಾಗಿಲ್ಲ, ಬದಲಾಗಿ ಕೋಮುವಾದೀ ಶಕ್ತಿಗಳೊಂದಿಗೆ ನೀತಿಗೆಟ್ಟ ರಾಜಿ ಮಾಡಿ- ಕೊಳ್ಳುವ ಅವರ ಧೋರಣೆ ಚೂರುಚೂರಾ- ಗಿದೆಯಷ್ಟೆ.

ಕಾಂ.ಪ್ರಕಾಶ್ ಕಾರಟ್

ನಿರೀಕ್ಷಿಸಿ : ಜನಸಾಮಾನ್ಯರ ಮೇಲೆ ಮತ್ತೆ ಕ್ರೂರಧಾಳಿ

ಕೇಂದ್ರ ಸರ್ಕಾರ ಆರ್ಥಿಕ ಉದಾರೀ- ಕರಣದ ಇನ್ನೂ ಹಲವು ಕ್ರಮಗಳನ್ನು ಕೈಗೊ- ಳ್ಳಲಿದೆ. ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್‌ನ ನಿರ್ದೇಶನದಂತೆ ಮಾಡಲಿರುವ ಈ ಕ್ರಮ- ಗಳು ದೇಶದ ನೋವನ್ನು ಇನೂ ಹೆಚ್ಚುಗೊ- ಳಿಸಲಿದೆ. ಈ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸರ್ಕಾರ ಈಗಾಗಲೇ ಐ.ಎಂ.ಎಫ್.ಗೆ ಭರವಸೆ ನೀಡಿದೆಯಂತೆ. ಆ ಕ್ರಮಗಳು ಕೆಳ- ಗಿನಂತಿರುತ್ತವೆ.

1. ಚೆಲ್ಲಯ್ಯ ಸಮಿತಿಯ ವರದಿಯಂತೆ ಆಮದು ಸುಂಕ ಪದ್ಧತಿಯನ್ನು ಆಮೂ ಲಾಗ್ರವಾಗಿ ಬದಲಾಯಿಸುವುದು.
2. ಈ ಸುಂಕ ಕಡಿತದಿಂದ ಉಂಟಾಗುವ ಕಂದಾಯ ಹಾನಿಯನ್ನು ಭರಿಸಲು ಬೇರೆ ಬೇರೆ ಕ್ಷೇತ್ರಗಳಲ್ಲಿ ಕರಗಳನ್ನು ಹೇರುವುದು.
3. ಇವು ಮತ್ತು ಇತರೆ ಉದಾರೀಕರ- ಣದ ಉಸ್ತುವಾರಿ ಮಾಡಲು ಭಾರ- ತೀಯ ರಿಸರ್ವ್ ಬ್ಯಾಂಕ್‌ನ ಅಡಿ ಒಂದು ಉನ್ನತ ಸಮಿತಿಯನ್ನು ನೇಮಿ- ಸುವುದು.

ಭಾರತದ ಜನತೆಗೆ ಈ ಕ್ರಮಗಳ ಬಗ್ಗೆ ತಿಳಿಸುವ ಅಗತ್ಯ ಸರ್ಕಾರಕ್ಕಿಲ್ಲ. ಈ ಕ್ರಮ- ಗಳ ಲಾಭ ಹಾನಿಗಳ ಚರ್ಚೆಯೂ ಸರ್ಕಾರಕ್ಕೆ ಬೇಕಿಲ್ಲ.

ಕರ ಪದ್ಧತಿಯಲ್ಲಿ ಹೆಚ್ಚಿನ ಬದಲಾ- ವಣೆ

ಮುಂಬರುವ ಬಜೆಟ್‌ನಲ್ಲಿ ಕರ ಪದ್ಧ- ತಿಯಲ್ಲಿ ಹೆಚ್ಚಿನ ಬದಲಾವಣೆ ಮಾಡಲಾಗು- ವುದೆಂದು ಕೇಂದ್ರ ಹಣಕಾಸು ಇಲಾಖೆಯ ಉಪಮಂತ್ರಿ ರಾಮೇಶ್ವರ ಠಾಕೂರ್ ಹೇಳಿ- ದ್ದಾರೆ.

ಶ್ರೀಮಂತರಿಗೆ ಹೆಚ್ಚು ಅನುಕೂಲಗ- ಳನ್ನು ಮಾಡಿಕೊಡುವ ಅದಕ್ಕೂ ಮಿಗಿ- ಲಾಗಿ ಅದರ ವಿದೇಶಿ ದಣಿಗಳಿಗೆ ಅನು- ಕೂಲ ಮಾಡಿಕೊಡುವ ಸಲುವಾಗಿ ಈ ಬದ- ಲಾವಣೆ ಮಾಡಲಿವೆ. ವಿದೇಶಿ ವಿನಿಮಯ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ಮಾಡಿ- ದ್ದರಿಂದ ಸರ್ಕಾರಕ್ಕೆ ಕಂದಾಯ ನಷ್ಟವಾಗ- ಲಿದೆ. ಈ ನಷ್ಟ ಹಣಕಾಸಿನ ಖೋತಾದಲ್ಲಿ ಕಾಣಿಸಿಕೊಳ್ಳುವಂತೆ ಮಾಡಲು ಈ ಕರಪ- ದ್ಧತಿಯ ಬದಲಾವಣೆ ಅಂದರೆ ಬಡ ಜನರ ಬಲಿ.

ಆದರೆ ಈ ಎಲ್ಲ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಐ.ಎಂ.ಎಪ್. ಮತ್ತು ವಿಶ್ವಬ್ಯಾಂಕ್‌ಗೆ ಒಪ್ಪಿಸಲಾಗಿದೆ. ಹೇಗಿದೆ ನಮ್ಮ ಪ್ರಜಾಪ್ರಭುತ್ವ!!

ಸರ್ಕಾರಿ ಅರ್ಥಶಾಸ್ತ್ರಜ್ಞರ ತುತ್ತೂರಿ

"ಉದಾರೀಕರಣದ ಮೇಲೆ ಇನ್ನೂ ಹೆಚ್ಚು ಒತ್ತು ನೀಡಬೇಕು" ಇದು ಸರ್ಕಾರಿ ಅರ್ಥಶಾಸ್ತ್ರಜ್ಞರ ಸಲಹೆ. ಬೆಲೆಯೇರಿಕೆ ಹಣ- ದುಬ್ಬರ, ನಿರುದ್ಯೋಗ, ಬಡತನ ಇವೆಲ್ಲ- ವನ್ನೂ ಹೋಗಲಾಡಿಸಲು ಉದಾರೀಕರ- ಣವೇ ಮದ್ದು ಎಂದಿರುವ ಈ ಅರ್ಥಶಾಸ್ತ್ರ- ಜ್ಞರಿಗೆ ವಸ್ತು ನಿಷ್ಠತೆಯಾಗಲಿ ಜನರ ಬಗೆಗಿನ ಕಾಳಜಿಯಾಗಲಿ ಒಂದಿನಿತೂ



ನರಸಿಂಹರಾವ್ ಸರ್ಕಾರದ 19 ನೇ ತಿಂಗಳಲ್ಲಿ

ಇಲ್ಲವೆಂಬುದು ಸ್ಪಷ್ಟ. ಪಂಚತಾರಾ ಹೋಟೆಲುಗಳಲ್ಲಿ ಮೋಜು ಮಾಡುವ ಮಂದಿಗೆ ಉಪವಾಸವೆಂದರೇನು ಎಂಬುದು ಗೊತ್ತಾದೀತೆ?

ಉದಾರೀಕರಣ ಪ್ರಾರಂಭವಾದಾಗಿನಿಂದಲೂ ಬೆಲೆಯೇರುತ್ತಿದೆ. ಹಣದು- ಬ್ಬರ ಹೆಚ್ಚಾಗುತ್ತಿದೆ. ನಿರುದ್ಯೋಗ ಹೆಚ್ಚು- ತ್ತಿದೆ. ಬಡತನವೇ ಜನರ ಜೀವನವಾಗಿದೆ ಎಂಬುದು ಬೀದಿಯಲ್ಲಿ ಓಡಾಡುವ ಸಾಮಾ- ನ್ಯನಿಗೊ ಗೊತ್ತಾಗುತ್ತದೆ. ಈ ಅರ್ಥಶಾಸ್ತ್ರ- ಜ್ಞರು ಇಂದ್ರಲೋಕದವರಿರಬಹುದೇ?

ದೇಶ ಹಗಲು ದರೋಡೆಗಿದೆ!!! ಅಥವಾ ಫೆರಾ ಕಾಯಿದೆಯ ತಿದ್ದು- ಪಡಿ ಸುಗ್ರಿವಾಜ್ಞೆ

ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳು ಭಾರತ ಸರ್ಕಾರವನ್ನು ಪದೇ ಪದೇ ಕೇಳು- ತ್ತಿದ್ದು ಈಗ ಅಯೋಧ್ಯಾಕಾಂಡದ ಮುಸುಕಿ- ನಲ್ಲಿ ಸರ್ಕಾರ ಈ ಸುಗ್ರಿವಾಜ್ಞೆಯನ್ನು ಹೊರ- ಡಿಸಿದೆ.

ವಿದೇಶಿ ವಿನಿಮಯ ನಿಯಂತ್ರಣ ಕಾಯಿದೆ ಅಥವಾ 1973 ರ ಫೆರಾ (ಕಾಯ್ದೆ) ವಿದೇಶಿ ಹೂಡಿಕೆದಾರರು ದೇಶ- ವನ್ನು ದೋಚದಂತೆ, ತಡೆದು ದೇಶಿ ಉದ್ಯಮ ಬೆಳೆಯಲು ಸಹಾಯ ಮಾಡುವ ಕಾಯಿದೆ. ಸರ್ಕಾರ ಈಗ ಈ ಕಾಯಿದೆಗೆ ಸುಗ್ರಿವಾಜ್ಞೆಯ ಮೂಲಕ ತಿದ್ದುಪಡಿ ತಂದಿದೆ.

ಈ ತಿದ್ದುಪಡಿ ವಿದೇಶೀ ಹೂಡಿಕೆ- ದಾರರಿಗೆ ಹಲವು ರಿಯಾಯಿತಿ ನೀಡುತ್ತದೆ ಈಗ ಫೆರಾ ಕಂಪನಿಗಳು (ಫೆರಾ ಕಾಯಿದೆ- ಯಡಿ ನಿಯಂತ್ರಣಕೊಳಪಡುತ್ತಿದ್ದ ಕಂಪನಿ- ಗಳು) ಯಾವುದೇ ಅಡೆ ತಡೆಯಿಲ್ಲದೆ ಭಾರ- ತದಲ್ಲಿ ಶಾಖಾ ಕಚೇರಿ ತೆರೆಯಬಹುದು. ಈ ಕಂಪನಿಗಳೊಂದಿಗೆ ಜಂಟಿ ವ್ಯವಹಾರಕ್ಕೆ ಸರ್ಕಾರದ ಪೂರ್ವಾನುಮತಿ ಪಡೆಯಬೇ- ಕಿಲ್ಲ.

ಯಾವುದೇ ಪಾವತಿಯನ್ನು ವಿದೇಶಿ ವಿನಿಮಯದಲ್ಲಿ ಮಾಡುವಂತೆ ನಿರ್ದೇಶಿಸು ವ ಸರ್ಕಾರದ ಹಕ್ಕಿಗೂ ಕತ್ತರಿ. ಈ ಕಂಪನಿಗಳಲ್ಲಿ ವಿದೇಶಿಯರನ್ನೇ ನೇಮಿ- ಸಿಕೊಳ್ಳುವ ವಿಷಯದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ಗಾಗಲಿ ಕೇಂದ್ರ ಸರ್ಕಾರದ ಅರ್ಥ ಇಲಾಖೆಗಾಗಲಿ ಇನ್ನು ಮುಂದೆ ಯಾವುದೇ ಅಧಿಕಾರವಿಲ್ಲ.

ಫೆರಾ ಕಂಪನಿಗಳು ಭಾರತದಲ್ಲಿ ಸ್ಥಿರ ಆಸ್ತಿಗಳನ್ನು ಹೊಂದಲು ಇರುವ ನಿರ್ಬಂಧ ಕೂಡ ಇನ್ನು ಮುಂದೆ ಇಲ್ಲ.......

ಅಂಗೈ ಕೊಟ್ಟರೆ ಮುಂಗೈಯನ್ನೇ ನುಂಗಬಲ್ಲ ಬಹುರಾಷ್ಟ್ರೀಯ ಕಂಪನಿಗಳು ದೇಶವನ್ನೇ ದೋಚದೆ ಬಿಟ್ಟಾರೆಯೇ?

ಸಿಪಿಐ (ಎಂ) ನಿಂದ ಸುಗ್ರಿವಾಜ್ಞೆ ಖಂಡನೆ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಫೆರಾ ತಿದ್ದುಪಡಿ ಸುಗ್ರಿವಾಜ್ಞೆಯನ್ನು ಖಂಡಿಸಿದೆ. ಈ ತಿದ್ದುಪಡಿಯೊಂದಿಗೆ ಫೆರಾ ಕಾಯಿದೆ- ಯನ್ನು ಪೂರ್ತಿಯಾಗಿ ತೆಗೆದುಹಾಕಿದಂತೆ ಆಗಿದೆ ಎಂದಿದೆ. ಸುಗ್ರೀವಾಜ್ಞೆ ಕಾಯಿದೆ- ಯಾಗಿ ಪರಿವರ್ತನೆಗೊಳ್ಳಲು ಪಾರ್ಲಿಮೆಂಟಿನ ಮುಂದೆ ಬಂದಾಗ ಸಿಪಿಐ(ಎಂ) ಇತರ ಎಡಪಕ್ಷಗಳೊಂದಿಗೆ ಕಾಯಿದೆ ವಿರುದ್ಧ ಮತ ಹಾಕುವುದೆಂದು ಪೊಲಿಟ್‌ಬ್ಯೂರೋ ಹೇಳಿದೆ. ●

ಪರಿವಾರ' ಮುಂದಿಡುವುದು ಕಂಡು 1985ರ ಚುನಾವಣೆಯಲ್ಲಿ ಮೆಂಟಿನಲ್ಲಿ ಕೇವಲ 2 ಸೀಟುಗಳಿಗಿ- ಕೋಮುವಾದವನ್ನು ಮುಲಾಜಿಲ್ಲದೆ ೋಗಿಸುವುದಕ್ಕೆ ಆರಂಭಿಸಿದರು. ಪ್ರಯತ್ನದ ಅಂಗವಾಗಿ ಇತರ ಪಕ್ಷ- ುಸರಿಸುತ್ತಿರುವುದು 'ಹುಸಿ- ಜಾತ್ಯತೀ- ಬ ಪ್ರಚಾರ ಆರಂಭಿಸಿತು. ಹಿಂದೆ ್.ಎಸ್. ಗ್ರಂಥಗಳೆಲ್ಲಾ ಜಾತ್ಯ- ಕಲ್ಪನೆಯನ್ನೇ ಪರಿಹಾಸ್ಯ ಮಾಡು- ಅವರ ಪ್ರಕಾರ ಜಾತ್ಯತೀ- ಷ್ಟ್ರೀಯವಾದಕ್ಕೆ ವಿರೋಧಾಭಾಸವಿ- ! (ಅವರ ಬ್ರಾಂಡಿನ ಧರ್ಮದ ರಾಷ್ಟ್ರೀಯವಾದಕ್ಕೆ) 'ಹುಸಿ-ಜಾ- ತೆ'ಯ ಘೋಷಣೆ 1961 ರಲ್ಲಿ ಆರ್. ರ್ಣಯವೊಂದರಲ್ಲಿ ಬಳಸಲ್ಪ- , 1985 ರ ನಂತರವೇ ಇದು ರಾಜ- ಲಾವಣೆಯಲ್ಲಿ ಬಂದದ್ದು. ಂದೆ ಆರ್.ಎಸ್.ಎಸ್. ನಮ್ಮ ನದಲ್ಲಿ ಜಾತ್ಯಾತೀತತೆಯ ಪ್ರಸ್ತಾಪವೇ ಂದು ಪ್ರಚಾರ ಮಾಡುತ್ತಿತ್ತು.ಇದು ುಳ್ಳು. ಕಲಂ 25 ಧಾರ್ಮಿಕ ಂದ ರಾಜಕೀಯ-ಆರ್ಥಿಕ-ಹಣಕಾ- ಗಳನ್ನು ಪ್ರತ್ಯೇಕವಾಗಿಡುವುದು ಜಾತ್ಯ- ಂದು ನಿರೂಪಿಸುತ್ತದೆ. ಜೆ.ಪಿ. ತನ್ನ ಕೋಮುವಾದ ಮುಚ್ಚಿ- , ಕಾಂಗ್ರೆಸಿನ ಎಲ್ಲಾ ತರದ ಕೋಮು- ್ನು ಓಲೈಸುವ ನೀತಿಯನ್ನು ತೋರಿಸಿ, ಲ್ಲಾ ಪಕ್ಷಗಳನ್ನು ಹುಸಿ-ಜಾತ್ಯತೀತತೆ ಅಲ್ಪ ಸಂಖ್ಯಾತವಾದ' ಎನ್ನುತ್ತದೆ. ತರರ ಮೇಲೆ 'ಅಲ್ಪಸಂಖ್ಯಾತವಾದ'ದ ಹೊರಿಸುವ 'ಸಂಘಪರಿವಾರ', ರು ಮತ್ತಿತರ ಹಿಂದೂಯೇ- ನ್ನು ಧರ್ಮವನ್ನು ವ್ಯಕ್ತಿಗತ ಲ್ಲಿ ಇಟ್ಟುಕೊಳ್ಳಬೇಕು, ಅದನ್ನು ನಿಕ ಜೀವನದಲ್ಲಿ ಬೆರೆಸಬಾ- ಂದು ಭೋಧಿಸುತ್ತದೆ. ಆದರೆ ಂದೂಗಳಿಗೆ ಅನ್ವಯವಾಗುವುದಿ-

ರೀತಿ ಜನತೆಯನ್ನು ಕೋಮು ಆಧಾ- ಒಡೆಯುವವರು ಕೋಮುವಾ- ತ್ರವಲ್ಲ, ಅವರದ್ದು ಹುಸಿ-ರಾಷ್ಟ್ರೀ-

ಆಯ್ಕೆ ನಿಮ್ಮ ಮನೆ ಬಾಗಿಲು ಬಳಿ ಕಾಯುತ್ತಿದೆ........

ಚೂರು ಚೂರಾದ ಇಟ್ಟಿಗೆ ರಾಶಿಯಲ್ಲಿ
ಬಿದ್ದಿದ್ದಾನೆ ರಾಮ
ಗಾಯಗೊಂಡು ಚೀರುತ್ತಾನೆ
ಹತ್ತಿ ಉರಿದ ನಾಡಿನಲ್ಲಿ
ತನ್ನ ಮಕ್ಕಳು ಬದುಕಿರಬಹುದೇ?

ತಡಿಕೆ ಬಾಗಿಲ ಹಿಂದೆ
ಚಿಂದಿ ಕಣ್ಣುಗಳ ಸೀರೆ
ಸೀತೆ ಮಾನ ಉಳಿಸಿಕೊಂಡಿರಬಹುದೇ?

ಭೂತ ಹೊಕ್ಕಿರುವ ನಾಡಿನಲ್ಲಿ
ರಾಮನನ್ನು ಯಾರು ಕೇಳಬೇಕು!
ಎಲ್ಲಿ ನನ್ನ ಸೀತೆ? ಎಲ್ಲಿ ನನ್ನ ಮಕ್ಕಳು?
ರಾಮನ ಆರ್ತನಾದ

ಸ್ಮಶಾನವಾದ ರಸ್ತೆ
ಬಾಗಿಲು ಒಡೆದುಕೊಂಡ ಮನೆಗಳು
ಸುಟ್ಟು ಕರಕಾದ ಗುಡಿಸಲುಗಳು

ನಿಮ್ಮಂತೆ ಸಂಸಾರ ನನ್ನದು
ಏನಾಗಿ ಹೋಯಿತು.?
ಬಾಗಿಲಿಕ್ಕಿಕೊಂಡಿದ್ದರೂ
ಕಿವಿಗಪ್ಪಳಿಸುತ್ತದೆ.
ಬಡವಿ ಗೆಳತಿ ಫಾತೀಮಳ ಬಳಿ
ಕಡತಂದು ಅಂಬಲಿ ಕುಡಿಸುವಾಕೆ

ಎಲ್ಲಿ ನನ್ನ ಸೀತೆ? ಎಲ್ಲಿ ನನ್ನ ಮಕ್ಕಳು?
ಭೂತ ಸಂಚರಿಸುವ ಹೊತ್ತು
ಯಾರು ಉತ್ತರಿಸಬೇಕು

ನಿಮ್ಮ ಪಕ್ಕದಲ್ಲಿ ರಾಮ ಇದ್ದಾನೆ
ಮುಖಾಮುಖಿಯಾಗಿ ನಿಮ್ಮನ್ನು ಕೇಳುತ್ತಾನೆ.
ಉತ್ತರಿಸಿ ಬಾಗಿಲು ತೆಗೆಯುತ್ತೀರೋ
ಇಲ್ಲವೇ ಸತ್ತು ಭೂತವಾಗುತ್ತೀರೋ?

ಆಯ್ಕೆ ನಿಮ್ಮ ಮನೆ ಬಾಗಿಲು
ಬಳಿ ಕಾಯುತ್ತಿದೆ.

-ಪರಶುರಾಮ ಕಲಾಲ್, ಹೊಸಪೇಟೆ

ಶೇರು ಹಗರಣದ ಮೊತ್ತ ಎಷ್ಟು?

ಸಿಬಿಐನ ನಿರ್ದೇಶಕರ ಪ್ರಕಾರ ಹಗರ- ಣದ ಮೊತ್ತವೆಷ್ಟು ಗೊತ್ತೇ? ಹಾಂ! ಎರಡೊ ಮೂರು ಸಾವಿರ ಕೋಟಿ ರೂಪಾಯಿಗಳು ಎಂದೀರಿ. ಹಗರಣಕಾರರಿಗೆ ಅವಮಾನವಾ- ದೀತು..............

ಹಗರಣದ ಸದ್ಯದ ಮೊತ್ತ ರೂಪಾಯಿ 5341 ಕೋಟಿ ಈ ಮೊತ್ತ ಇನ್ನೂ ಹೆಚ್ಚಾ- ದರೂ ಆದೀತು. ಅದಕ್ಕೆ ಗರಿಷ್ಠ ಮಿತಿಯ- ನ್ನೇನು ನಿಗದಿಪಡಿಸಿಲ್ಲ. ಅಲ್ಲವೇ? ಭಾರ- ತೀಯ ಸ್ಟೇಟ್ ಬ್ಯಾಂಕ್ ಒಂದೇ ರೂ 838 ಕೋಟಿ ಕಳೆದುಕೊಂಡಿತು.

ಹಿತೇನ್‌ಗೆ ಹಣ ನೀಡಿದ್ದನ್ನು ಒಪ್ಪಿಕೊಂಡ ಬ್ಯಾಂಕುಗಳು

ಕೆನರಾಬ್ಯಾಂಕ್ ಮತ್ತು ಆಂಧ್ರಾಬ್ಯಾಂಕ್ ತಮ್ಮ ಆಧೀನ ಸಂಸ್ಥೆಗಳ ಮೂಲಕ ದಲ್ಲಾಳಿ ಹಿತೇನ್ ದಲಾಲ್‌ಗೆ ಹಣ ನೀಡಿದ್ದನ್ನು ಒಪ್ಪಿಕೊಂ ಡಿವೆ. ಜಂಟಿ ಪಾರ್ಲಿಮೆಂಟರಿ ಸಮಿ- ತಿಯ ಮುಂದೆ ಈ ಬ್ಯಾಂಕ್‌ಗಳು ಅಧಿಕಾ- ರಿಗಳು ನೀಡಿದ ಹೇಳಿಕೆಗಳಲ್ಲಿ ಈ ವಿಷಯ- ವನ್ನು ಒಪ್ಪಿಕೊಂಡಿದ್ದಾರೆ. ಆಂಧ್ರ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಕೆ.ಆರ್. ನಾಯಕ್ ತಮ್ಮ ಹೇಳಿಕೆಯಲ್ಲಿ ಆಂಧ್ರಬ್ಯಾಂಕ್ ಫೈನಾನ್ಶಿಯಲ್ ಸರ್ವಿಸಸ್ ರೂ 1717 ಕೋಟಿಗಳಷ್ಟು ದೊಡ್ಡ ಮೊತ್ತವನ್ನು ಫೇರ್‌ಗ್ರೋಥ್ ಫೈನಾನ್ಶಿಯಲ್ ಸರ್ವಿಸಸ್‌ನಲ್ಲಿ ಹೂಡಿತ್ತು. ಇದು ಹೂಡಿ- ಕೆಯ ಒಟ್ಟು ಮೊತ್ತದ ಶೇ 43 ರಷ್ಟು ಎಂದು ತಿಳಿಸಿದ್ದಾರೆ. ಫೇರ್‌ಗ್ರೋಥ್ ಫೈನಾನ್ಶಿಯಲ್ ಸರ್ವಿಸಸ್ ಅನ್ನು ಪ್ರಾರಂಭಿಸಿದ್ದು ಕೆನರಾ ಬ್ಯಾಂಕಿನ ಮಾಜಿ ಅಧ್ಯಕ್ಷ ದಿವಂಗತ ಬಿ. ಆರ್. ರತ್ನಾಕರ. ಈ ಕೆ. ಆರ್. ನಾಯಕ್ ರತ್ನಾಕರರ ಕೆಳಗೆ ಕೆಲಸ ಮಾಡಿದ್ದರು. ಹಿಂದಿನ ಧಣಿಗೆ ಇಷ್ಟಾದರೂ ಕಾಣಿಕೆ ನೀಡದಿದ್ದರೆ ಶಿಷ್ಯನಿಗೆ ವಿದ್ಯೆ ಸಿದ್ಧಿಸುತ್ತದೆಯೇ?

ಕ್ಯಾನ್‌ಫಿನಾ ಹಗರಣದಲ್ಲಿ ತೈಲ ಅಭಿವೃದ್ಧಿಯ ಮಂಡಳಿಯ ಕೈ

ಈ ಹಗರಣದಲ್ಲಿ ಯಾರ ಕೈ ಎಲ್ಲಿರು- ತ್ತದೆಂದೇ ಹೇಳಲಾಗುವುದಿಲ್ಲ.

ಕಳೆದ ಮಾರ್ಚ್ 23 ರಂದು ಸಿಂಡಿಕೇಟ್ ಬ್ಯಾಂಕ್ ತೈಲ ಉದ್ಯಮ ಅಭಿ- ವೃದ್ಧಿ ಮಂಡಳಿಗೆ ಶೇ. 18.25 ರ ಬಡ್ಡಿ ಕೊಡಲು ಮುಂದೆ ಬಂದಿತು. ಕ್ಯಾನ್‌ಫಿ- ನಾದ ಮುಂಬಯಿ ಶಾಖೆ ಶೇ. 18.20 ರಷ್ಟನ್ನು ಮಾತ್ರ ನೀಡಲು ಮುಂದೆ ಬಂತು. ಆದರೆ ಮೂರು ದಿನಗಳ ನಂತರ ಕ್ಯಾನ್- ಫಿನಾದ ದೆಹಲಿ ಶಾಖೆ ಶೇ. 18.30 ರಷ್ಟನ್ನು ನೀಡಲು ಮುಂದೆ ಬಂದು ಕೇಂದ್ರ ಮಂತ್ರಿ ಶಂಕರಾನಂದರಿಗೆ ನೇರವಾಗಿ ಪತ್ರ ಬರೆ- ಯಿತು. ಇದೇ ಸಮಯದಲ್ಲಿ ಕ್ಯಾನ್‌ಫಿನಾ ಬೇರೆಯವರಿಗೆ ಹೆಚ್ಚಿನ ಬಡ್ಡಿದರ ನೀಡಿತ್ತು. (ಶೇ. 41 ರವರೆಗೆ) ತೈಲ ಉದ್ಯಮ ಅಭಿ- ವೃದ್ಧಿ ಮಂಡಳಿಗೆ ಇಷ್ಟು ಕಡಿಮೆ ಬಡ್ಡಿ ದರ ನೀಡಲು ಕಾರಣವೇನೆಂದು ಕೇಳಿದರೆ ಕ್ಯಾನ್- ಫಿನಾ ಅಧಿಕಾರಿಗಳಲ್ಲಿ ಉತ್ತರವಿಲ್ಲ.

ಉತ್ತರ ಅವರ ಬಳಿ ಹೇಗಿದ್ದಿತು? ಅದು ಶಂಕರಾನಂದರ ತೈಲ ಉದ್ಯಮ ಅಭಿವೃದ್ಧಿ ಮಂಡಳಿಯಲ್ಲಿ ಅವಿತಿಟ್ಟುಕೊಂಡಿದೆ.

ದೇಶೀ ಬ್ಯಾಂಕುಗಳ ಮೂಲಕ ಸಾರ್ವಜನಿಕ ವಲಯದ ಘಟಕಗಳ ಹಣ ಹೀರಿದ ಸಿಟಿ ಬ್ಯಾಂಕ್

ಸಿಟಿ ಬ್ಯಾಂಕ್ ರಾಷ್ಟ್ರೀಕೃತ ಮತ್ತು ಇತರೇ ಸ್ಥಳೀಯ ಬ್ಯಾಂಕುಗಳ ಮೂಲಕ ಸಾರ್ವಜನಿಕ ವಲಯದ ಘಟಕಗಳ ಹಣ- ವನ್ನು ಹೀರುತ್ತಿತ್ತು ಎಂಬುದು ಈಗ ಬೆಳ- ಕಿಗೆ ಬಂದಿದೆ. ಇದಕ್ಕೂ ಲಾಭವೇ ಮೂಲ ಪ್ರೇರಣೆ. ವಿದೇಶಿ ಬ್ಯಾಂಕುಗಳು ಲಾಭವಿ- ಲ್ಲದೆ ಒಂದು ಕಡ್ಡಿಯನ್ನು ಅಲ್ಲಾಡಿಸುವುದಿಲ್ಲ. ಆದರೆ ಲಾಭ ಸಿಗುತ್ತದೆಂದಾದರೆ ಎಂತಹ ಹೇಯ ಕಾರ್ಯಕ್ಕೂ ಸಿದ್ಧ.

ಅಲಹಾಬಾದ್ ಬ್ಯಾಂಕು ಸರಕಾರಿ ವಲಯದ ಘಟಕಗಳ ಶೇರು ಮಾರುಕ- ಟ್ಟೆಯಲ್ಲಿ ನೊಂದಣಿಯಾಗುವ ಮೊದಲೇ ಮಾರಿತ್ತು. ಶೇರುಗಳ ಬೆಲೆಯ ಮೊತ್ತ ರೂ 26.02 ಕೋಟಿ ಈ ಅಕ್ರಮ ವಹಿವಾಟಿನಲ್ಲಿ ಅಲಹಬಾದ್ ಬ್ಯಾಂಕ್ ಮಾಡಿದ ಲಾಭ- ವಷ್ಟು ಗೊತ್ತೆ? ಒಂದು ತಿಂಗಳಲ್ಲಿ ರೂ 14.17 ಕೋಟಿ ರೂಪಾಯಿಗಳ ಲಾಭ!!

ಇದೇ ರೀತಿ ವಿಜಯ ಬ್ಯಾಂಕು ರೂ. 1,010 ಕೋಟಿ ರೂಪಾಯಿಗಳ ವಹಿವಾ- ಟನ್ನು ಸಿಟಿ ಬ್ಯಾಂಕ್‌ನೊಂದಿಗೆ ಮಾಡಿತ್ತು. ಬ್ಯಾಂಕ್ ಆಫ್ ಮಧುರಾ ಸಹ ಇಂತಹವೇ ವಹಿವಾಟಿನಲ್ಲಿ ತೊಡಗಿತ್ತು. ●

ಕೇಂದ್ರ ಮಂತ್ರಿ ಮಮತಾಬ್ಯಾನರ್ಜೀಯವರ ಕುಚೇಷ್ಟೆಗಳು

ಇತ್ತೀಚಗೆ ಎಲ್ಲಾ ಪತ್ರಿಕೆಗಳಲ್ಲಿ ದಪ್ಪ-ದಪ್ಪ ಅಕ್ಷರಗಳಲ್ಲಿ ಪ್ರಕಟವಾದ ಜ್ಯೋತಿ ಬಸುರವರ ಬಳಿ ನ್ಯಾಯ ಕೇಳಲು ಹೋದ ಕೇಂದ್ರ ಮಂತ್ರಿ ಮಮತಾಬ್ಯಾನರ್ಜೀಯವರ ಮೇಲೆ ಪೋಲೀಸರ ಹಲ್ಲೆ, ಬಂಧನ ಎಂಬ ಸುದ್ದಿಯನ್ನು ದೇಶಾದ್ಯಂತ ಜನ ಓದಿ ಮಹಿಳೆಯರ ರಕ್ಷಣೆಗೆ ಕಂಕಣಬದ್ಧವಾದ ಪ್ರಜಾಪ್ರಭುತ್ವಕ್ಕೆ ಮಾದರಿಯಾದ ಎಡರಂಗ ಸರ್ಕಾರ ಹೀಗೇಕೆ ವರ್ತಿಸಿತು ಎಂಬ ಸಂಶಯ ತಾಳಿರಬಹುದು. ಈ ಘಟನೆಯ ಸೃಷ್ಟಿ ಇವತ್ತ ಕಲ್ಕತ್ತಾ ಪತ್ರಿಕೆಗಳ ಕುಮಕ್ಕು ಒಂದೆಡೆ ದೇಶದ ಎಲ್ಲಾ ಪತ್ರಿಕೆಗಳೂ ಘಟನೆಯನ್ನು ಪೂರ್ಣ ತಿರುಚಿ ಸತ್ಯಾಂಶವನ್ನು ಮುಚ್ಚಿಟ್ಟು ಜ್ಯೋತಿಬಸುರವರ ಹೇಳಿಕೆಯನ್ನು ಪ್ರಕಟಿಸದೆ ಮಾಡಿದ ಪತ್ರಿಕಾ ದ್ರೋಹ ಮತ್ತೊಂದು ಕಡೆ ನಮ್ಮ ಪತ್ರಿಕೆಗಳ ಸ್ವರೂಪವನ್ನು ಸಾಬೀತುಪಡಿಸುತ್ತದೆ. ಇದೇ ಸಂದರ್ಭವನ್ನು ಉಪಯೋಗಿಸಿ ಕಾಂಗ್ರೆ ಗೂಂಡಾಗಳು ಇಡೀ ಕಲ್ಕತ್ತಾವನ್ನು ರಣರಂಗ ಮಾಡಲೆಳಸಿದ್ದು-- ಅದೂ ದೇಶದ ಸಂಕಷ್ಟ ಪರಿಸ್ಥಿತಿಯಲ್ಲಿ ಯಾವ ಉದ್ದೇಶದಿಂದ? ಮುಂದೆ ಓದಿ.

> **ಫೆಬ್ರವರಿ 15ರಂದು ತ್ರಿಪುರಾ ಚುನಾವಣೆ**
>
> ತ್ರಿಪುರಾ ವಿಧಾನಸಭೆಗೆ ಫೆಬ್ರವರಿ 15ರಂದು ಚುನಾವಣೆ ನಡೆಯಲಿದೆ. ಸಿಪಿಐ(ಎಂ) ನೇತೃತ್ವದ ಎಡರಂಗ ಎಲ್ಲಾ 60 ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳ ಹೆಸರುಗಳನ್ನು ಘೋಷಿಸಿದೆ. ಸಿಪಿಐ(ಎಂ)ನ 51 ಅಭ್ಯರ್ಥಿಗಳು, ಸಿಪಿಐ, ಆರ್‌ಎಸ್‌ಪಿ, ಜನತಾದಳ ಮತ್ತು ತ್ರಿಪುರಾ ಗುಡ್ಡಗಾಡು ಜನಗಳ ಪಕ್ಷದ ತಲಾ ಇಬ್ಬಿಬ್ಬರು ಅಭ್ಯರ್ಥಿಗಳು ಹಾಗೂ ಫಾರ್ವರ್ಡ್ ಬ್ಲಾಕ್‌ನ ಒಬ್ಬ ಅಭ್ಯರ್ಥಿ ಈ ಚುನಾವಣೆಗಳಲ್ಲಿ ಸ್ಪರ್ಧಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ನೃಪೇನ್ ಚಕ್ರವರ್ತಿ ಅಗರ್ತಲಾದಿಂದ, ಹಿರಿಯ ಸಿಪಿಐ(ಎಂ) ಮುಖಂಡ ದಶರಥ್ ದೇಬ್, ರಾಮಚಂದ್ರ ಘಾಟ್ ಮಾಸಲು ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

ನಡೆದದ್ದೇನು?

ಜನವರಿ 7ರಂದು ನಡೆದದ್ದೇನು? ಸಂಜೆ 4ಗಂಟೆಗೆ ಮಮತಾ ಬ್ಯಾನರ್ಜಿ ಆಕೆಯ ಗುಂಪಿನ ಎಂಎಲ್‌ಎಯೊಂದಿಗೆ ರೈಟರ್ಸ್ ಬಿಲ್ಡಿಂಗ್‌ಗೆ ಹೋದರು. 'ನಾಡಿಯಾ ಜಿಲ್ಲೆಯಲ್ಲಿ ಒಂದು ಹುಡುಗಿಯ ಅಪಮಾನ' ನಡೆಯಿತೆಂದ ಘಟನೆಯ ಬಗ್ಗೆ ರಾಜ್ಯದ ಮುಖ್ಯ ಕಾರ್ಯದರ್ಶಿಯೊಡನೆ ಚರ್ಚಿಸಲು ಮೊದಲೇ ನಿರ್ಧರಿಸಿದ ಯೋಜನೆಯಂತೆ ಆಕೆಯೊಡನೆ ವರದಿಗಾರರ ಹಾಗೂ ಛಾಯಾಚಿತ್ರಕಾರರ ಒಂದು ತಂಡವೇ ಇತ್ತು.

ರಾಜ್ಯ ಕಾರ್ಯದರ್ಶಿ - ನಾರಾಯಣ ಕೃಷ್ಣಮೂರ್ತಿಯವರ ಪ್ರಕಾರ ಆಕೆ ಅವರೊಂದಿಗೆ ಚರ್ಚಿಸುವ ಕಾರ್ಯಕ್ರಮವಿತ್ತು. ಆದರೆ ಮುಖ್ಯ ಕಾರ್ಯದರ್ಶಿಯೊಡನೆ ಚರ್ಚಿಸುವ ಕಾರ್ಯಕ್ರಮವನ್ನು ಇಷ್ಟಕ್ಕಿಷ್ಟಂತೆ ಬದಲಿಸಿ ಆ ಕ್ಷಣವೇ ಮುಖ್ಯಮಂತ್ರಿಗಳೊಡನೆ ಮಾತನಾಡಬೇಕು ಎಂದು ಆಕೆ ಒತ್ತಾಯಿಸಿದರು. ಈ ಕಾರ್ಯಕ್ರಮದ ಬಗ್ಗೆ ಯಾವುದೇ ಪೂರ್ವಸೂಚನೆಯಿಲ್ಲದ್ದರಿಂದ ಮುಖ್ಯಮಂತ್ರಿಗಳು ಪೇರಿದು ವಿಷಯ ಚರ್ಚಿಸುವ ಕಾರ್ಯಕ್ರಮವಿದ್ದರಿಂದ ಆಕೆಗೆ ಪರವಾನಿಗಿ ದೊರೆಯಲಿಲ್ಲ. ಆಕೆ ಮತ್ತು ಆಕೆಯ ತಂಡ ಮುಖ್ಯಮಂತ್ರಿಗಳ ಕೋಣೆಯ ಎದುರೇ ಕುಳಿತು ಕರ್ಕಶ ದನಿಯಲ್ಲಿ ಕೂಗಲಾರಂಭಿಸಿದರು.

ಜ್ಯೋತಿ ಬಸು ತಮ್ಮ ಕೋಣೆಗೆ ಪ್ರವೇಶಿಸಲಾರಂಭಿಸಿದಾಗ ಈ ಗ್ಯಾಂಗ್ ಅವರನ್ನು ತಡೆಯಲು ಪ್ರಯತ್ನಿಸಿತು. ಪತ್ರಕರ್ತರ ತಂಡ ಆಗಲೇ ದೊಡ್ಡೆ ಆರಂಭಿಸಿದ್ದರು. ಕೆಲವರು ಮಮತಾ ಬ್ಯಾನರ್ಜಿಗೆ ಸೂಚನೆ ನೀಡುತ್ತಿರುವುದೂ ಕಂಡು ಬಂತು. ಮುಖ್ಯಮಂತ್ರಿಗಳ ಕೋಣೆಯ ಸುತ್ತಮುತ್ತ ಚಲನವಲನಕ್ಕೆ ಮಿತಿಗಳಿರುತ್ತವೆ. ಅದನ್ನು ಮೀರಿ ಕಾಂಗ್ರೆ ತಂಡ ನಡೆಸಿದ ಗಲಭೆಯನ್ನು ಕೇಳಿ ಕಚೇರಿಯ ಸಿಬ್ಬಂದಿ ವರ್ಗ ಅಲ್ಲಿಗೆ ಧಾವಿಸಿತು. ಎಷ್ಟೇ ಪ್ರಯತ್ನಿಸಿದರೂ ಜ್ಯೋತಿ ಬಸುರವರನ್ನು ತಡೆಯುವ ಕಾಂಗ್ರೆ ಸರ್ಕಸ್ಸು ಯಶಸ್ವಿಯಾಗಲಿಲ್ಲ.

ನಂತರ ಹಿರಿಯ ಪೋಲೀಸ್ ಅಧಿಕಾರಿಗಳು ಬಂದು ಮಮತಾ ಬ್ಯಾನರ್ಜಿಯವರನ್ನು ಆ ಸ್ಥಳ ಬಿಡಲು ಮನವಿ ಮಾಡಿದರು. ಯಥಾ ಪ್ರಕಾರ ಅತ್ಯಂತ ಒರಟಾಗಿ ಮನವಿಯನ್ನು ತಿರಸ್ಕರಿಸಲಾಯಿತು. "ನನಗೇನು ಬೇಕೋ ಅದನ್ನು ಮಾಡುತ್ತೇನೆ ಯಾರೂ ನನ್ನನ್ನು ತಡೆಯಲು ಸಾಧ್ಯವಿಲ್ಲ" ಎಂಬ ಕೇಂದ್ರ ಮಂತ್ರಿಯ ಅಬ್ಬರ ಕೇಳಿ ಬಂತು. ಮುಖ್ಯಮಂತ್ರಿಗಳ ಕೋಣೆಯೆದುರೇ ಈ ಕುಚೇಷ್ಟೆ ನಡೆಯುತ್ತಿತ್ತು. ಅವರನ್ನು ಅಲ್ಲಿಗೆ ಹೊರಗೊಯ್ಯಲು ಬಂದ ಮಹಿಳಾ ಪೋಲೀಸರ ಕಪಾಳಗಳಿಗೆ ಕೇಂದ್ರ ಮಂತ್ರಿ ಮಮತಾ ಬ್ಯಾನರ್ಜಿಯವರು ಹಲವಾರು ಬಾರಿ ತಟ್ಟಿದರು! ಆದರೂ ಮಹಿಳಾ ಪೋಲೀಸರು ಆಕೆಯನ್ನು ಅಲ್ಲಿಂದ ಒಯ್ದು ಬಂಧಿಸಿದರು. ಉದ್ದೇಶಪೂರ್ವಕವಾಗಿ ಈ ಗುದ್ದಾಟದಲ್ಲಿ ಸೇರಿಕೊಂಡ ಪತ್ರಕರ್ತರು ಪರಿಸ್ಥಿತಿ ತಮ್ಮ ಹತೋಟಿ ಮೀರಿ ಹೋಗುತ್ತಿದೆಯೆಂದು ಕಂಡ ಕೂಡಲೇ ಪೋಲೀಸರು ತಮಗೆ ಹೊಡೆದರು ಎಂದು ಅರಚಲಾರಂಭಿಸಿದರು. ಕೆಲವರು ರಾಜ್ಯ ಪ್ರಸಾರ ಮಂತ್ರಿ ಬುದ್ಧದೇವ ಭಟ್ಟಾಚಾರ್ಯರನ್ನು ಬಯ್ದರು ಕೂಡಾ.

ಲಾಲ್ ಭಝಾರ್ ಸೆಂಟ್ರಲ್ ಲಾಕಪ್‌ಗೆ ಒಯ್ದು ಕೂಡಲೇ ಆಕೆಯನ್ನು ಬಿಡುಗಡೆ ಮಾಡಲಾಯಿತು. ಆದರೆ ಮುಖ್ಯಮಂತ್ರಿಗಳು 'ಕ್ಷಮೆ' ಕೇಳದೆ ತಾನು ಹೋಗುವುದಿಲ್ಲ ಎಂದು ಆಕೆ ನಿರಾಕರಿಸಿದಳು. ಆ ಯಾರೂ ಕ್ಷಮೆ ಕೇಳಲಿಲ್ಲ. ರಾತ್ರಿಯ ನಿಶ್ಶಬ್ದ ವಾತಾವರಣದಲ್ಲಿ ತನ್ನ ಮನೆಗೆ ಹೋದಳು.

ಈ ನಡುವೆ ಮುಖ್ಯಮಂತ್ರಿ ಜ್ಯೋತಿ ಬಸು ಒಬ್ಬ ಕೇಂದ್ರ ಮಂತ್ರಿಯು ಈ ರೀತಿ ವರ್ತಿಸಿದ್ದರ ಬಗ್ಗೆ ಖಂಡಿಸಿದ್ದಾರೆ. ಆಕೆ ಪೋಲೀಸರ ಮೇಲೆ ಹಲ್ಲೆ ಮಾಡಿದ್ದಾರೆ ಎಂದರು. ರಾಜ್ಯ ಸರಕಾರ ಕೇಂದ್ರಕ್ಕೆ ಈ ಬಗ್ಗೆ ಒಂದು ಪ್ರತಿಭಟನಾ ಪತ್ರ ಕಳಿಸಿದೆ.

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಶೈಲೇನ್ ದಾಸ್ ಗುಪ್ತಾ ಕೇಂದ್ರಮಂತ್ರಿಗಳ ಈ ವರ್ತನೆಯನ್ನು ಖಂಡಿಸುತ್ತಾ ಕೋಮುವಾದ-ವಿರೋಧಿ ಚಳುವಳಿಯಿಂದ ಜನರ ಗಮನವನ್ನು ಬೇರೆಡೆಗ ಸೆಳೆಯಲು ಈ ರೀತಿ ವರ್ತನೆ ಎಂದಿದ್ದಾರೆ. ಇದು ಕೋಮುವಾದಿ ಶಕ್ತಿಗಳಿಗೆ ನೆರವಾಗುತ್ತದೆ ಎಂದಿದ್ದಾರೆ. ಈ ಘಟನೆಗೆ ಸಂಬಂಧಪಟ್ಟಂತೆ ಇನ್ನೊಂದು ಬೆಳವಣಿಗೆಯೆಂದರೆ ರಾಜ್ಯ ಬಿಜೆಪಿ ಕಾರ್ಯಕರ್ತ ತಪನ್ ಸಿಕ್‌ದರ್ ಮಮತಾ ಬ್ಯಾನರ್ಜಿಯವರ ಈ 'ಚಳುವಳಿ'ಯನ್ನು ಬೆಂಬಲಿಸಿದ್ದಾರೆ.



ಕಲ್ಕತ್ತ ಜ. 8 :ಕಾಂಗ್ರೆಸ್(ಐ) ಗೂಂಡಾಗಳು ಕಲ್ಕತ್ತಾ ಮತ್ತು ಹೊರವಲಯದ ಪ್ರದೇಶಗಳಲ್ಲಿ ಭಯೋತ್ಪಾದಕ ವಾತಾವರಣ ಸೃಷ್ಟಿಸಿದರು. ರಾಜ್ಯ ಆಡಳಿತದ ಕೇಂದ್ರವಾದ ರೈಟರ್ಸ್ ಬಿಲ್ಡಿಂಗ್‌ನಲ್ಲಿ ಕೇಂದ್ರ ಮಂತ್ರಿ ಮಮತಾ ಬ್ಯಾನರ್ಜಿಯವರ ಮೇಲೆ ನಡೆಯಿತೆನ್ನಲಾದ ಹಲ್ಲೆಯನ್ನು ಪ್ರತಿಭಟಿಸುತ್ತಿರುವಾಗಿ ಅವರು ಹೇಳಿಕೊಳ್ಳುತ್ತಿದ್ದರು. ನಗರದ ವಿವಿಧ ಭಾಗಗಳಲ್ಲಿ ಕಾಂಗ್ರೆ ಕಾರ್ಯಕರ್ತರು ಬಾಂಬುಗಳನ್ನು ಎಸೆದು ಬಸ್ಸುಗಳನ್ನು ಸುಟ್ಟರು. ನೂರಕ್ಕೂ ಹೆಚ್ಚು ಬಸ್ಸುಗಳು ಇದಕ್ಕೆ ಬಲಿಯಾಗಿವೆ. ಅಲ್ಲದೆ ಪ್ರಯಾಣಿಕರನ್ನು ಅವರು ಬಿಡಲಿಲ್ಲ. ಹಲವೆಡೆ ಜನಗಳ ಸಿಟ್ಟನ್ನು ಎದುರಿಸಲಾಗದ ಕಾಂಗ್ರೆ ಕಾರ್ಯಕರ್ತರು ಮಧ್ಯಾಹ್ನದ ಮೇಲೆ ಹಿಂದೆ ಸರಿದರು ಎಂದು ತಿಳಿದು ಬಂದಿದೆ.

ಜನವರಿ 7ರಂದು ಪಶ್ಚಿಮ ಬಂಗಾಳದ 'ಕುಚೇಷ್ಟೆಪ್ರಗಳ ರಾಣಿ' ಎನಿಸಿಕೊಂಡ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿಗಳ ಕಚೇರಿಯೆದುರು ನಡೆಸಿದ ಕೃತ್ಯ ಹತಾಶೆಯ ಭಾವನೆಯನ್ನು ಸೂಸುತ್ತಿತ್ತು. ಪತ್ರಿಕಾರಂಗದ ಒಂದು ವಿಭಾಗ ಇದರಲ್ಲಿ ಆಕೆಗೆ ಎಲ್ಲಾ ತೆರದ ಬೆಂಬಲ ನೀಡಿತು. ಪೋಲೀಸ್‌ರೊಂದಿಗೆ ಆಕೆಯ ಗುದ್ದಾಟದಲ್ಲೂ ಭಾಗವಹಿಸಿತು.

ತ್ರಿಪುರಾ: ಚುನಾವಣೆ ಅಕ್ರಮಗಳನ್ನೆದುರಿಸಲು "ಜನತಾ ಪಡೆ"

ಗಿರಿಜನರ ರ್‍ಯಾಲಿಯಲ್ಲಿ ಕಾಂ. ದಶರಥ್ ದೇಬ್

ಜನವರಿ 8ರಂದು ಅಗರ್ತಲಾದಲ್ಲಿ ತ್ರಿಪುರಾದಲ್ಲೇ ಅಭೂತಪೂರ್ವ ಬುಡಕಟ್ಟುಜನರ ಸಾಮೂಹಿಕ ರ್‍ಯಾಲಿ ನಡೆಯಿತು. 'ತ್ರಿಪುರಾ ರಾಜ್ಯ ಉಪಜಾತಿ ಗಣಮುಕ್ತಿ ಪರಿಷತ್' ಬುಡಕಟ್ಟು ಜನರ 13 ಬೇಡಿಕೆಗಳ ಮೇಲೆ ಈ ರ್‍ಯಾಲಿಯನ್ನು ಸಂಘಟಿಸಿತ್ತು. ಸಾವಿರಾರು ಬುಡಕಟ್ಟು ಗಂಡಸರು, ಹೆಂಗಸರು, ಅಗರ್ತಲಾದ ರಸ್ತೆಗಳಲ್ಲಿ ತುಂಬಿ ಹೋಗಿದ್ದರು. ಇವರಲ್ಲಿ ಶೇ.90ರಷ್ಟು ಯುವಜನ. ದೂರದ ಸಂಚಾರ ಸಂಪರ್ಕ ಸರಿಯಾಗಿ ಇಲ್ಲದ ಪ್ರದೇಶಗಳಿಂದಲೂ ಅವರು ನಡೆದುಕೊಂಡೋ, ಬಸ್ಸು, ಟ್ರಕ್ಕುಗಳಲ್ಲೋ ಬಂದಿದ್ದರು. ಕೈಯಲ್ಲಿ ಕೆಂಬಾವುಟ ಹಿಡಿದು ಬಂದಿದ್ದರು. ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗ ಸರಕಾರವನ್ನು ಮತ್ತೆ ಅಧಿಕಾರಕ್ಕೆ ತರುವ ಪ್ರತಿಜ್ಞೆ ಹೊತ್ತು ಬಂದಿದ್ದರು. ವಾಹನಗಳು ದೊರೆಯದ್ದಿದ್ದರಿಂದ ಸಾವಿರಾರು ಮಂದಿಗೆ ರ್‍ಯಾಲಿಯಲ್ಲಿ ಭಾಗವಹಿಸಲಾಗಲಿಲ್ಲ.

ಮೂರು ಗಂಟೆಗೆ 'ರವೀಂದ್ರ ಭವನ'ದಿಂದ ಆರಂಭವಾದ ಮೆರವಣಿಗೆ ಇಡೀ ನಗರವನ್ನು ಸುತ್ತಿ ಒಂದು ಬೃಹತ್ ರ್‍ಯಾಲಿಯಾಗಿ ಮಾರ್ಪಟ್ಟಿತು. ನಗರದ ಎಲ್ಲಾ ಬೀದಿಗಳಲ್ಲೂ ಬುಡಕಟ್ಟು ಜನಸಾಗರ, ಧರ್ಮನಗರ, ಕಂಚನಪುರ, ರೈಮಾ ಕಣಿವೆ, ಎಲ್ಲಾ ಸಬ್ ಡಿವಿಜನ್‌ಗಳಿಂದ ಬಂದ ಬುಡಕಟ್ಟು ಜನರಿಗೆ ಅಭಿನಂದನೆ ಸಲ್ಲಿಸಲು ಅಗರ್ತಲಾದ ನಾಗರಿಕರು ರಸ್ತೆಯ ಇಕ್ಕೆಲಗಳಲ್ಲೂ ನೆರೆದಿದ್ದರು.

ತ್ರಿಪುರಾ ರಾಜ್ಯ ಉಪಜಾತಿ ಗಣಮುಕ್ತಿ ಪರಿಷದ್‌ನ ಅಧ್ಯಕ್ಷ ದಶರಥ್ ದೇಬ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಈ ಬಾರಿ ಚುನಾವಣೆಗಳಲ್ಲಿ ಮೋಸ ನಡೆಸುವ ಯಾವುದೇ ಪ್ರಯತ್ನವನ್ನು ಸಹಿಸುವುದಿಲ್ಲ ಎಂದು ಕಾಂಗ್ರೆ-ಟಿಯುಜೆಎಸ್ ಕೂಟವನ್ನು ಎಚ್ಚರಿಸಿದರು. ಚುನಾವಣಾ ಮೋಸವನ್ನು ಎದುರಿಸಲು 'ಜನತಾ ಪಡೆ' ತಂಡಗಳನ್ನು ರಚಿಸಲು ಕರೆ ನೀಡಿದರು. ತಂತಮ್ಮ ಪ್ರದೇಶಗಳಲ್ಲಿ ಬುಡಕಟ್ಟು ಯುವಜನ, ಇತರ ಯುವಜನರೊಂದಿಗೆ ಸೇರಿ ಚುನಾವಣಾ ಮೋಸ ಯಾವುದೇ ಪ್ರಯತ್ನ ಸಾಗದಂತೆ ಮಾಡಬೇಕೆಂದು ಕರೆ ನೀಡಿದರು.

ದಿಲ್ಲಿಗೆ ಹೋಗಿ ತ್ರಿಪುರಾದ ಇಡೀ ಬುಡಕಟ್ಟು ಪ್ರದೇಶವನ್ನು ಗಲಭೆ ಪೀಡಿತ ಎಂದು ಘೋಷಿಸಿ ಸೇನೆ ನಿಲ್ಲಿಸಬೇಕೆಂದು ಟಿಯುಜೆಎಸ್ ಮುಖಂಡರು ಹೇಳಿರುವುದನ್ನು ಟೀಕಿಸಿದ ದಶರಥ್ ದೇಬ್ ಹಿಂದೆ ರಾಜೀವ್‌ಗಾಂಧಿಯವರು ಮಾಡಿದ ಈ ತಂತ್ರದ ಪುನರಾವರ್ತನೆಯಾಗುವುದನ್ನು ಜನ ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಆಹಾರ, ಕುಡಿಯುವ ನೀರು, ಆರೋಗ್ಯ ಸೌಲಭ್ಯ ಕೆಲಸವಿಲ್ಲದೆ ನೂರಾರು ಬುಡಕಟ್ಟು ಜನ ಸತ್ತಿರುವುದು ಕಾಂಗ್ರೆ-ಟಿಯುಜೆಎಸ್‌ನ ಜನ-ವಿರೋಧಿ ಧೋರಣೆಗಳಿಂದ ಎಂದ ದಶರಥ್ ದೇಬ್ ಮುಖ್ಯಮಂತ್ರಿ ಸಮೀರ್ ಬರ್ಮನ್ ಮತ್ತು ಟಿಯುಜೆಎಸ್ ಮುಖಂಡರು ಬುಡಕಟ್ಟು ಉಗ್ರಗಾಮಿಗಳಿಗೆ ಆಶ್ರಯವಿತ್ತು,ಆ ಅಪರಾಧವನ್ನು ಮರೆ ಮಾಡಲು ಎಟಿಟಿಎಫ್ ಸಂಘಟನೆಯ ಹಿಂದೆ ಸಿಪಿಐ(ಎಂ) ಬೆಂಬಲವಿದೆ ಎಂದು ಸುಳ್ಳು ಆಪಾದನೆ ಮಾಡುತ್ತಿದ್ದಾರೆ ಎಂದರು. ಸಿಪಿಐ(ಎಂ) ಎಂದೂ ಯಾವುದೇ ಉಗ್ರಗಾಮಿ ಸಂಘಟನೆಗೆ ಬೆಂಬಲ ನೀಡಿಲ್ಲ , ನೀಡುವುದಿಲ್ಲ , ಇದು ಪಕ್ಷದ ನೀತಿಗಳಿಗೆ ವಿರುದ್ಧವಾದದ್ದು ಎಂದರು. ಬದಲಾಗಿ ಸಿಪಿಐ(ಎಂ) ಸದಾ ಕೋಮುವಾದಿ, ಉಗ್ರಗಾಮಿ, ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟ ನಡೆಸಿದೆ, ನೂರಾರು ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರು ಟಿಎನ್‌ವಿ ಉಗ್ರಗಾಮಿಗಳಿಗೆ ಬಲಿಯಾಗಿದ್ದಾರೆಂದು ನೆನಪಿಸಿದರು. ಕಾಂಗ್ರೆ-ಟಿಯುಜೆಎಸ್ ಕೂಟ ಸರಕಾರ ಸಾವಿರಾರು ಬಾಂಗ್ಲಾದೇಶೀಯರಿಗೆ ಬುಡಕಟ್ಟು ಪ್ರದೇಶಗಳಲ್ಲಿ ಬಂದು ನೆಲೆಸಲು ಪ್ರೋತ್ಸಾಹ ನೀಡುತ್ತಾ ಜನಾಂಗ ಗಲಭೆಯ ಸ್ಥಿತಿ ಸೃಷ್ಟಿಸುತ್ತಿದೆ ಎಂದು ಅವರು ಟೀಕಿಸಿದರು.

ಗಣಮುಕ್ತಿ ಪರಿಷದ್‌ನ ಪ್ರಧಾನ ಕಾರ್ಯದರ್ಶಿ ಅಘೋರ್ ದೇಬ್ ಬರ್ಮಾ 13 ಬೇಡಿಕೆಗಳನ್ನು ವಿವರಿಸಿದರು. ದಿನೇಶ್ ಬರ್ಮಾ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕೇರಳ ನೌಕರರಿಂದ "ಕೋಮುವಾದ-ವಿರೋಧಿ" ದಿನ

ಕೇರಳದ ರಾಜ್ಯ ಸರಕಾರಿ ನೌಕರರು ಹಾಗೂ ಅಧ್ಯಾಪಕರು ಜನವರಿ 7ರಂದು ರಾಜ್ಯಾದ್ಯಂತ "ಕೋಮುವಾದ--ವಿರೋಧಿ" ದಿನ ಆಚರಿಸಿದರು. ಕೆಲಸದ ವೇಳೆಯಲ್ಲಿ ಬ್ಯಾಡ್ಜ್ ಧರಿಸಿ, ಸಂತೆ ತಾಲೂಕು, ಜಿಲ್ಲಾ ಕೇಂದ್ರಗಳಲ್ಲಿ ಮತ ಪ್ರದರ್ಶನ ಸಾರ್ವಜನಿಕ ಸಭೆ ನಡೆಸಿ ಇದನ್ನು ಆಚರಿಸಿದರು.

"ಕೋಮುವಾದ ದೇಶಕ್ಕೊಂದು ಅಪಾಯ", "ಕೋಮುವಾದದ ವಿರುದ್ಧ ರ್‍ಯಾಲಿ" ಎಂಬ ಘೋಷಣೆಗಳು ಈ ಬ್ಯಾಡ್ಜುಗಳಲ್ಲಿದ್ದವು

ವಿವಿಧ ರಾಜ್ಯ ಸರಕಾರಿ ನೌಕರರ ಸಂಘಟನೆಗಳ ಐಕ್ಯವೇದಿಕೆಯಾದ ಆಕ್ಷನ್ ಕೌನ್ಸಿಲ್ ಈ ದಿನಾಚರಣೆಗೆ ಕರೆ ನೀಡಿತ್ತು. ಕಾಂಗ್ರೆ ಪರವಾದ ಸಂಘಟನೆಗಳು ಬಿಟ್ಟು ಉಳಿದೆಲ್ಲಾ ಸಂಘಟನೆಗಳು ಈ ವೇದಿಕೆಯಲ್ಲಿವೆ.

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟಕ್ಕೆ ಸೇರಿದ ರಾಜ್ಯ ಸರಕಾರಿ ನೌಕರರ ಹಾಗೂ ಅಲ್ಪಸಂಖ್ಯಾತರ ಒಕ್ಕೂಟದ ಮುತುವರ್ಜಿಯಿಂದ ಕಾರ್ಯಕ್ರಮ ಸಂಘಟಿಸಲ್ಪಟ್ಟಿತ್ತು. ಕೇರಳ ಗೆಜೆಟೆಡ್ ಅಧಿಕಾರಿಗಳ ಸಂಘವೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿತು.

ಕಾನ್‌ಪುರ: ಆಡಳಿತ ಯಂತ್ರದ ವಿರುದ್ಧ ಅಲ್ಪ ಸಂಖ್ಯಾತರ ಆಕ್ರೋಶ



ಹಿಂದಿನ ಸಂಚಿಕೆಗಳಲ್ಲಿ ನೀವು ಭೋಪಾಲ, ಮುಂಬೈ ನಗರಗಳಲ್ಲಿ ಹರಡಿದ ಕೋಮು ವಿಷದ ಭಯಾನಕ ಚಿತ್ರ ನೋಡಿರುವಿರಿ. ಇದು ಉತ್ತರಪ್ರದೇಶದ ಪ್ರಮುಖ ಕೈಗಾರಿಕಾ ನಗರ ಕಾನಪುರದ ಚಿತ್ರ. ಪೋಲೀಸರು, ಸರಕಾರೀ ಅಧಿಕಾರಿಗಳೇ ಸ್ವತಃ ಅರುಣ್ ಶೌರಿಯವಂತಹ ಪ್ರಖ್ಯಾತ ಪತ್ರಕರ್ತರಂತೆ 'ಕರಸೇವಕ'ರಾಗಿ ವರ್ತಿಸಿದುದರ ಪರಿಣಾಮ.

'ನನ್ನ ತಂದೆ, ತಾಯಿ, ಅಕ್ಕ ಅಣ್ಣಾ ಎಲ್ಲರನ್ನು ಬೆಂಕಿಯಲ್ಲಿ ಸುಟ್ಟರು. ಈ ಹುಡುಗಿ ಹೆದರಿ ತಪ್ಪಿಸಿಕೊಂಡು ಎಲ್ಲೋ ಅಡಗಿಕೊಂಡದ್ದರಿಂದ ಉಳಿದಳು'-ಭಯದಿಂದ ತತ್ತರಿಸುತ್ತಿದ್ದ ಮೂರು ವರ್ಷದ ಹೆಣ್ಣು ಮಗವನ್ನು ತೊಡೆಯಲ್ಲಿ ಮಲಗಿಸಿಕೊಂಡಿದ್ದ ಒಬ್ಬ ವ್ಯಕ್ತಿಯ ಅಳಲು.

"ನನ್ನ ಕಣ್ಣೆದುರೇ ನನ್ನ ಅಪ್ಪನನ್ನು ಜೀವಂತ ಸುಟ್ಟರಣ್ಣಾ" ಎನ್ನುತ್ತಾ 20 ವರ್ಷದ ಬಾಲಕ ಗೋಳೆಂದು ದುಃಖ ತಾಳಲಾರದೆ ಅತ್ತೇ ಬಿಟ್ಟ.

ಇದು ಕಾನಪುರದ ಒಂದು ಪರಿಹಾರ ಶಿಬಿರ "ಗ್ರೀನ್‌ಕ್ಯಾಂಪ್"ಗೆ ಸಿಪಿಐ(ಎಂ) ಎಂಪಿಗಳಾದ ಬಾಸುದೇವ ಆಚಾರ್ಯ ಹಾಗೂ ಸರಳಾ ಮಹೇಶ್ವರಿ ಭೇಟಿ ನೀಡಿದಾಗ ಶಿಬಿರದಲ್ಲಿ ನಿರಾಶ್ರಿತರು ಹೇಳಿದ ಹಲವಾರು ಕರುಣಾಜನಕ ಕಥೆಗಳಲ್ಲಿ ಎರಡಷ್ಟೇ.

ಸುಮಾರು 900 ನಿರಾಶ್ರಿತರು ಈ ಕ್ಯಾಂಪಿನಲ್ಲಿ ಇದ್ದಾರೆ. ಪ್ರತಿಯೊಬ್ಬರೂ ಹೇಳುವ ಕಥೆಯ ಸಾರಾಂಶವೊಂದೇ - ಪೋಲೀಸರೇ ದಂಗೆಕೋರರೊಂದಿಗೆ ಸೇರಿಕೊಂಡಿದ್ದಾರು ಜಿಲ್ಲಾಡಳಿತ ನಿಷ್ಕ್ರಿಯವಾಗಿರದಿದ್ದರೆ ಇಷ್ಟೊಂದ ಅನಾಹುತ ನಡೆಯುತ್ತಿರಲಿಲ್ಲ. ಅಪರಾಧಿಗೂ ಇನ್ನೊಂದು ಕೋಮಿನ ಬಗ್ಗೆ ಎಳ್ಳಷ್ಟು ದ್ವೇಷವಿಲ್ಲದ್ದು ಆಶ್ಚರ್ಯಂಟು ಮಾಡುವಂತದ್ದು. ಏಕೆಂದರೆ ಇಂತಹ ಸಂದರ್ಭಗಳಲ್ಲಿ ಕೋಮು ದ್ವೇಷವೇ ಹತ್ತಿ ಉರಿಯುತ್ತಿರುತ್ತದೆ. ಕೋಮು ದಂಗೆ ನಡೆಸುವವರು ಅದೇ ಉದ್ದೇಶದಿಂದಲೇ ಇದನ್ನು ನಡೆಸಿರುತ್ತಾರೆ. ಆದರೆ ಬಿಜೆಪಿಯಿಂದಾಗಿ ಕೋಮುಗ್ರಸ್ತವಾಗಿರುವ ಆಡಳಿತದ ಬಗ್ಗೆ ಜನಗಳ ಆಕ್ರೋಶ ಸ್ಪಷ್ಟವಾಗಿತ್ತು. ಡಿಸೆಂಬರ್ 19ರವರೆಗೂ ಈ ಶಿಬಿರಕ್ಕೆ ಸರಕಾರದಿಂದ ಏನೂ ಪರಿಹಾರ ಸಾಮಗ್ರಿ ದೊರೆತಿರಲಿಲ್ಲ. ಸಿಪಿಐ(ಎಂ) ತಂಡ ಅಲ್ಲಿಗೆ ಹೋದ ಮೇಲಷ್ಟೇ ಬಂತು. ಸಿಟ್ಟಿಗೆದ್ದ ಜನ ಅವನ್ನು ಸ್ವೀಕರಿಸಲು ನಿರಾಕರಿಸಿದರು. ಬೇರೆಯವರು ಮಧ್ಯಪ್ರವೇಶಿಸಿ ಸಮಾಧಾನ ಮಾಡಿದ ಮೇಲೆಯೇ ಅವರು ಈ ಪರಿಹಾರ ಸಾಮಗ್ರಿಗಳನ್ನು ಪಡೆಯಲು ಒಪ್ಪಿದರು. ಆಡಳಿತದ ಬಗ್ಗೆ ಅವರ ಆಕ್ರೋಶ ಅಷ್ಟು ತೀವ್ರವಾಗಿತ್ತು.

ಈ ಕ್ಯಾಂಪಿನಲ್ಲಿ ಪ್ರಾದೇಶಿಕ ಸಶಸ್ತ್ರ ಪಡೆ ಪಿಎಸಿ ಪಡೆಗಳಿಂದ ಕೈ ಕಾಲು ಮುರಿದುಕೊಂಡವರ ಸಂಖ್ಯೆಯೇ ಜಾಸ್ತಿಯಾಗಿತ್ತು. ಇವರೇ ದಂಗೆಕೋರರು ಎಂದು ಜನ ಗುರುತಿಸುವಷ್ಟು ಕ್ರೂರವಾಗಿ ಅವರು ನಡೆದುಕೊಂಡರು. ಕಾನಪುರದ ಜಿಲ್ಲಾ ಮ್ಯಾಜಿಸ್ಟ್ರೇಟ್ ಹಾಗೂ ಪೋಲೀಸ್ ಸೂಪರಿಂಟೆಂಡೆಂಟ್‌ರನ್ನು ವರ್ಗ ಮಾಡಿದ ಮೇಲೆಯೇ ಇಲ್ಲಿ ದಂಗೆಗಳು ನಿಂತದ್ದು. ಈ ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಮ್ ಶರಣ್ ಶರ್ಮಾ ಅಯೋಧ್ಯೆಯಲ್ಲಿ 1989ರಲ್ಲಿ 'ಕರಸೇವಕರು' ಗೂಂಡಾಗಿರಿಗಿಳಿದಾಗ ಏನೂ ಕ್ರಮ ಕೈಗೊಳ್ಳಲು ನಿರಾಕರಿಸಿದ ವ್ಯಕ್ತಿ. ಜಿಲ್ಲಾ ಆಡಳಿತ ಮತ್ತು ಪೋಲೀಸರು ದಂಗೆಕೋರರೊಂದಿಗೆ ಶಾಮೀಲಾಗಿರದಿದ್ದರೆ ಕಾನಪುರವೂ ಈ ಬಾರಿ ಪಕ್ಕದ ಅಲೀಘಡದಂತೆ ಕೋಮು ಶಾಂತಿಯ ಕೇಂದ್ರವಾಗಿರುತ್ತಿತ್ತು ಎನ್ನುತ್ತಾರೆ ಜನ.

150ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡ ಈ ಬಾರಿಯ ದಂಗೆಗಳ ವಿಧಾನ ನೋಡಿದರೆ ಇದು ಮೊದಲೇ ಯೋಜಿತಗೊಂಡಿದ್ದ ಗಲಭೆಗಳೆಂದು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಕೋಮು ಗಲಭೆಗಳು ನಡೆಯುವ ಪ್ರದೇಶಗಳು ಈ ಬಾರಿ ಶಾಂತವಾಗಿದ್ದವು ಏಕೆಂದರೆ ಜನ ಅಲ್ಲಿ ಜಾಗರೂಕರಾಗಿದ್ದರು. ಹಿಂದೆಂದೂ ಗಲಭೆ ನಡೆಯದ ಫೈತ್‌ಫುಲ್‌ಗಂಜ್‌ನಲ್ಲಿ ಈ ಬಾರಿ ವಿಪರೀತ ಸಾವು- ನೋವುಗಳು ಸಂಭವಿಸಿದವು. ಆರಿಸಿ-ಆರಿಸಿ ಮನೆಗಳನ್ನು, ಜನಗಳನ್ನು ಸುಡಲಾಯಿತು.

ಸಮಾಧಾನದ ವಿಷಯವೆಂದರೆ ಈ ಬಾರಿ ಹಿಂದಿನಂತೆ ಸ್ಥಳೀಯ ಪತ್ರಿಕೆಗಳು ಬೇಜವಾಬ್ದಾರಿಯಿಂದ ವರ್ತಿಸಲಿಲ್ಲ.

ಇಸ್ರೇಲ್‌ನ ಕ್ರೂರತನವನ್ನು ಬಚ್ಚಿಡಲು ಇರಾಕಿನ ಮೇಲೆ ಧಾಳಿ

ಅಮೇರಿಕ ಮತ್ತು ಎರಡು ವಾರಗಳಲ್ಲಿ ಅಧಿಕಾರ ಬಿಡಲಿರುವ ಅಧ್ಯಕ್ಷ ಬುಶ್ ಕೃತಕವಾಗಿ ಇರಾಕಿ ಕ್ಷಿಪಣಿ ಬಿಕ್ಕಟ್ಟು ಸೃಷ್ಟಿಸಿದ ದಕ್ಷಿಣ ಇರಾಕ್‌ನಲ್ಲಿ ಯುದ್ಧ ವಿಮಾನಗಳ ಹಾರಾಟದ ಮೇಲೆ ಅಮೇರಿಕ, ಬ್ರಿಟನ್, ಫ್ರಾನ್ಸ್, ರಶ್ಯಾ ಪ್ರತಿಬಂಧ ಹೇರಿವೆ. ಇದಕ್ಕೆ ಯಾವುದೇ ವಿಶ್ವ ಸಂಸ್ಥೆ ಭದ್ರತಾ ಸಮಿತಿಯ ಅನುಮತಿ ಇಲ್ಲ. ಇದು ಅಂತರ್ರಾಷ್ಟ್ರೀಯ ಕಾನೂನಿಗೆ ವಿರುದ್ಧ, ಇರಾಕ್‌ನ ಸಾರ್ವಭೌಮತೆಯನ್ನು ಪ್ರಶ್ನಿಸಿದಂತೆ ಎಂದು ಇರಾಕ್ ಪ್ರತಿಭಟಿಸುತ್ತಾ ಬಂದಿದೆ. ಆದರೆ ಈ ದೇಶಗಳು ಈಗ ಒಂದು ಹೆಜ್ಜೆ ಮುಂದೆ ಹೋಗಿ ಈಗ, ಇರಾಕ್ ಈ ಪ್ರದೇಶದಲ್ಲಿ ಯುದ್ಧ ಕ್ಷಿಪಣಿಗಳನ್ನು ಇಡಬಾರದು ಎಂದು ಒತ್ತಾಯಿಸಿವೆ. ಅಲ್ಲದೆ 48 ಗಂಟೆಗಳ ಅವಧಿ ಒಳಗೆ ಇರಾಕ್ 'ಆಜ್ಞೆ' ಪಾಲಿಸದಿದ್ದರೆ ಯುದ್ಧ ಎದುರಿಸದೇಕಾದೀತು ಎಂದು ದೆದರಿಕೆ ಹಾಕಿವೆ. ಇರಾಕ್ ಇದನ್ನು ಮೊದಲಿಗೆ ತೀವ್ರವಾಗಿ ಪ್ರತಿಭಟಿಸಿದರೂ ಕೊನೆಗಳಿಗೆಯಲ್ಲಿ ಪಾಲಿಸಿದೆ. ಈ ಕ್ಷಿಪಣಿಗಳು ಕಳೆದ ವರ್ಷದಿಂದ ಆ ಪ್ರದೇಶದಲ್ಲಿದ್ದರೂ ಅಮೇರಿಕ ಮತ್ತು ಅದರ ಮಿತ್ರ ದೇಶಗಳ ಕೂಟದ ವಿಮಾನಗಳ ವಿರುದ್ಧ ಕಾರ್ಯಾಚರಣೆಗೆ ಇತ್ತೀಚೆಗೆ ಸ್ಥಾಪಿಸಲಾಗಿದೆ ಎಂಬ ಸುಳ್ಳುವಾದ ಹೂಡಿವೆ. ಅಮೇರಿಕದ ಯುದ್ಧ ವಿಮಾನಗಳು ಇರಾಕ್‌ನ ಮಿಲಿಟರಿ ಚಟುವಟಿಕೆಗಳ ಮೇಲೆ ಕಣ್ಣಿಡಲು ದಕ್ಷಿಣ ಇರಾಕ್‌ನಲ್ಲಿ ಹಾರಾಡ ನಡೆಸುತ್ತಿರುತ್ತವೆ. ಇದೇ ಇರಾಕ್‌ನ ಸಾರ್ವಭೌಮತೆ ಉಲ್ಲಂಘಿಸಿದಂತೆ.

ಈ ಮೇಲಿನ ವಾಸ್ತವವನ್ನು ಗಮನಿಸಿದರೆ, ಇರಾಕಿ ಕ್ಷಿಪಣಿ ಬಿಕ್ಕಟ್ಟು ಕೃತಕವಾಗಿ ಸೃಷ್ಟಿಸಿದ್ದು ಎಂಬುದು ಸ್ಪಷ್ಟ. ಇದಕ್ಕೆ ಎರಡು ಕಾರಣಗಳಿವೆ ಎನ್ನಲಾಗಿದೆ. ಸದ್ದಾಂರನ್ನು ಇರಾಕ್ ಯುದ್ಧ ಸೋತ ಕೆಲವೇ ದಿನಗಳಲ್ಲಿ ಗದ್ದುಗೆಯಿಂದ ಇಳಿಸುತ್ತೇವೆ ಎಂದು ಘೋಷಿಸಿದ್ದ ಅಧ್ಯಕ್ಷ ಬುಶ್ ತಾನೇ ಗದ್ದುಗೆಯಿಂದ ಇಳಿಯುದೇಕಾಗಿ ಬಂದಿದೆ. ಕೃತಕ ಬಿಕ್ಕಟ್ಟಿನ ನೆವ ಸೃಷ್ಟಿಸಿ ಇರಾಕ್ ಮೇಲೆ ಯುದ್ಧ ಹೂಡುವುದು ಅಥವಾ ಸದ್ದಾಂಗೆ ರಾಜಕೀಯ ಅವಮಾನಗೊಳಿಸುವುದು ಒಂದು ಕಾರಣ.

415 ಪ್ಯಾಲೇಸ್ತೇನ್‌ರ ಗಡಿಪಾರು ಖಂಡಿಸಿ, ಅವರನ್ನು ವಾಪಸು ತೆಗೆದುಕೊಳ್ಳಬೇಕೆಂಬ ವಿಶ್ವಸಂಸ್ಥೆ ಭದ್ರತಾ ಸಮಿತಿ ನಿರ್ಣಯವನ್ನು, ಇಸ್ರೇಲ್ ಧಿಕ್ಕರಿಸಿ ಮುಂದುವರೆಯುತ್ತಿರುವ ಸನ್ನಿವೇಶದಿಂದ ಜಗತ್ತಿನ ಗಮನ ಬೇರೆಡೆ ಸೆಳೆಯುವುದು ಅಮೇರಿಕಾದ ಇನ್ನೊಂದು ಉದ್ದೇಶ ಎಂದು ಹೇಳಲಾಗಿದೆ. ವಿಶ್ವ ಸಂಸ್ಥೆ ಮಹಾ ಕಾರ್ಯದರ್ಶಿ ಈ ಬಿಕ್ಕಟಿನ ಬಗ್ಗೆ ಪಶ್ಚಿಮ ಏಶ್ಯಾಕ್ಕೆ ಭೇಟಿ ನೀಡಿ ವರದಿ ಸಲ್ಲಿಸಲಿದ್ದು ಅವರ ವರದಿ ಆಧಾರದ ಮೇಲೆ ಇಸ್ರೇಲ್ ವಿಶ್ವಸಂಸ್ಥೆ ನಿರ್ಣಯ ಉಲ್ಲಂಘಿಸಿದ್ದಕ್ಕೆ ಆರ್ಥಿಕ ದಿಗ್ಬಂಧನ ಹೇರುವ ಸಾಧ್ಯತೆ ಇದೆ. ವಿಶ್ವಸಂಸ್ಥೆಯ ನಿರ್ಣಯದ ಹೆಸರಲ್ಲಿ ಇರಾಕ್ ಮೇಲೆ ಮನಬಂದ ರೀತಿಯ ದಿಗ್ಬಂಧನ ಹೇರಿದ್ದ ಅಮೇರಿಕಾವನ್ನು ಇದು ಇಕ್ಕಟ್ಟಿಗೆ ಸಿಕ್ಕಿಸಿದೆ.

ಬಂಗ್ಲಾದೇಶಕ್ಕೆ ಹೋಗಲಾಗದ ಪ್ರಧಾನಿ

ಅಯೋಧ್ಯೆಯ ದುರಂತಕಾರಿ ಘಟನೆಗಳು ಆಗಲೇ ಅಂತರ್ರಾಷ್ಟ್ರೀಯವಾಗಿ ಭಾರತವನ್ನು ಪೇಚಿಗೆ ಸಿಕ್ಕಿಸಿದೆ. ಇತ್ತೀಚೆಗೆ ಇಂತಹ ಘಟನೆ ಬಾಂಗ್ಲಾ ದೇಶದ ರಾಜಧಾನಿ ಢಾಕಾದಲ್ಲಿ ನಡೆಯುದೇಕಿದ್ದ ಸಾರ್ಕ್(SAARC - ದಕ್ಷಿಣ ಏಶ್ಯಾದ ದೇಶಗಳ ಪ್ರಾದೇಶಿಕ ಸಹಕಾರ ಸಂಘಟನೆ) ಶೃಂಗಸಭೆ ಮುಂದೂಡದೇಕಾಗಿ ಬಂದಿದೆ. ಡಿಸೆಂಬರ್‌ನಲ್ಲಿ ನಡೆಯುದೇಕಾಗಿದ್ದ ಈ ಶೃಂಗಸಭೆ, ಅಯೋಧ್ಯಾ ಘಟನೆಗಳಿಂದಾಗಿ ಒಂದು ತಿಂಗಳ ಕಾಲ ಮುಂದೂಡಲ್ಪಟ್ಟಿತ್ತು.

ಕಳೆದ ವಾರ ಬಾಂಗ್ಲಾ ದೇಶದ ಮುಸ್ಲಿಂ ಮೂಲಭೂತವಾದಿ ಸಂಘಟನೆ ಅಯೋಧ್ಯೆಗೆ 20 ಸಾವಿರ ಜನರ ಜಾಥಾ ಹೂಡುವುದಾಗಿ ಘೋಷಿಸಿತ್ತು. ಧ್ವಂಸಗೊಳಿಸಲಾದ ಬಾಬರಿ ಮಸೀದಿಯ ಪುನರ್ನಿರ್ಮಾಣ ಇದರ ಉದ್ದೇಶವೆಂದೂ ಘೋಷಿಸಲಾಗಿತ್ತು. ಆದರೆ ಬಾಂಗ್ಲಾ ದೇಶದ ಸರಕಾರ ಬಲಪ್ರಯೋಗ ಮಾಡಿ ಈ ಜಾಥಾವನ್ನು ಬಾಂಗ್ಲಾ ದೇಶದ ಗಡಿ ಪಟ್ಟಣವೊಂದರಲ್ಲಿ ನಿಲ್ಲಿಸಿತ್ತು. ಇದೇ ಸಂಘಟನೆ ಬಾಬರಿ ಮಸೀದಿ ಪುನರ್ನಿರ್ಮಾಣದ ಕ್ರಮ ಘೋಷಿಸುವವರೆಗೆ ಭಾರತದ ಪ್ರಧಾನಿ ನರಸಿಂಹರಾಯರನ್ನು ಬಾಂಗ್ಲಾ ದೇಶದ ನೆಲದ ಮೇಲೆ ಕಾಲಿಡಲು ಬಿಡುವುದಿಲ್ಲ ಎಂದು ದೆದರಿಕೆ ಹಾಕಿದೆ. ಈ ಹಿನ್ನೆಲೆಯಲ್ಲಿ ಭಾರತದ ಪ್ರಧಾನಿ ರಕ್ಷಣೆ ಬಗ್ಗೆ ತೀವ್ರ ಆತಂಕವಿತ್ತು. ಈ ಹಿನ್ನೆಲೆಯಲ್ಲಿ ನರಸಿಂಹರಾವ್ ಸಾರ್ಕ್ ಶೃಂಗಸಭೆಯಲ್ಲಿ ಭಾಗವಹಿಸುವುದಿಲ್ಲ ವೆಂದು ತಿಳಿಸಿದ್ದರು. ಆದ್ದರಿಂದ ಶೃಂಗಸಭೆ ಮುಂದೂಡಲಿದೆ. ಹಿಗೆದ. ಶೃಂಗಸಭೆಯಲ್ಲಿ ಪಾಕಿಸ್ತಾನ, ಬಾಂಗ್ಲಾ ದೇಶಗಳು ಅಯೋಧ್ಯೆ ಘಟನೆಗಳ ಬಗ್ಗೆ ಪ್ರಸ್ತಾಪ ಮಾಡುವ ಸಾಧ್ಯತೆ ಇತ್ತು.

ವಿಶ್ವ ಶಾಂತಿಯೇ ಅಮೇರಿಕಾಕ್ಕೆ ಶರಣಾಗತಿಯೇ

ಮಾರಕ ಅಣ್ವಸ್ತ್ರಗಳ ಕಡಿತದ ಒಪ್ಪಂದ ಸ್ಟಾರ್ಟ್ - II(START) ಕ್ಕೆ ಅಮೇರಿಕಾದ ಅಧ್ಯಕ್ಷ ಬುಶ್ ಮತ್ತು ರಶ್ಯದ ಅಧ್ಯಕ್ಷ ಯೆಲ್ಟ್‌ಸಿನ್ ಇತ್ತೀಚೆಗೆ ಸಹಿ ಹಾಕಿದರು. ಈ ಒಪ್ಪಂದದಂತೆ ಮುಂದಿನ ಹತ್ತು ವರ್ಷಗಳಲ್ಲಿ ಮಾರಕ ಅಣ್ವಸ್ತ್ರಗಳಲ್ಲಿ ಮೂರನೇ ಎರಡು ಭಾಗದಷ್ಟು ಕಡಿತಗೊಳಿಸಲಾಗುತ್ತದೆ. ಈ ಕಡಿತದ ನಂತರ ಈ ಎರಡು ದೇಶಗಳೊಡನೆ ಇರುವ ಮಾರಕ ಅಣ್ವಸ್ತ್ರಗಳ ಸಂಖ್ಯೆ 60ರ ದಶಕದ ಕೊನೆಯಲ್ಲಿ ಇದ್ದ ಮಟ್ಟಕ್ಕೆ ಇಳಿಯುತ್ತದೆ ಎನ್ನಲಾಗುತ್ತಿದೆ. ಈ ಕಡಿತವನ್ನು ಎರಡು ಕಂತುಗಳಲ್ಲಿ ಜಾರಿಗೆ ತರಲಾಗುವುದು.

ಸ್ಟಾರ್ಟ್ - II ಒಪ್ಪಂದ ಜಾರಿಗೆ ಬರಲು ಇನ್ನೂ ಹಲವು ಅವಶ್ಯಕತೆ ಪೂರೈಸಬೇಕಾಗಿದೆ. ಈಗಾಗಲೇ ಮಾಡಿರುವ ಸ್ಟಾರ್ಟ್ - I ಒಪ್ಪಂದವನ್ನು ಎರಡು ದೇಶಗಳ ಪಾರ್ಲಿಮೆಂಟುಗಳು ಅಂಗೀಕರಿಸಲಿಲ್ಲ. ಸೋವಿಯತ್ ಒಕ್ಕೂಟದ ವಿಘಟನೆ ನಂತರ ರಶ್ಯ ಅಲ್ಲದೆ, ತಮ್ಮ ನೆಲದ ಮೇಲೆ ಅಣ್ವಸ್ತ್ರಗಳಿರುವ ಉಕ್ರೇನ್, ಬೈಲೋರಸ್‌ಗಳೂ ಈ ಒಪ್ಪಂದಕ್ಕೆ ಒಪ್ಪಿಗೆ ನೀಡಬೇಕು. ಇದು ಈ ದೇಶಗಳಲ್ಲಿರುವ ಸ್ಥಿತಿಯಲ್ಲಿ ಅಷ್ಟು ಸುಲಭವಲ್ಲ.

ಮಾಸ್ಕೋದಲ್ಲಿ ನಡೆದ ಸಮಾರಂಭವೊಂದರಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕುತ್ತಿದ್ದಂತೆ, ಹೊರಗೆ 500ಕ್ಕೂ ಹೆಚ್ಚು ಎಡಪಂಥೀಯ ಪ್ರದರ್ಶನಕಾರರು ಈ ಒಪ್ಪಂದ ಅಮೇರಿಕಾಕ್ಕೆ ಹೆಚ್ಚು ಪ್ರಯೋಜನಕಾರಿ ಎಂದು ಪ್ರತಿಭಟಿಸಿದ್ದಾರೆ. 'ಯೆಲ್ಟ್‌ಸಿನ್ ರಶ್ಯಾವನ್ನು ಅಮೇರಿಕಕ್ಕೆ ಮಾರಬೇಡ' ಎಂದು ಹೇಳುವ ಫಲಕಗಳನ್ನು ಪ್ರತಿಭಟನಕಾರರು ಹಿಡಿದಿದ್ದರು.

ಸ್ಟಾರ್ಟ್ - II ಒಪ್ಪಂದ ಇಂದಿನ ಅಂತರಾಷ್ಟ್ರೀಯ ಸನ್ನಿವೇಶದಲ್ಲಿ ವಿಶ್ವಶಾಂತಿಯತ್ತ ದೊಡ್ಡ ಹೆಜ್ಜೆ ಎಂದೆಲ್ಲಾ ಪತ್ರಿಕೆಗಳು ಹಾಡಿ ಹೊಗಳಿದ್ದನ್ನು ಒಪ್ಪುವುದು ಕಷ್ಟ. ಈಗಲೂ, ಕಡಿತವಾದ ಮೇಲೂ ಈ ಎರಡೂ ದೇಶಗಳು ಮೂರನೇ ಜಗತ್ತಿನ ದೇಶಗಳನ್ನು ದೆದರಿಸಲು, ಅಧಿಪತ್ಯ ನಡೆಸಲು ಸಾಕಷ್ಟು ಮಾರಕಾಸ್ತ್ರಗಳನ್ನು ಹೊಂದಿರುತ್ತಾರೆ.

ರಶ್ಯಾದಲ್ಲಿ ಬಂಡವಾಳಶಾಹಿ ಸ್ಥಾಪನೆಯ ಪ್ರಯತ್ನದ ಹಿನ್ನೆಲೆಯಲ್ಲಿ ಈ ಎರಡೂ ದೇಶಗಳ ನಡುವಣ ಮಿಲಿಟರಿ ಘರ್ಷಣೆಗಿಂತ, ಈ ಎರಡು ದೇಶಗಳು ಒಂದಾಗಿ ಇಡೀ ಜಗತ್ತಿನ, ವಿಶೇಷವಾಗಿ ಮೂರನೆ ಜಗತ್ತಿನ ದೇಶಗಳಜನತೆ ಮೇಲೆ ದಬ್ಬಾಳಿಕೆ ನಡೆಸುವ ಸಂಭವ ಹೆಚ್ಚು.

ಸೋಮಾಲಿಯಾದ ಜನರ ಸಿಟ್ಟು

ಸೊಮಾಲಿಯಾಕ್ಕೆ ಭೇಟಿ ನೀಡಿದ್ದ ವಿಶ್ವಸಂಸ್ಥೆ ಮಹಾ ಕಾರ್ಯದರ್ಶಿ ಬೊಟ್ರೊಸ್ ಘಾಲಿ, ಅಲ್ಲಿ ತೀವ್ರ ಪ್ರದರ್ಶನ ಎದುರಿಸದೇಕಾಯಿತು. ಸೊಮಾಲಿಯಾದ ರಾಜಧಾನಿ ಮೊಗದಿಶುವಿನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯ ಎದುರು ಸಾವಿರಕ್ಕೂ ಹೆಚ್ಚು ಪ್ರದರ್ಶನಕಾರರು ಘಾಲಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಅಲ್ಲದೆ ವಿಶ್ವಸಂಸ್ಥೆ ಕಚೇರಿಯೊಳಗೆ ನುಗ್ಗಿ ವಿಶ್ವಸಂಸ್ಥೆ ಬಾವುಟ ಇಳಿಸಿ, ಸೊಮಾಲಿಯಾ ಬಾವುಟ ಏರಿಸಿದರು ಎಂದು ವರದಿಯಾಗಿದೆ.

ವಿಶ್ವಸಂಸ್ಥೆ ಸೊಮಾಲಿಯಾದ ಘರ್ಷಣೆಯಲ್ಲಿ ತೊಡಗಿರುವ ಸುಮಾರು 14 ಬಣಗಳನ್ನು ಸೇರಿಸಿ ಶಾಂತಿ ಮಾತುಕತೆ ನಡೆಸಲು ಪ್ರಯತ್ನಿಸುತ್ತಿದೆ.

ಡಿವೈಎಫ್‌ಐ ಟ್ರೋಫಿ - 92 ಮಹಿಳೆಯರ ಥ್ರೋಬಾಲ್ ಸ್ಪರ್ಧೆ

ನವಂಬರ್ 15ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್‌ಐ) 13ನೇ ಸ್ಥಾಪನಾ ದಿನಾಚರಣೆಯ ಅಂಗವಾಗಿ ಜಿಲ್ಲಾ ಮಟ್ಟದ ಮಹಿಳೆಯರ ಥ್ರೋಬಾಲ್ ಪಂದ್ಯಾಟವು ಕುಲಶೇಖರ ಸಿಲ್ವರ್‌ಗೇಟಿನ ಸಾರ್ವಜನಿಕ ಮೈದಾನದಲ್ಲಿ ನಡೆಯಿತು.

ಡಿವೈಎಫ್‌ಐ ಟ್ರೋಫಿ - 92 ಪಂದ್ಯಾಟವನ್ನು ಪದವು ಪ್ರದೇಶದ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷರು ಸಿ.ನಾರಾಯಣ ಅವರು ಉದ್ಘಾಟಿಸಿದರು. ಪದವು ಪ್ರದೇಶದ ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಬಾಬು ದೇವಾಡಿಗ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಜೀವನ್ ವಾಸ್, ಸ್ಥಳೀಯ ಯುವ ಉದ್ಯಮಿ ಆಗಮಿಸಿದ್ದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಡಿವೈಎಫ್‌ಐ ನಗರ ಸಮಿತಿ ಉಪಾಧ್ಯಕ್ಷರಾದ ನೆಲ್ಸನ್ ರೋಜ್ ಹಾಗೂ ನಾರಾಯಣ ಶೆಟ್ಟಿ, ಗ್ರಾಮ ಕರಣಿಕರು ಕುಲಶೇಖರ ಉಪಸ್ಥಿತರಿದ್ದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಸಿ.ನಾರಾಯಣ ಅವರು ವಹಿಸಿದ್ದರು. ಬಹುಮಾನ ವಿತರಣೆಯನ್ನು ಸಂತ ಅಲೋಸಿಯಸ್ ಕಾಲೇಜಿನ ಕನ್ನಡ ಹಿಂದಿ ಉಪನ್ಯಾಸಕಿ ಪೇದಾವತಿ ಅವರು ನಡೆಸಿದರು. ಘಟಕದ ಉಪಾಧ್ಯಕ್ಷ ದೇಬಿ ಬಂಗೇರ ಮತ್ತು ಸದಸ್ಯರಾದ ಬಾಲಕೃಷ್ಣ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಲೇಡಿಸ್ ಫ್ರೆಂಡ್ಸ್, ಪಡುಬಿದ್ರಿ ತಂಡವು ಡಿವೈಎಫ್‌ಐ ಟ್ರೋಫಿ-92 ಹಾಗೂ ನಗದು ಬಹುಮಾನವನ್ನು ಗೆದ್ದುಕೊಂಡಿತು. ಬೈಕಂಪಾಡಿ ಯುವತಿ ಮಂಡಲಿಯ ದ್ವಿತೀಯ ಮತ್ತು ಉತ್ತಮ ಶಿಸ್ತಿನ ತಂಡ ಪ್ರಶಸ್ತಿಯನ್ನು ಯೂತ್ ಅಸೋಸಿಯೇಸನ್ ಕಮ್ಮಾರ್ ತಂಡ ಪಡೆಯಿತು. ಉತ್ತಮ ಅಲ್‌ರೌಂಡರ್‌ರಾಗಿ ಲೇಡಿಸ್ ಫ್ರೆಂಡ್ಸ್, ಪಡುಬಿದ್ರಿ ತಂಡ ಕುಮಾರಿ ಹೇಮಲತಾ, ಉತ್ತಮ ಎಸೆತಗಾರ್ತಿ ಬೈಕಂಪಾಡಿಯ ವನಿತಾ ಕುಮಾರಿ.

ಪ್ರಾರಂಭದಲ್ಲಿ ಡಿವೈಎಫ್‌ಐ ಘಟಕದ ಉಪಾಧ್ಯಕ್ಷೆ, ಕುಮಾರಿ ಮಮತಾ ಸ್ವಾಗತಿಸಿ, ಕ್ರೀಡಾ ಕಾರ್ಯದರ್ಶಿ ವಾಸ್ ಜಯಪ್ರಕಾಶ್ ವಂದಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಘಟಕದ ಅಧ್ಯಕ್ಷ ಮುಖೇಶ್‌ರವರು ವಹಿಸಿದ್ದರು.

ಡಿವೈಎಫ್‌ಐ ಸಮ್ಮೇಳನಗಳು ಉಡುಪಿ ತಾಲೂಕು

ಯುವಜನರು ಕೋಮುವಾದಿ ವಿಚ್ಛಿದ್ರಕಾರಿ ಭಾವನೆಗಳಿಗೆ ಬಲಿಯಾಗದೆ ಸ್ಥಳೀಯ ಸಮಸ್ಯೆಗಳ ವಿಚಾರದಲ್ಲಿ ಹಾಗೂ ದೇಶಾದ್ಯಂತ ಇರುವ ನಿರುದ್ಯೋಗ, ಶೈಕ್ಷಣಿಕ ಅವ್ಯವಸ್ಥೆ ಮತ್ತು ಪ್ರತ್ಯೇಕತೆಯ ವಿರುದ್ಧ ಇತರ ಪ್ರಗತಿಪರ ಸಂಘಟನೆಗಳೊಂದಿಗೆ ಸೇರಿ ಹೋರಾಟ ನಡೆಸಲು ಡಿವೈಎಫ್‌ಐ ದ.ಕ. ಜಿಲ್ಲಾ ಅಧ್ಯಕ್ಷ ವಸಂತ ಆಚಾರಿಯವರು ಕರೆ ನೀಡಿದರು. ಜ. 3ರಂದು ಉಡುಪಿಯಲ್ಲಿ ನಡೆದ ಡಿವೈಎಫ್‌ಐ ಉಡುಪಿ ತಾಲೂಕು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಂದಿರ-ಮಸೀದಿಯಂತಹ ವಿಚಾರಗಳನ್ನು ಜನರಲ್ಲಿ ಅನಗತ್ಯವಾಗಿ ಹರಡಿಸಿ ವಿದ್ಯಾರ್ಥಿ-ಯುವ ಜನರನ್ನು ತಮ್ಮ ಸಮಸ್ಯೆಗಳಿಂದ ವಿಮುಖರಾಗುವಂತೆ ಪ್ರೇರೇಪಿಸುತ್ತಿರುವುದನ್ನು ಖಂಡಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕೆ.ಲಕ್ಷ್ಮಣ ಅವರು ಮಾತನಾಡಿ ಪ್ರತಿಯೊಂದು ಸಮಸ್ಯೆಯ ಮೂಲವನ್ನು ತಿಳಿದು ಅದರವಿರುದ್ಧ ಜನಜಾಗೃತಿ ಮೂಡಿಸುವುದು ಹಾಗೂ ವಿಚಾರಶೀಲ ಮನೋಭಾವನ್ನು ಬೆಳೆಸುವುದು ಇಂದಿನ ಅಗತ್ಯ ಎಂದು ಹೇಳಿದರು.

ಇನ್ನೊರ್ವ ಅತಿಥಿ ದೂರವಾಣಿ ನೌಕರರ ಸಂಘದ ಕಾರ್ಯದರ್ಶಿ ದೇಜಪ್ಪನವರು ಮಾತನಾಡಿ ಐಎಂಎಫ್ ವಿಶ್ವಬ್ಯಾಂಕ್‌ಗಳ ಕಠಿಣ ಶರತ್ತುಗಳಿಗೆ ಕೇಂದ್ರ ಸರಕಾರವು ಶರಣಾಗಿರುವುದನ್ನು ಖಂಡಿಸಿ ನಮ್ಮ ದೇಶದಲ್ಲಿ ಸರಕಾರವೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ವಿಡಂಬನಾತ್ಮಕವಾಗಿ ವಿವರಿಸಿದರು.

ಎಸ್‌ಎಫ್‌ಐನ ದ.ಕ. ಜಿಲ್ಲಾ ಜೊತೆ ಕಾರ್ಯದರ್ಶಿ ರಾಮದಾಸ್‌ರವರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿ ಯುವ ಜನರ ಪ್ರಗತಿ ಹೋರಾಟಕ್ಕೆ ವಿದ್ಯಾರ್ಥಿಗಳ ಬೆಂಬಲವನ್ನು ಘೋಷಿಸಿದರು. ಜನವಾದಿ ಮಹಿಳಾ ಸಂಘಟನೆಯ ಉಡುಪಿ ತಾಲೂಕು ಸಮಿತಿಯ ಕೋಶಾಧಿಕಾರಿ ಶ್ರೀಮತಿ ಗೋಪಿಯವರು ಶುಭ ಹಾರೈಸಿದರು.

ಪ್ರಾರಂಭದಲ್ಲಿ ಡಿವೈಎಫ್‌ಐ ತಾಲೂಕು ಸಮಿತಿ ಅಧ್ಯಕ್ಷ ಬಿ.ಪ್ರಶಾಂತ ಭಟ್‌ರವರು ಧ್ವಜಾರೋಹಣ ಮಾಡಿದರು. ತಾಲೂಕು ಸಮಿತಿ ಕಾರ್ಯದರ್ಶಿ ಕೆ. ರತ್ನಾಕರ್‌ರವರು ಸ್ವಾಗತಿಸಿದರು. ಕೆ.ಪ್ರಭಾಕರ್ ನಾಯಕ್‌ರವರು ಅಗಲಿದ ಪ್ರಗತಿಪರ ಸಾಹಿತಿಗಳಿಗೆ ಡಿವೈಎಫ್‌ಐ-ಎಸ್‌ಎಫ್‌ಐ ಸಂಗಾತಿಗಳು ಹಾಗೂ ಇತ್ತೀಚೆಗೆ ಕೋಮುಗಲಭೆಗಳಲ್ಲಿ ಮೃತರಾದ ಮುಗ್ಧ ಜನತೆಗೆ ಶ್ರದ್ಧಾಂಜಲಿ ಮಂಡಿಸಿದರು.

ಕಾರ್ಯದರ್ಶಿ ಕೆ.ರತ್ನಾಕರ್‌ರವರು ಮಂಡಿಸಿದ ವರದಿಯನ್ನು ಚರ್ಚಿಸಿದ ನಂತರ ಅಂಗೀಕರಿಸಲಾಯಿತು. ಕೋಶಾಧಿಕಾರಿ ಪಿ.ವಿಶ್ವನಾಥ್‌ರವರು ಲೆಕ್ಕಪತ್ರ ಮಂಡಿಸಿದರು. ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಡಿವೈಎಫ್‌ಐ ಜಿಲ್ಲಾ ಸಮಿತಿ ಸಹಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿಯವರು ಸಮರ್ಥ ನಾಯಕತ್ವಕ್ಕಾಗಿ ಹಪಹಪಿಸುತ್ತಿರುವ ಯುವ ಜನತೆಯನ್ನು ಸಂಪರ್ಕಿಸಿ ಹಾಗೂ ಕೋಮುವಾದಿ- ವಿಚ್ಛಿದ್ರಕಾರಿ ಪ್ರವೃತ್ತಿಯಲ್ಲಿ ಮುಂದುವರಿಯುತ್ತಿರುವ ಯುವಜನರಿಗೆ ಸರಿಯಾಗಿ ತಿಳುವಳಿಕೆ ನೀಡಿ ಸಮಸ್ಯೆಗಳ ಪರಿಹಾರದಲ್ಲಿ ತೊಡಗಿಸುವ ಕೆಲಸವನ್ನು ಡಿವೈಎಫ್‌ಐ ಕಾರ್ಯಕರ್ತರು ಮಾಡಬೇಕೆಂದು ಒತ್ತಿ ಹೇಳಿದರು.

ಮುಖ್ಯವಾಗಿ ನಿವೇಶನರಹಿತರಿಗೆ ಸರಕಾರ ಮನೆ ನಿವೇಶನಗಳನ್ನು ಮಾಡಿಕೊಡುವಾಗ ಅಲ್ಲಿಯ ಜನರಿಗೆ ಅಗತ್ಯವಾಗಿ ಬೇಕಾದ ಕ್ರೀಡಾ ಚಟುವಟಿಕೆ, ಶಾಲೆ, ಅಂಚೆ ಕಚೇರಿ, ಬ್ಯಾಂಕ್ ಸಾರ್ವಜನಿಕ ಬಾವಿ, ಸಾರ್ವಜನಿಕ ಶೌಚಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ ಇತ್ಯಾದಿಗಳನ್ನು ಸ್ಥಳವನ್ನು ಕಾದಿರಿಸಬೇಕು, ಉದ್ಯೋಗಗಳನ್ನು ಭರ್ತಿ ಮಾಡುವಾಗ ಕೊಂಕಣ ರೈಲ್ವೆಗಾಗಿ ಭೂಮಿ-ಮನೆ ಕಳೆದುಕೊಂಡ ಕುಟುಂಬದವರಿಗೆ ಹಾಗೂ ಸ್ಥಳೀಯ ಜನರಿಗೆ ಉದ್ಯೋಗ ಕೊಡಿಸಬೇಕೆಂದು ಸಮ್ಮೇಳನವು ಸರಕಾರವನ್ನು ಒತ್ತಾಯಪಡಿಸುವ ನಿರ್ಣಯಗಳನ್ನು ಅಂಗೀಕರಿಸಿತು.

ನಂತರ ಮುಂದಿನ ಸಾಲಿಗೆ ಅಧ್ಯಕ್ಷರಾಗಿ ಕೆ.ಪ್ರಭಾಕರ್ ನಾಯಕ್, ಕಾರ್ಯದರ್ಶಿಯಾಗಿ ಪಿ.ವಿಶ್ವನಾಥ್, ಉಪಾಧ್ಯಕ್ಷರಾಗಿ ವಿಜಯ ಅಮೀನ್, ಜಯನಂದ ಶೆಟ್ಟಿಗಾರ್ ಜೊತೆ ಕಾರ್ಯದರ್ಶಿಯಾಗಿ ಕೆ.ರತ್ನಾಕರ್, ಕೋಶಾಧಿಕಾರಿ, ರಮೇಶ್ ಮಂಡನ್ ಮತ್ತು ಸದಸ್ಯರುಗಳಾಗಿ ಕೆ.ಭಾಸ್ಕರ್, ವಿಜಯ ಅಮೀನ್, ರೋನಾಲ್ಡ್ ಡಿಸೋಜ, ಶಂಕರ ಶೆಟ್ಟಿಗಾರ್, ರವಿರಾಜ, ಶೇಖರ ಅಮೀನ್, ನಿತ್ಯಾನಂದ ಶೆಟ್ಟಿ ಬಿ. ಪ್ರಶಾಂತ್ ಭಟ್, ಸುರೇಂದ್ರ ಇವರನ್ನೊಳಗೊಂಡ ನೂತನ ತಾಲೂಕು ಸಮಿತಿಯನ್ನು ರಚಿಸಲಾಯಿತು.

ನೂತನ ಕಾರ್ಯದರ್ಶಿ ಪಿ.ವಿಶ್ವನಾಥ್ ವಂದಿಸಿದರು.

ಕುಂದಾಪುರ ಸಮ್ಮೇಳನ

ಇಂದು ನಮ್ಮ ದೇಶಕ್ಕೆ ಇರುವ ಸಮಸ್ಯೆ ಧರ್ಮವಲ್ಲ, ನಿರುದ್ಯೋಗ, ಬಡತನ, ದಾರಿದ್ರ್ಯ ಶೋಷಣೆ ಮುಂತಾದ ಹತ್ತು ಹಲವಾರು ಸಮಸ್ಯೆಗಳಿರುವಾಗ ಧರ್ಮವನ್ನೆತ್ತಿ ದೇಶ ಒಡೆಯುವುದು ಸರಿಯಲ್ಲ. ಆದ್ದರಿಂದ ಯುವಜನತೆ ರಾಷ್ಟ್ರೀಯ ಐಕ್ಯತೆ ಸಮಗ್ರತೆ ರಕ್ಷಿಸಲು ಪಣ ತೊಡಬೇಕು. ಕೋಮುಶಕ್ತಿಗಳ ವಿರುದ್ಧ ಹೋರಾಟ ಮಾಡಬೇಕೆಂದು ಮಂಗಳೂರು ಸಮುದಾಯದ ಫಣಿರಾಜ್ ಕರೆ ನೀಡಿದರು. ಅವರು ಇತ್ತೀಚೆಗೆ ಕುಂದಾಪುರ ತಾಲೂಕು ಡಿವೈಎಫ್‌ಐ 5ನೇ ಸಮ್ಮೇಳನ ಉದ್ಘಾಟಿಸುತ್ತಾ ಮಾತನಾಡಿದರು.

ಸಮ್ಮೇಳನದ ಧ್ವಜಾರೋಹಣವನ್ನು ಮಾಡಿ ಮಾತನಾಡಿದ ಕುಂದಾಪುರ ಪುರಸಭಾ ಸದಸ್ಯರಾದ ಅಬ್ರಹಾಂ ಕರ್ಕಡ ಕೋಮು ಶಕ್ತಿಗಳನ್ನು ನಿಗ್ರಹಿಸದಿದ್ದರೆ ಅಪಾಯ ಖಂಡಿತ ಎಂದು ಹೋರಾಟ ಅಣಿಯಾಗುವಂತೆ ಯುವ ಜನರಿಗೆ ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಡಿವೈಎಫ್‌ಐ ದ.ಕ. ಜಿಲ್ಲಾಧ್ಯಕ್ಷ ವಸಂತ ಆಚಾರಿ ಮಾತನಾಡಿ ಯುವ ಜನತೆ ಸಮಾಜದ ಅನಿಷ್ಟಗಳ ವಿರುದ್ಧ ಹೋರಾಡಿ ಸಮಾನತೆಯ ಸಮಾಜ ಸೃಷ್ಟಿಸಬೇಕೆಂದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಮಹಾಬಲ ವಡೇರಹೋಬಳಿ ವಹಿಸಿದ್ದರು. ಸಮ್ಮೇಳನಕ್ಕೆ ಶುಭ ಕೋರಿ ಕಾರ್ಮಿಕ ಮುಖಂಡರಾದ ಕೆ.ಶಂಕರ, ಸಿ.ನಾರಾಯಣ ಮತ್ತು ಪಿ.ಎಸ್.ಟಿ ಮುಖಂಡ ಮುಕುಂದನ್ ಮಾತನಾಡಿದರು.

ಸಮ್ಮೇಳನದಲ್ಲಿ ಕೇಂದ್ರ ಸರಕಾರದ ಹೊಸ ಆರ್ಥಿಕ, ಕೈಗಾರಿಕಾ ನೀತಿಯನ್ನು ಖಂಡಿಸಿ ಕೋಮು ಶಕ್ತಿಗಳ ದಮನಕಾರಿ ನೀತಿಯನ್ನು ಖಂಡಿಸಿ, ಮಂಗಳೂರು ತೈಲಾಗಾರವನ್ನು ಕೂಡಲೇ ಮಾಡಲು ಆಗ್ರಹಿಸಿ ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಒಳಚರಂಡಿ ನಿರ್ಮಿಸುವಂತೆ ಮತ್ತು ಕುಂದಾಪುರದಲ್ಲೊಂದು ಸ್ಟೇಡಿಯಂ ನಿರ್ಮಾಣ ಮಾಡುವಂತೆ ಸಮ್ಮೇಳನವು ಆಗ್ರಹಿಸಿತು.

ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ರಾಜೀವ್ ಪಡುಕೋಣೆ, ಕಾರ್ಯದರ್ಶಿ ಎಚ್.ನರಸಿಂಹ, ಉಪಾಧ್ಯಕ್ಷರಾಗಿ ಮಹಾಬಲ ವಡೇರಹೋಬಳಿ, ದೇಬಿ ಅರಾಟೆ, ಶೇಖರ ಬಚ್ಚ ರಸ್ತೆ, ಜೊತೆ ಕಾರ್ಯದರ್ಶಿಯಾಗಿ ರಮಾನಂದ ಭಂಡಾರಿ, ಬಾಲಕೃಷ್ಣ, ಎಂ.ವಿ.ಚಂದ್ರಶೇಖರ, ಖಜಾಂಚಿಯಾಗಿ ಉತ್ಪಳ ಕೆ.ಕ್ರೀಡಾ ಕಾರ್ಯದರ್ಶಿಯಾಗಿ ಪಿ.ಶ್ರೀಧರ ಆಚಾರ್, ಶಾಹುಲ್ ಹಮೀದ್ ಇವರನ್ನು ಆಯ್ಕೆ ಮಾಡಲಾಯಿತು. ಸಭೆಗೆ ಎಚ್.ನರಸಿಂಹ ಸ್ವಾಗತಿಸಿ ಧನ್ಯವಾದ ಅರ್ಪಿಸಿದರು.

ಹರೇಕಳ ಡಿವೈಎಫ್‌ಐ ಸಮ್ಮೇಳನ

ತಾರೀಕು 3-1-93ನೇ ಆದಿತ್ಯವಾರ ಡಿವೈಎಫ್‌ಐ ಹರೇಕಳ ಘಟಕದ ದ್ವಿತೀಯ ಸಮ್ಮೇಳನವು ಬಿ.ಬಾಬು, ಮಾಜಿ ಮಂಡಲ ಉಪ ಪ್ರಧಾನ ಇವರಿಂದ ಉದ್ಘಾಟಿಸಲ್ಪಟ್ಟಿತು. ನೆಲ್ಸನ್ ರೋಜ್, ಡಿವೈಎಫ್‌ಐ ನಗರ ಸಮಿತಿ ಉಪಾಧ್ಯಕ್ಷ ಇವರ ಅಧ್ಯಕ್ಷತೆಯಲ್ಲಿ ಬೆಳಗ್ಗಿನ ಶಿಬಿರದಲ್ಲಿ ಕೆ.ಫಣಿರಾಜ್ ಸಮುದಾಯ ಕಾರ್ಯದರ್ಶಿ ಇವರಿಂದ ಕೋಮುವಾದ ಎಂಬ ವಿಷಯದ ಬಗ್ಗೆ ಭಾಷಣ ನಡೆಯಿತು.

ಸಂಜೆ ಬಹಿರಂಗ ಸಭೆಯ ಡಿವೈಎಫ್‌ಐ ಜಿಲ್ಲಾಧ್ಯಕ್ಷ ವಸಂತ ಆಚಾರಿಯವರು ಕೆ.ನಾರಾಯಣ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಕಾಂ.ಯಾದವಶೆಟ್ಟಿ ಡಿವೈಎಫ್‌ಐ ನಗರ ಸಮಿತಿಯ ಉಪಾಧ್ಯಕ್ಷ ನೆಲ್ಸನ್ ರೋಜ್, ಡಿವೈಎಫ್‌ಐ ಅಧ್ಯಕ್ಷ ಹುಸೈನ್ ಪಾವೂರ್, ಕೆ.ಮಹಾಬಲ ರೈ, ಕೆ.ಮಂಜಪ್ಪ ಭಂಡಾರಿ ಮತ್ತು ರಾಮ ಕುಕ್ಯಾನ್ ಉಪಸ್ಥಿತರಿದ್ದರು. ಸಭೆಯಲ್ಲಿ ಆಕ್ರಮ ಜಾಗದ ಸಕ್ರಮೀಕರಣ ಗ್ರಾಮ ಛಾವಡಿಯಿಂದ ಕಡವಿನ ಬಳಿಯವರೆಗೆ ರಸ್ತೆಗೆ ಡಾಮರೀಕರಣ, ಹರೇಕಳ ಕಡವಿನ ಬಳಿಯ ಸಾರ್ವಜನಿಕ ಬಾವಿಯ ದುರಸ್ತಿಯೊಂದಿಗೆ ಪೋದಾರ್ ಸೈಟಿಗೆ ನಲ್ಲಿ ನೀರಿನ ವ್ಯವಸ್ಥೆ ಮುಂತಾದ ನಿರ್ಣಯ ಕೈಗೊಳ್ಳಲಾಯಿತು. 1993ನೇ ಸಾಲಿಗೆ ಹುಸೈನ್ ಪಾವೂರ್ [illegible]

KRNM/BGS-405 MAG(2) PRB DECR 319-78/79



ನಿಲ್ಲದ ಸಾವಿನ ತಾಂಡವ

.... ಪುಟ 1ರಿಂದ

ಎಲ್.ಕೆ. ಅಡ್ವಾಣಿಯವರು ಹರಡಲಾರಂಭಿಸಿದ ಹೊಸ ಸುಳ್ಳುಗಳು ಪತ್ರಿಕೆಯ ಮೂಲಕ ಜನಗಳಿಗೆ ತಲುಪುವಷ್ಟರಲ್ಲೇ ಬಟ್ಟಬಯಲಾಗುತ್ತಿವೆ. ಮಧುಕರ್ ಸರಪೋತದಾರ್‌ರಂತಹ ಹಿರಿಯ ಶಿವಸೇನೆ ಎಂ.ಎಲ್.ಎ. ಬಳಿ ಸೇನೆಯ ಮಂದಿ ಬಂದೂಕು ಹಾಗೂ ಇತರ ಮಾರಕಾಸ್ತ್ರಗಳನ್ನು ಪಡೆದ ಘಟನೆ, ಮಹಾರಾಷ್ಟ್ರ ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕನೆನಿಸಿರುವ ಬಿ.ಜೆ.ಪಿ.ಯ ಗೋಪಿನಾಥ್ ಪಾಂಡೆಯವರ ಆಪ್ತ ಕಾರ್ಯದರ್ಶಿಯ ಕಾರಿನಲ್ಲೂ ಇಂತಹ ಮಾರಕಾಸ್ತ್ರಗಳು ಸಿಕ್ಕಿದ ಘಟನೆ ಅಡ್ವಾಣಿ "ಬಿ.ಜೆ.ಪಿ. ಮಾತ್ರವೇ ಕೋಮುಸಾಮರಸ್ಯ ಕಾಪಾಡಬಲ್ಲ ಪಕ್ಷ " ಎಂದು ಹೇಳಿದುವರ ಹಿಂದಿರುವ ನಾಚಿಕೆಗೇಡಿತನವನ್ನು ಬೀದಿಗೆಳೆದವರೆ, ಕಾವಿಪಡೆಗಳ ಧಾಳಿ ಮುಸ್ಲಿಮರ ವಿರುದ್ಧ ಮಾತ್ರವಲ್ಲ ದಕ್ಷಿಣ ಭಾರತದೆಲ್ಲಾ ಜನಗಳ ವಿರುದ್ಧ ನಡೆದಿರುವ ಘಟನೆ. ಅದೇ ಬಿ.ಜೆ.ಪಿ. ಮುಖಂಡ ಅದೇ ಪತ್ರಿಕಾಸಮ್ಮೇಳನದಲ್ಲಿ ಉದ್ಗರಿಸಿದ "ಎಲ್ಲ ತಪ್ಪನ್ನು ಅಯೋಧ್ಯಾ ಘಟನೆಯ ಮೇಲೆ ಹಾಕದೇಡಿ. ಅಯೋಧ್ಯಾ ಘಟನೆ ವಿಚ್ಛಿದ್ರಕಾರೀ ಶಕ್ತಿಗಳಿಗೊಂದು ಸವಾಲು" ಎಂದಿರುವ ಅಣಿಮುತ್ತು ಎಂತಹ ಕೃತಕ ಮತ್ತು ಕಾವಿಪಡೆಗಳ ಕಪಟತನದ ದ್ಯೋತಕ. ಇತ್ತೀಚೆಗೆ ಮೂರು ನಾಲ್ಕುದಿನ ದೆಂಗಳೂರಿಗೆ ಮುಂಬೈಯಿಂದ ಬರುವ ಉದ್ಯಾನ್ ಎಕ್ಸ್‌ಪ್ರೆಸ್ ಹಾಗೂ ಕುರ್ಲಾ ಎಕ್ಸ್‌ಪ್ರೆಸ್‌ಗಳಲ್ಲಿ ಎಂದಿಗಿಂತ ಮೂರು ಪಟ್ಟು ಹೆಚ್ಚು ಪ್ರಯಾಣಿಕರು. ಕಾವಿ ಪಡೆಗಳ ದಾಕ್ಷಿಣಾತ್ಯ ವಿರೋಧಿ ಆಟಾಟೋಪಗಳಿಂದ ಜೀವವುಳಿಸಿಕೊಳ್ಳಲು ಬರುತ್ತಿರುವ ಮಂದಿಯುಲ್ಲವೆ. 'ಹಿಂದುತ್ವ' ಎಷ್ಟೊಂದು ಸಂಕುಚಿತ ಪರಿಕಲ್ಪನೆ, ಕೇವಲ ಅಧಿಕಾರಕ್ಕೆ ಏಣಿಯಾಗಿರುವ ದುರುಳ ವಿಚಾರ ಎಂಬುವಕ್ಕೆ ಜೀವಂತ ಸಾಕ್ಷಿಗಳು:

ಕಾವಿ ಪಡೆಗಳ ದುರುಳತನವನ್ನು ಮುಂಬೈನ ಈ ಎರಡನೇ ಸುತ್ತಿನ ಹಿಂಸಾಚಾರಗಳು ಮತ್ತೊಮ್ಮೆ ಬಯಲಿಗೆಳೆದಿರುವಂತೆ ನರಸಿಂಹರಾವ್ ಸರಕಾರ, ಕಾಂಗ್ರೆಸ್ (ಐ) ಇನ್ನೂ ತಮ್ಮ ಕ್ರಿಮಿನಲ್ ಎಡಬಿಡಂಗಿತನ ಬಿಡದೆ ದೇಶಕ್ಕೆ ದೇಶದ ಐಕ್ಯತೆಗೆ ಎಂತಹ ಹಾನಿ ತರುತ್ತಿದ್ದಾರೆ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಎಲ್ಲಾ ಸುಟ್ಟು ಹೋದ ಮೇಲೆ ನರಸಿಂಹರಾಯರು ಮುಂಬೈಗೆ ಹೋದರು, ಬಂದರು. ಅಲ್ಪಸಂಖ್ಯಾತರ, ಇತರರ ಜೀವ ರಕ್ಷಿಸಲಾಗದ ಹೊಣೆಗೇಡಿ ಮಹಾರಾಷ್ಟ್ರ ಮುಖ್ಯಮಂತ್ರಿ ರಾಜೀನಾಮೆ ನೀಡದೇಕೆಂದು ಎಲ್ಲಾ ಕಡೆಗಳಿಂದ ಒತ್ತಾಯ ಬಂದರೂ ತುಟಿಪಿಟಕೆನ್ನುತ್ತಿಲ್ಲ. ಶಿವಸೇನೆ ಇಷ್ಟೊಂದು ದೊಡ್ಡ ಪಾತ್ರವಹಿಸುತ್ತಿದ್ದರೂ ಶಸ್ತ್ರಾಸ್ತ್ರ ಸಹಿತ ಸಿಕ್ಕಿಬಿದ್ದ ಎಂ.ಎಲ್.ಎಯನ್ನು ಬಂಧಿಸಲೂ ಹಿಂಜರಿಯುವ ಮಂದಿ ನಾಚಿಕೆಯಿಲ್ಲದೆ ಇನ್ನೂ ಅಧಿಕಾರದಲ್ಲಿ ಮುಂದುವರಿಯುತ್ತಿದ್ದಾರೆ.

ಎಡಪಕ್ಷಗಳ ಆಗ್ರಹ

.... ಪುಟ 1 ರಿಂದ

ವರು.

ಗಲಭೆಯು ಹೊಸ-ಹೊಸ ಪ್ರದೇಶಗಳಿಗೆ ಹರಡಿ ಅಲ್ಪಸಂಖ್ಯಾತರ ಅಂಗಡಿ, ಮನೆಗಳು ವಿಧ್ವಂಸಕ್ಕೆ ಗುರಿಯಾಗುತ್ತಿವೆ. ಪತ್ರಕರ್ತರ ಮನೆಗಳನ್ನು ಬಿಡುತ್ತಿಲ್ಲ. ಗಲಭೆಗ್ರಸ್ತ ಪ್ರದೇಶಗಳಲ್ಲಿ ಜನಗಳಿಗೆ ಆಹಾರವಸ್ತುಗಳ ತೀವ್ರ ಕೊರತೆಯಾಗಿದೆ. ಶಿವಸೇನೆಗೆ ತನ್ನ 'ಮಹಾ ಆರತಿ'ಗಳನ್ನು ಯಾವ ಅಡೆ--ತಡೆಯೂ ಇಲ್ಲದೆ ನಡೆಸಲು, ಹಿಂಸಾಚಾರವನ್ನು ನಡೆಸಲು ಪೂರ್ಣ ಅವಕಾಶ ಕೊಡಲಾಗಿದೆ ಎಂದೂ ಮನವಿ ಆಪಾದಿಸಿದೆ.

ತಕ್ಷಣ ಮಹಾರಾಷ್ಟ್ರದ ಮುಖ್ಯಮಂತ್ರಿಯನ್ನು ತೆಗೆದುಹಾಕಬೇಕೆಂದು ಆಗ್ರಹ ಪಡಿಸಿರುವ ಮನವಿ ಕೆಲವು ಪ್ರದೇಶಗಳಲ್ಲಿ ಸೇನಾ ತುಕಡಿಗಳನ್ನು ನಿಲ್ಲಿಸಿದ್ದರೂ ಆಡಳಿತ ಮತ್ತು ಪೋಲೀಸ್ ವಿಭಾಗ ಅವುಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಿಲ್ಲ ಎನ್ನುತ್ತಾ ಮುಂಬೈ ನಗರವನ್ನು ಸೇನೆಯ ವಶಕ್ಕೆ ಕೊಡಬೇಕೆಂದು ಎಡ ಪಕ್ಷಗಳ ನಿಯೋಗ ಮನವಿ ಮಾಡಿದೆ. ಮುಖ್ಯಮಂತ್ರಿ ಸುಧಾಕರ್ ನಾಯಕ್‌ರಲ್ಲಿ ಒಂದಿಷ್ಟೂ ವಿಶ್ವಾಸಾರ್ಹತೆ ಉಳಿದಿಲ್ಲ, ಅವರು ತಕ್ಷಣ ರಾಜೀನಾಮೆ ನೀಡದೇಕೆಂದು ನಿಯೋಗದಲ್ಲಿದ್ದ ನಾಯಕರಾದ ಪ್ರಕಾಶ್‌ಕಾರಾಟ್, ಸೀತಾರಾಂ ಯೆಚೂರಿ, ಸೋಮನಾಥ್ ಚಟರ್ಜೀ, ಇಂದ್ರಜಿತ್ ಗುಪ್ತಾ ಹಾಗೂ ಎಂ. ಫಾರುಕಿ ಹೇಳಿದ್ದಾರೆ.

ಇದಕ್ಕೆ ಮೊದಲು ಜನವರಿ 9 ರಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹಾಗೂ ಸಿಪಿಐ ಕೇಂದ್ರ ಕಾರ್ಯದರ್ಶಿ ಮಂಡಳಿ ಒಂದು ಜಂಟಿ ಹೇಳಿಕೆ ನೀಡಿ ಮುಂಬೈ, ಅಹಮದಾಬಾದ್‌ಗಳಲ್ಲಿ ಹಿಂದೂ ಕೋಮುವಾದಿಗಳು ಹಾಗೂ ಮುಸ್ಲಿಂ ಮೂಲಭೂತವಾದಿಗಳು ಮತ್ತೆ ಕೋಮುಹಿಂಸಾಚಾರಕ್ಕೆ ತಿದಿಯೂದುತ್ತಿದ್ದಾರೆ ಎಂದು ಬಲವಾಗಿ ಟೀಕಿಸುತ್ತಾ ಮಹಾರಾಷ್ಟ್ರ ಸರ್ಕಾರ ಇದನ್ನು ತಡೆಯುವಲ್ಲಿ ಸಂಪೂರ್ಣ ವಿಫಲಗೊಂಡಿದೆ ಎಂದಿದ್ದಾರೆ. ಕಾವಿಪಡೆಗಳು ಮತ್ತು ಮುಸ್ಲಿಂ ಮೂಲಭೂತವಾದಿಗಳು ಪರಸ್ಪರ ಒಬ್ಬರು ಇನ್ನೊಬ್ಬರಿಗೆ ಆಹಾರ ಒದಗಿಸುತ್ತಾ ನಮ್ಮ ಸಾಮಾಜಿಕ ಜೀವನವನ್ನೇ ಚಿಂದಿ ಮಾಡುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದ್ದರು. ಎಲ್ಲಾ ದೇಶ ಪ್ರೇಮಿ ಶಕ್ತಿಗಳು ಈ ಕೋಮುಶಕ್ತಿಗಳ ವಿರುದ್ಧ ಒಂದಾಗಿ ಎದ್ದು ನಿಲ್ಲಬೇಕೆಂದು ಅವರು ಕರೆ ನೀಡಿದ್ದರು.

ಜನವರಿ 11 ರಂದು ಸಿಪಿಐ(ಎಂ), ಸಿಪಿಐ, ಹಾಗೂ ಜನತಾದಳ ಮುಖಂಡರು ರಾಷ್ಟ್ರಪತಿಗಳನ್ನು ಭೇಟಿಮಾಡಿ ಮುಂಬೈ, ಅಹಮದಾಬಾದ್‌ಗಳಲ್ಲಿನ ಗಂಭೀರ ಪರಿಸ್ಥಿತಿಯತ್ತ ಗಮನಸೆಳೆದರು. ಶಿವಸೇನೆಯಂತಹ ಕೋಮುಶಕ್ತಿಗಳು ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ಅಲ್ಪಸಂಖ್ಯಾತರ ಮೇಲೆ ಧಾಳಿ ಮಾಡುತ್ತಿವೆ. ಉರ್ದು ಪತ್ರಿಕೆಗಳಲ್ಲಿ ದುಡಿಯುವ ಹಲವಾರು ಮುಸ್ಲಿಂ ಪತ್ರಕರ್ತರ ಮನೆಗಳ ಪಟ್ಟಿಮಾಡಿ ಆರಿಸಿ--ಆರಿಸಿ ದಾಳಿ ಮಾಡಲಾಗಿದೆ ಎಂದು ಈ ಮುಖಂಡರು ರಾಷ್ಟ್ರಪತಿಗಳ ಗಮನಕ್ಕೆ ತಂದರು.

ಮಹಾರಾಷ್ಟ್ರದ ಮುಖ್ಯಮಂತ್ರಿ ಹಾಗೂ ಕೇಂದ್ರ ಸರಕಾರ ಇಂತಹ ಗಂಭೀರ ಸನ್ನಿವೇಶ ಎದುರಿಸುವಲ್ಲಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿವೆ. ರಾಷ್ಟ್ರಪತಿಗಳು ಮಧ್ಯಪ್ರವೇಶ ಮುಂಬೈನಗರವನ್ನು ಸೇನೆಯ ವಶಕ್ಕೆ ನೀಡಬೇಕೆಂದು ಈ ಮುಖಂಡರು ಆಗ್ರಹಪಡಿಸಿದರು.

ರಾಷ್ಟ್ರಪತಿಗಳು ಗಂಭೀರ ಪರಿಸ್ಥಿತಿಯ ಬಗ್ಗೆ ತನ್ನ ಆತಂಕ ವ್ಯಕ್ತಪಡಿಸಿದರು.

.... ದೇಶಾದ್ಯಂತ ಬೆಂಬಲ

.... ಪುಟ 1ರಿಂದ

ತೆಯನ್ನು, ಕೋಮುಸಾಮರಸ್ಯವನ್ನು ಕಾಪಾಡಲು ಅವರನ್ನು ಅಣಿನೆರೆಸಬೇಕು ಎಂದರು. ಜೆ.ಹೆಚ್.ಪಟೇಲ್ ಪ್ರತಿಜ್ಞೆಯನ್ನು ಓದಿ ಹೇಳಿದಾಗ ಅಲ್ಲಿ ನೆರೆದವರೆಲ್ಲರೂ ಈ ಪ್ರತಿಜ್ಞೆ ಕೈಗೊಂಡರು.

ಇತರ ರಾಜ್ಯಗಳಲಿ

ರಾಷ್ಟ್ರೀಯ ಏಕತಾ ಆಂದೋಳನದ ಕರೆಗೆ ದೇಶಾದ್ಯಂತ ಭಾರೀ ದೆಂಬಲ ವ್ಯಕ್ತಪಟ್ಟಿದೆ ಎಂದು ಆಂದೋಳನದ ಕೇಂದ್ರ ಕಚೇರಿಗೆ ಬಂದ ವರದಿಗಳಿಂದ ತಿಳಿದುಬಂದಿದೆ. ಜನವರಿ 5 ರಂದು ಸಭೆ ಸೇರಿದ ಉತ್ತರಪ್ರದೇಶ ರಾಜ್ಯಮಟ್ಟದ ಸಮಿತಿ ಜವರಿ 26 ನ್ನು ರಾಷ್ಟ್ರೀಯ ಐಕ್ಯತಾ ದಿನವಾಗಿ ಆಚರಿಸಲು ನಿರ್ಧರಿಸಿದೆ. ಫೆಬ್ರವರಿ 2 ರಂದು ವಾರಣಾಸಿಯಲ್ಲಿ ಬೃಹತ್‌ರ್‍ಯಾಲಿ ನಡೆಯಲಿದೆ.

ತಮಿಳುನಾಡಿನಲ್ಲಿ ಜನವರಿ 20 ರಂದು ರಾಜ್ಯಾದ್ಯಾಂತ ಮಾನವ ಸರಪಳಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೃಹತ್ ಸಹಿಸಂಗ್ರಹಣಾ ಚಳುವಳಿ ಫೆಬ್ರವರಿ ತಿಂಗಳಲ್ಲಿ ನಡೆಯುತ್ತದೆ. ಜನವರಿ 31 ರಂದು ಮದ್ರಾಸಿನಲ್ಲಿ ಬೃಹತ್ ರ್‍ಯಾಲಿ ನಡೆಯುತ್ತದೆ.

ಕೇರಳದಲ್ಲಿ ಜನವರಿ 8 ರಂದು ರಾಜ್ಯ ಸಮಾವೇಶ ನಡೆದಿದೆ. ಜನವರಿ 13 ರಂದು ರಾಜ್ಯದ ಹಲವಾರು ಕಡೆ ನೂರಾರು ಮಂದಿ ಉಪವಾಸ ಕೈಗೊಳ್ಳಲಿದ್ದರು. ಜನವರಿ 18 ರಿಂದ 21 ರವರೆಗೆ ಸಹಿ ಸಂಗ್ರಹಣಾ ಚಳುವಳಿ ನಡೆಯುತ್ತದೆ. ಜನವರಿ 24, 26,30 ರಂದು ಜಿಲ್ಲಾ ಮಟ್ಟದ ರ್‍ಯಾಲಿಗಳು ನಡೆಯುತ್ತವೆ.

ಪಶ್ಚಿಮಬಂಗಾಳದಲ್ಲಿ ಸಹಿಸಂಗ್ರಹ ಚಳುವಳಿ ಆರಂಭವಾಗಿದೆ. ಜನವರಿ 26 ರ ಮಾನವ ಸರಪಳಿಯಲ್ಲಿ 2 ಕೋಟಿ ಜನ ಭಾಗವಹಿಸಲಿದ್ದಾರೆ.

ರಾಷ್ಟ್ರೀಯ ಏಕತಾ ಆಂದೋಳನ

ರಚಿಸಲು ನಿರ್ಧರಿಸಿದ ಡಿಸೆಂಬರ್ 9 ರ ನವದೆಹಲಿ ಸಮಾವೇಶದಲ್ಲಿ ಭಾಗವಹಿಸಿದ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು.

ರಾಜಕೀಯ ಪಕ್ಷಗಳು

ಸಿ.ಪಿ.ಐ(ಎಂ), ಸಿ.ಪಿ.ಐ., ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ., ಜನತಾದಳ, ಸಮಾಜವಾದೀ ಪಕ್ಷ, ಎಸ್.ಜೆ.ಪಿ., ಜನತಾದಳ(ಅಜಿತ್), ತೆಲುಗುದೇಶಂ, ನ್ಯಾಶನಲ್ ಕಾನ್ಫರೆನ್ಸ್, ಐ.ಪಿ.ಎಫ್

ಸಾಮೂಹಿಕ ಸಂಘಟನೆಗಳು

1. ಸಿ.ಐ.ಟಿ.ಯು 2. ಎ.ಐ.ಟಿ.ಯು.ಸಿ. 3. ಟಿ.ಯು.ಸಿ.ಸಿ. 4. ಯು.ಟಿ.ಯು.ಸಿ. 5. ಎ.ಐ.ಸಿ.ಸಿ.ಟಿ. ಯು 6 ಹೆಚ್. ಎಂ.ಎಸ್. 7. ಎ.ಐ.ಕೆ.ಎಸ್. 8. ಎ.ಐ.ಕೆ.ಎಸ್.(-ಅಜಯ್‌ಭವನ) 9. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ. 10 ಖೇತ್ ಮಜ್ದೂರ್ ಯೂನಿಯನ್ 11. ಅಗ್ರಗಾಮಿ ಕಿಸಾನ್ ಸಭಾ 12. ಡಿ.ವೈ.ಎಫ್. ಐ. 13. ಎ.ಐ.ವೈ.-ಎಫ್. 14 ಆರ್.ವೈ. ಒ. 15. ಎ.ಐ.ಎಸ್.ಬಿ. 16. ಎ.ಐ.ಡಿ.ಡಬ್ಲ್ಯು.ಎ 17. ಎಸ್.ಎಫ್.ಐ. ಡಬ್ಲ್ಯು. 18. ಮಹಿಳಾ ದಕ್ಷತಾ ಸಮಿತಿ. 19. ಎಸ್.ಎಫ್.ಐ. 20. ಎ.ಐ.ಎಸ್.ಎಫ್. 21. ಛಾತ್ರ ಜನತಾ 22. ಯುವ ಜನತಾ 23. ಅಖಿಲ ಭಾರತ ಪ್ರಗತಿಪರ ಲೇಖಕರ ಸಂಘ 24. ಜನವಾದಿ ಲೇಖಕ ಸಂಘ

25. ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಂಘ 26. ಬಿ.ಇ.ಎಫ್.ಐ. 27. ಎ.ಐ.ಬಿ.ಇ.ಎ. 28. ಇಪ್ಟಾ 29. ಅಖಿಲ ಭಾರತ ಪತ್ರಿಕಾ ನೌಕರರ ಸಂಘ 30. ಸಹಮತ್ 31. ಅಖಿಲ ಭಾರತ ವಕೀಲರ ಸಂಘ

32. ಅಖಿಲ ಭಾರತ ವಿ.ವಿ., ಕಾಲೇಜು ಅಧ್ಯಾಪಕರ ಒಕ್ಕೂಟ 33. ಎ.ಐ.ಪಿ.ವಿ.-ಎಸ್.ಒ. 34. ದೂರ ಸಂಪರ್ಕ ನೌಕರರ ಒಕ್ಕೂಟ 35. ಎ.ಐ.ವೈ.ಎಸ್.

ಉಗ್ರಗಾಮಿಗಳ ಮೇಲಿನ ಧಾಳಿಯಲ್ಲಿ ಮುಗ್ಧ ಜನರ ಕೊಲೆ - ಪೊಲಿಟ್‌ಬ್ಯೂರೋ

ಕಾಶ್ಮೀರ ಕಣಿವೆಯ ಸೊಪೋರ್‌ನಲ್ಲಿ ಐವತ್ತಕ್ಕೂ ಹೆಚ್ಚು ಜನರ ಕೊಲೆಗೆ ಕಾರಣವಾದ ಘಟನೆಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಒಬ್ಬ ಭದ್ರತಾ ಪಡೆಯ ಸಿಬ್ಬಂದಿಯ ಸಾವಿನಿಂದಾಗಿ ಭದ್ರತಾ ಪಡೆಗಳು ಮತ್ತು ಉಗ್ರಗಾಮಿಗಳು ನಡುವೆ ಒಂದಿಡೀ ದಿನ ನಡೆಯಿತೆನ್ನಲಾದ ಸಶಸ್ತ್ರ ಘರ್ಷಣೆ ಅತ್ಯಂತ ದುರಂತದ ಸಂಗತಿ. ಹೀಗೆ ಉಗ್ರಗಾಮಿಗಳಿಗೆ ವ್ಯಾಪಕ ಪ್ರತ್ಯುತ್ತರ ನೀಡುವಾಗ ಸಾಮಾನ್ಯವಾಗಿ ಬಹಳಷ್ಟು ಮುಗ್ಧ ಜನಗಳೇ ಬಲಿಯಾಗುತ್ತಾರೆಂಬುದೂ ಇರುವರೆಗಿನ ಅನುಭವ. ಇದರಿಂದ ಕಾಶ್ಮೀರ್ ಕಣಿವೆಯಲ್ಲಿ ಉಗ್ರಗಾಮಿಗಳನ್ನೂ ಜನರಿಂದ ದೂರಮಾಡುವ ಬದಲು ಇಂತಹ ಕ್ರಮಗಳಿಂದ ಜನಗಳನ್ನು ಭಾರತದಿಂದ ದೂರ ಮಾಡುತ್ತಿದೆ. ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು, ಈ ಘಟನೆಯಲ್ಲಿ ಸತ್ತವರ ಕುಟುಂಬಗಳಿಗೆ ತಕ್ಷಣ ಪರಿಹಾರ ಒದಗಿಸಬೇಕು ಎಂದು ಪಿ.ಬಿ. ಒತ್ತಾಯಿಸಿದೆ.

ರಾಜ್ಯದಲ್ಲಿ ಕೋಮು ಸೌಹಾರ್ದತಾ ವಾರ

ಕರ್ನಾಟಕದಲ್ಲಿ ಜನವರಿ 25 ರಿಂದ 30 ರವರೆಗೆ ಕೋಮುಸೌಹಾರ್ದತಾ ವಾರ ಚರಿಸುವ ಕಾರ್ಯಕ್ರಮವನ್ನು ರಾಜ್ಯ ಸರಕಾರ ಹಮ್ಮಿಕೊಂಡಿದೆ. ವಿರೋಧ ಪಕ್ಷಗಳ ಮುಂದಾಳುಗಳೊಡನೆ ಮಾತುಕತೆಯ ನಂತರ ರಾಜ್ಯ ಸರಕಾರ ಈ ಬಗೆ ನಿರ್ಧರಿಸಿದೆ ಎಂದು ತಿಳಿದು ಬಂದಿದೆ. ಈ ಕಾರ್ಯಕ್ರಮದ ಅಂಗವಾಗಿ ಗಾಂಧೀಜಿ ಹುತಾತ್ಮರಾದ ದಿನ ಜನವರಿ 30 ರಂದು ಬೆಳಿಗ್ಗೆ 11 ಗಂಟೆಗೆ ರಾಜ್ಯದಾದ್ಯಂತ 2 ನಿಮಿಷಗಳ ಮೌನ ಆಚರಿಸಲಾಗುವುದು ಹಾಗೂ ಕೋಮು ಸೌಹಾರ್ದವನ್ನು ರಕ್ಷಿಸುವ ಬಗ್ಗೆ ರಾಷ್ಟ್ರೀಯ ಏಕತಾ ಆಂದೋಳನ ಅಂಗೀಕರಿಸಿದ ಪ್ರತಿಜ್ಞೆಯನ್ನು ಸ್ವೀಕರಿಸಲಾಗುವುದು ಎಂದು ತಿಳಿದು ಬಂದಿದೆ.



ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 1ನೇ ಅಡ್ಡರಸ್ತೆ, ತಿಮ್ಮಪ್ಪ ಗಾರ್ಡನ್ಸ್, ಸಂಪಗಿರಾಮನಗರ, ಬೆಂಗಳೂರು 560 027. ಫೋನ್ ನಂ. : [illegible]
ಸಂಪಾದಕರು : ಪಿ.ರಾಮಚಂದ್ರರಾವ್